ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 29 ಸೋಮವಾರ 2023

ಸಂಪುಟ: 44 | ಸಂಚಿಕೆ: 43 | ಪುಟಗಳು: 10


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹ 4

ಒಳಪುಟಗಳಲ್ಲಿ

ನೂತನ ಸಂಸತ್ ಭವನ ಲೋಕಾರ್ಪಣೆ







ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ನೂತನ ಸಂಸತ್ ಭವನಕ್ಕೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ತಮಿಳುನಾಡಿನ ಅಧೀನಂಗಳೊಂದಿಗೆ ಐತಿಹಾಸಿಕ ಸೆಂಗೋಲ್ ಅನ್ನು ಹೊತ್ತು ತಂದರು. ಬಳಿಕ ಸ್ಪೀಕರ್ ಆಸನದ ಬಳಿ ಸೆಂಗೋಲ್ ಅನ್ನು ಸ್ಥಾಪಿಸಿದ ಪ್ರಧಾನಿ ಮೋದಿ, ನಂತರ ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.


- ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದ ಭಾರತ
- ಸ್ಪೀಕರ್ ಆಸನದ ಬಳಿ ಸೆಂಗೋಲ್ ಸ್ಥಾಪಿಸಿದ ಪ್ರಧಾನಿ ಮೋದಿ

ನವದೆಹಲಿ,ಮೇ 28–ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ತಲೆಯೆತ್ತಿ ನಿಂತಿರುವ ಪ್ರಜಾಪ್ರಭುತ್ವದ ನೂತನ ದೇಗುಲ ಸಂಸತ್ ಭವನವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಲೋಕಾರ್ಪಣೆಗೊಳಿಸಿದರು.

ಬೆಳಗ್ಗೆ 7.15ಕ್ಕೆ ಸಾಂಪ್ರದಾಯಿಕ ಬಿಳಿ ಉಡುಗೆಯಲ್ಲಿ ಪ್ರಧಾನಿ ಮೋದಿ ಅವರು ಗೇಟ್ ನಂ.1ರಿಂದ ಸಂಸತ್ ಆವರಣಕ್ಕೆ ಆಗಮಿಸಿದರು. ಅವರನ್ನು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಸ್ವಾಗತಿಸಿದರು.

ಮಹಾತ್ಮ ಗಾಂಧಿ ಪ್ರತಿಮೆ ಪಕ್ಕದಲ್ಲಿ ಆಯೋಜಿಸಿದ್ದ ಪೂಜಾ ವಿಧಾನಗಳಲ್ಲಿ ಇಬ್ಬರೂ ಭಾಗಿಯಾದರು. ಕರ್ನಾಟಕದ ಶೃಂಗೇರಿ ಮಠದ ಪುರೋಹಿತರು ವೇದ ಘೋಷಗಳನ್ನು ಪಠಿಸಿದರು. ಹೊಸ ಸಂಸತ್ ಭವನದ ಉದ್ಘಾಟನಾ ಸಮಾರಂಭ ಸಾಂಗವಾಗಿ ನಡೆಯಲು "ಗಣಪತಿ ಹೋಮ" ನಡೆಸಲಾಯಿತು. ಪೂಜಾ ವಿಧಾನಗಳು ಮುಗಿದ ಬಳಿಕ ಬಹುಚರ್ಚಿತ ರಾಜದಂಡವಾದ 'ಸೆಂಗೋಲ್' ಅನ್ನು ತಮಿಳುನಾಡಿನ ▶ 3ನೇ ಪುಟಕ್ಕೆ

75 ರೂ. ನಾಣ್ಯ, ವಿಶೇಷ ಅಂಚೆ ಚೀಟಿ ಬಿಡುಗಡೆ



ನವದೆಹಲಿ: ನೂತನ ಸಂಸತ್ ಕಟ್ಟಡ ಉದ್ಘಾಟನೆ ಸ್ಮರಣಾರ್ಥ ಪ್ರಧಾನಿ ನರೇಂದ್ರ ಮೋದಿ 75 ರೂಪಾಯಿ ನಾಣ್ಯ ಹಾಗೂ ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದ್ದಾರೆ.

ಈ ನಾಣ್ಯವನ್ನು 4 ಲೋಹಗಳಿಂದ ಮಾಡಲಾಗಿದ್ದು, ಶೇ.50 ಬೆಳ್ಳಿ, ಶೇ.40 ತಾಮ್ರ, ಶೇ.5 ನಿಕ್ಕಲ್ ಮತ್ತು ಶೇ.5 ಸತುವನ್ನು ಈ ನಾಣ್ಯ ಹೊಂದಿದೆ. ನಾಣ್ಯದ ತೂಕ 35 ಗ್ರಾಂನಷ್ಟು ಹೊಂದಿರಲಿದೆ. ಇನ್ನು ಅದರ ವಿನ್ಯಾಸದ ಬಗ್ಗೆ ಹೇಳುವುದಾದರೆ ನಾಣ್ಯದ ಒಂದು ಬದಿಯಲ್ಲಿ ಅಶೋಕ ಸ್ತಂಭವಿದ್ದು, ಅದರ ಕೆಳಭಾಗದಲ್ಲಿ 75 ರೂ ಎಂದು ಬರೆಯಲಾಗಿದೆ. ಸಂಸತ್ ಸಂಕೀರ್ಣ ಮತ್ತು ಹೊಸ ಸಂಸತ್ತಿನ ಕಟ್ಟಡದ ಚಿತ್ರವನ್ನು ಈ ನಾಣ್ಯ ಹೊಂದಿದೆ. ನಾಣ್ಯವು 44 ಎಂಎಂ ವ್ಯಾಸವನ್ನು ಹೊಂದಿದ್ದು, ವೃತ್ತಾಕಾರದಲ್ಲಿದೆ.

ಹೆಚ್ಚಿನ ಸಚಿತ್ರ ವರದಿ ಪುಟ-3


ನೂತನ ಸಂಸತ್ ಭವನ ಕೇವಲ ಕಟ್ಟಡವಲ್ಲ, ಭಾರತದ 140 ಕೋಟಿ ಜನರ ಆಕಾಂಕ್ಷೆಯ ಸಂಕೇತ: ಮೋದಿ

ನವದೆಹಲಿ: ನೂತನ ಸಂಸತ್ ಭವನ ಕೇವಲ ಕಟ್ಟಡವಲ್ಲ, ಇದು ಭಾರತದ 140 ಕೋಟಿ ಜನರ ಆಕಾಂಕ್ಷೆಯ ಸಂಕೇತವಾಗಿದೆ. ಇದು ಭಾರತದ ಸಂಕಲ್ಪ ಕುರಿತು ಜಗತ್ತಿಗೆ ಸಂದೇಶ ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಹೇಳಿದ್ದಾರೆ.

ನೂತನ ಸಂಸತ್ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿಯವರು, ಪ್ರತಿಯೊಂದು ದೇಶದ ಅಭಿವೃದ್ಧಿ ಪಯಣದಲ್ಲಿ ಕೆಲವು ಕ್ಷಣಗಳು ಅಮರವಾಗುತ್ತವೆ. ಮೇ 28 ಕೂಡ ಭಾರತಕ್ಕೆ ಅಂತಹ ದಿನವಾಗಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕರ ತ್ಯಾಗ, ಬಲಿದಾನವಾಗಿದೆ. ಭಾರತ ದೇಶದ ಪ್ರಗತಿಗಾಗಿ ಅನೇಕ ಮಹನೀಯರು ಶ್ರಮಿಸಿದ್ದಾರೆ. ಭಾರತದ ವಿಕಾಸ ಯಾತ್ರೆಗೆ ಈ ಸಂಸತ್ ಭವನ ಸಾಕ್ಷಿಯಾಗಿದೆ. ಸರ್ವಧರ್ಮಗಳ ಪ್ರಾರ್ಥನೆಯಿಂದ ಸಂಸತ್ ಭವನ ನಿರ್ಮಾಣವಾಗಿದೆ. ನೂತನ ಸಂಸತ್ ಭವನ ಪ್ರಜಾಪ್ರಭುತ್ವದ ಮಂದಿರವಾಗಿದೆ. ಭಾರತ ಅಭಿವೃದ್ಧಿ ಹೊಂದಿದಂತೆಲ್ಲಾ ವಿಶ್ವ ಪ್ರಗತಿ ಮಾರ್ಗದತ್ತ ಸಾಗುತ್ತದೆ. ನೂತನ ಸಂಸತ್‌ನಲ್ಲಿ ಪವಿತ್ರ ರಾಜದಂಡ ಸೆಂಗೋಲ್ ಸ್ಥಾಪನೆಯಾಗಿದೆ. ಚೋಳ ಸಾಮ್ರಾಜ್ಯದಲ್ಲಿ ಸೆಂಗೋಲ್ ಕರ್ತವ್ಯ ಮತ್ತು ಸೇವೆಯ ಪ್ರತೀಕವಾಗಿದೆ. ತಮಿಳುನಾಡಿನಿಂದ ಬಂದ ಪುರೋಹಿತರ ಮಾರ್ಗದರ್ಶನದಲ್ಲಿ ▶ 3ನೇ ಪುಟಕ್ಕೆ

ಸಿವಿಲ್ ಸರ್ವಿಸಸ್ ಪೂರ್ವಭಾವಿ ಪರೀಕ್ಷೆ
5000ಕ್ಕೂ ಹೆಚ್ಚು ಮಂದಿ ಹಾಜರು



ಮೈಸೂರಲ್ಲಿ ಭಾನುವಾರ ಸಿವಿಲ್ ಸರ್ವಿಸಸ್ ಪ್ರಿಲಿಮಿನರಿ ಪರೀಕ್ಷೆ ನಡೆಯಿತು.

ಮೈಸೂರು,ಮೇ 28(ಆರ್‌ಕೆ)–ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (UPSC)ನಿಂದ ಮೈಸೂರಲ್ಲಿ ಭಾನುವಾರ ನಡೆದ ಸಿವಿಲ್ ಸರ್ವಿಸಸ್ ಪ್ರಿಲಿಮಿನರಿ ಪರೀಕ್ಷೆಗಳಿಗೆ ನೋಂದಣಿ ಮಾಡಿಸಿದ್ದ 5,611 ಮಂದಿ ಹಾಜರಾಗಿದ್ದರು.

ಮೈಸೂರಿನ ಮಹಾರಾಣಿ, ಮರಿಮಲ್ಲಪ್ಪ ಸದ್ವಿದ್ಯಾ, ವಿದ್ಯಾವರ್ಧಕ ಸೇರಿದಂತೆ 13 ಕೇಂದ್ರಗಳಲ್ಲಿ ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಗಳು ನಡೆದವು. ಬೆಳಗ್ಗೆ 9.30ರಿಂದ 11.30ರವರೆಗೆ ಜನರಲ್ ಸ್ಟಡೀಸ್ ಮತ್ತು ಮಧ್ಯಾಹ್ನ 2.30ರಿಂದ 4.30 ಗಂಟೆವರೆಗೆ ಸಿವಿಲ್ ಸರ್ವಿಸಸ್ ಆಟಿಟ್ಯೂಡ್ ಟೆಸ್ಟ್ ವಿಷಯಗಳ ಪರೀಕ್ಷೆಗಳು ನಡೆದವು.

ಸಿವಿಲ್ ಸರ್ವಿಸಸ್ ಪ್ರಿಲಿಮ್ಸ್ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಲಾಗಿತ್ತು. ಪರೀಕ್ಷಾರ್ಥಿಗಳು, ಅಧಿಕಾರಿಗಳನ್ನು ಹೊರತುಪಡಿಸಿ ಬೇರೆಯವರು ಪರೀಕ್ಷಾ ಕೇಂದ್ರಕ್ಕೆ ಸುಳಿಯದಂತೆ ಎಚ್ಚರ ವಹಿಸಲಾಗಿತ್ತು.

ಮೊಬೈಲ್ ಫೋನ್, ಎಲೆಕ್ಟ್ರಾನಿಕ್ಸ್ ಡಿವೈಸ್‌ಗಳನ್ನು ಪರೀಕ್ಷಾ ಕೇಂದ್ರಕ್ಕೆ ಕೊಂಡೊಯ್ಯದಂತೆ ಎಚ್ಚರ ವಹಿಸಲಾಗಿದ್ದು, ಪ್ರತೀ ಕೊಠಡಿಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ತೀವ್ರ ನಿಗಾ ವಹಿಸಲಾಗಿತ್ತು. ಪ್ರತೀ ಕೇಂದ್ರದ ಬಳಿ ಆಯಾ ವ್ಯಾಪ್ತಿಯ ಠಾಣೆಗಳ ಸಿಬ್ಬಂದಿಗಳನ್ನು ನಿಯೋಜಿಸಿ ಭಾರೀ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಜಿಲ್ಲಾಡಳಿತವು ಪ್ರಿಲಿಮಿನರಿ ಪರೀಕ್ಷೆಗೆ ಪರೀಕ್ಷಾ ಕೊಠಡಿ, ಸಿಬ್ಬಂದಿ, ಭದ್ರತಾ ವ್ಯವಸ್ಥೆ, ಪ್ರಶ್ನೆ ಪತ್ರಿಕೆ ಮತ್ತು ಆನ್ಸರ್ ಶೀಟ್‌ಗಳನ್ನು ಭಾರೀ ಬಂದೋಬಸ್ತ್‌ನೊಂದಿಗೆ ಜಿಲ್ಲಾ ಖಜಾನೆಯಿಂದ ಕೊಂಡೊಯ್ದು ತಲುಪಿಸಲು ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಮೇಲ್ವಿಚಾರಣೆಯಲ್ಲಿ ನಡೆದ ಪರೀಕ್ಷೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಕವಿತಾ ರಾಜಾರಾಂ ಅವರು ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ, ನೋಂದಣಿ ಸಂಖ್ಯೆ, ಕೊಠಡಿ ಸಂಖ್ಯೆಗಳನ್ನೊಳಗೊಂಡ ಮಾಹಿತಿ ಸೇರಿದಂತೆ ಪರೀಕ್ಷಾರ್ಥಿಗಳಿಗೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲಾಗಿತ್ತು.

ಕೆ.ಹೆಚ್.ರಾಮಯ್ಯ ಹಾಸ್ಟೆಲ್ ಹಿರಿಯ ವಿದ್ಯಾರ್ಥಿ ಸಂಘ ಉದ್ಘಾಟನೆ

ವಿದ್ಯಾರ್ಥಿನಿಲಯದ ಸೌಲಭ್ಯ ಸ್ಮರಿಸಿ ಕೃತಜ್ಞತೆ ಸಲ್ಲಿಸಿದ ಹಳೇ ವಿದ್ಯಾರ್ಥಿಗಳು





ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಹೃದಯಸ್ಪರ್ಶಿ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಶಂಕರಲಿಂಗೇಗೌಡ ಅವರು ಕೆ.ಹೆಚ್.ರಾಮಯ್ಯ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿದರು. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹಳೇ ವಿದ್ಯಾರ್ಥಿಗಳನ್ನು ಕಾಣಬಹುದು.

ಮೈಸೂರು, ಮೇ 28(ಆರ್‌ಕೆ)–ಮೈಸೂರಿನಲ್ಲಿ ಕೆ.ಹೆಚ್.ರಾಮಯ್ಯ ವಿದ್ಯಾರ್ಥಿ ನಿಲಯದ ಹಿರಿಯ ವಿದ್ಯಾರ್ಥಿ ಸಂಘ ಅಸ್ತಿತ್ವಕ್ಕೆ ಬಂದಿದೆ.

ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಹೃದಯಸ್ಪರ್ಶಿ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇಗೌಡ ಅವರು ಕೆ.ಹೆಚ್. ರಾಮಯ್ಯ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿದರು.

ಸಂಘದ ಅಧ್ಯಕ್ಷರಾದ ನಿವೃತ್ತ ಕೆಎಎಸ್ ಅಧಿಕಾರಿ ಡಾ.ಪಿ.ಬೋರೇಗೌಡರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಕೆ.ಟಿ.ಬಾಲಕೃಷ್ಣ, ಆಂತರಿಕ ಭದ್ರತಾ ವಿಭಾಗದ ಎಸ್ಪಿ ಡಾ.ಎ.ಎನ್.ಪ್ರಕಾಶ್‌ಗೌಡ, ಬೆಂಗಳೂರು ಜಿಲ್ಲೆ ವಿಶೇಷ ಜಿಲ್ಲಾಧಿಕಾರಿ ಬಾಲಚಂದ್ರ, ಐಟಿ–ಬಿಟಿ ನಿರ್ದೇಶಕ ಬಸವರಾಜು, ಐಪಿಎಸ್ ಅಧಿಕಾರಿ ಟಿ.ಪಿ.ಶಿವಕುಮಾರ್, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಸಮೂಹದ ಕಾರ್ಯದರ್ಶಿ ಪಿ.ವಿಶ್ವನಾಥ್, ಪ್ರೊ.ಎಂ.ಕೃಷ್ಣೇಗೌಡ, ಸರೋಜಮ್ಮ ತುಳಸಿದಾಸಪ್ಪ, ಕೆ.ಟಿ.ಕೃಷ್ಣಪ್ಪ ಸೇರಿದಂತೆ ಹಲವು ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಇದೇ ಸಂದರ್ಭ ದಿವಂಗತ ಪ್ರೊ. ಪಿ.ಎಂ.ಚಿಕ್ಕಬೋರಯ್ಯ ಸ್ಮರಣಾರ್ಥ ಅಮೃತ ವಯೋಮಾನ (75 ವರ್ಷ ತುಂಬಿದ)ದ ಹಾಸ್ಟೆಲ್ ಹಳೇ ವಿದ್ಯಾರ್ಥಿಗಳಾದ ಚಿಕ್ಕಮಲಯ್ಯ, ಡಾ.ಅಪ್ಪಾಜಿಗೌಡ, ಕೆ.ಮಾದೇಗೌಡ, ಡಾ. ಎಂ.ಟಿ.ಗೋವಿಂದೇಗೌಡ, ಹೆಚ್.ಎಸ್.ಗೋವಿಂದೇಗೌಡ, ಲಕ್ಕಣ್ಣ, ಸಣ್ಣನಿಂಗೇಗೌಡ, ಎನ್.ಎನ್.ನೆಹರು, ಪುಟ್ಟಸ್ವಾಮಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಹಿರಿಯ ವಿದ್ಯಾರ್ಥಿಗಳ ಸಂಘದ ಉಪಾಧ್ಯಕ್ಷ ಡಾ.ಅಪ್ಪಾಜಿಗೌಡ, ಕಾರ್ಯದರ್ಶಿ ಕೆಂಪರಾಜೇಗೌಡ, ಖಜಾಂಚಿ ಡಾ.ಚೇತನ್, ಸದಸ್ಯರಾದ ಹೆಚ್.ಜಯದೇವ, ಡಾ.ಎನ್.ನಾಗರಾಜು, ನಾಗರಾಜೇಗೌಡ, ಬಿ.ಹೆಚ್.ದೇವರಾಜು, ಜೆ.ಸ್ವಾಮಿ, ನ.ರಾ.ಗೌಡ, ಡಾ. ಹೆಚ್.ಆರ್.ತಿಮ್ಮೇಗೌಡ, ಹನುಮಂತಪ್ಪ ಸೇರಿದಂತೆ 300ಕ್ಕೂ ಹೆಚ್ಚು ಮಂದಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸಂಘ ಉದ್ಘಾಟಿಸಿ ಮಾತನಾಡಿದ ಎಂ.ಕೆ.ಶಂಕರಲಿಂಗೇಗೌಡ ಅವರು, ತಮಗೆ ಆಶ್ರಯ ನೀಡಿ, ವಿದ್ಯಾಭ್ಯಾಸಕ್ಕೆ ಬುನಾದಿಯಾದ ಕೆ.ಹೆಚ್.ರಾಮಯ್ಯ ಹಾಸ್ಟೆಲ್ ಬದುಕು ಕಟ್ಟಿಕೊಳ್ಳಲು ನೆರವಾಯಿತಲ್ಲದೆ, ಸಮಾಜದಲ್ಲಿ ಉನ್ನತ ಹುದ್ದೆಗೇರಿ ಜನರ ಸೇವೆ ಮಾಡಲು ಸಹಕಾರಿಯಾಯಿತು ಎಂದರು.

ಈ ಹಿಂದೆ ಊಟ–ವಸತಿಗೆ ತೀವ್ರ ತೊಂದರೆ ಇರುತ್ತಿತ್ತು. ಆ ಸಂದರ್ಭ ವಿದ್ಯಾರ್ಥಿನಿಲಯಗಳು ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದವು. ಆದರೆ ಈಗ ಸರ್ಕಾರ ಹಾಗೂ ಹಲವು ಸಂಘ–ಸಂಸ್ಥೆಗಳು ಹಾಸ್ಟೆಲ್ ವ್ಯವಸ್ಥೆ ಮಾಡುತ್ತಿರುವುದರಿಂದ ಕೆ.ಹೆಚ್.ರಾಮಯ್ಯ ಹಾಸ್ಟೆಲ್ ಹಿರಿಯ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಬೇಕಾದ ಜ್ಞಾನ, ಕೌಶಲ್ಯಾಭಿವೃದ್ಧಿ ಮತ್ತು ತಾಂತ್ರಿಕ ಪರಿಣತಿ ನೀಡಿ ಸಜ್ಜುಗೊಳಿಸುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು.

ಜೇನು ಕೃಷಿಯನ್ನು ಉಪ ಕಸುಬು ಮಾಡಿಕೊಳ್ಳಿ: ವಿಜ್ಞಾನಿ ದಿವ್ಯಾ ಸಲಹೆ



ಮೈಸೂರು, ಮೇ 28(ಎಸ್‌ಪಿಎನ್)–ಕೃಷಿಯಲ್ಲಿ ತೊಡಗಿರುವ ರೈತರು ಜೇನು ಕೃಷಿಯನ್ನು ಉಪ ಕಸುಬಾಗಿ ತೊಡಗಿಸಿಕೊಳ್ಳುವಂತೆ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹೆಚ್.ವಿ.ದಿವ್ಯಾ ಸಲಹೆ ನೀಡಿದರು.

ಮೈಸೂರು ನಂಜನಗೂಡು ತಾಲೂಕಿನ ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಐಸಿಎಆರ್ ಜೆಎಸ್‌ಎಸ್ ಕೃಷಿ ಕೇಂದ್ರ ಮತ್ತು ನಂಜನಗೂಡು ನಂಜುಂಡೇಶ್ವರ ರೈತ ಉತ್ಪಾದಕರ ಕಂಪನಿ ಸಹಯೋಗದೊಂದಿಗೆ ನಡೆದ ಒಂದು ದಿನದ ಜೇನು ಕೃಷಿ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

> “ ಜೇನು ಕೃಷಿಯಲ್ಲಿ ರೈತರು ತೊಡಗಿಸಿಕೊಳ್ಳುವುದರಿಂದ ಆರ್ಥಿಕವಾಗಿ ರೈತರಿಗೆ ಅನುಕೂಲವಾಗಲಿದೆ. ಅಲ್ಲದೆ, ಜೇನು ಕೃಷಿ ಅಳವಡಿಕೊಳ್ಳುವವರಿಗೆ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು ಸದಾ ಬೆನ್ನೆಲುಬಾಗಿ ನಿಲ್ಲಲಿದೆ. **–ಹೆಚ್.ವಿ.ದಿವ್ಯಾ**

ಜೇನು ಕೃಷಿ ಕಾರ್ಯಕ್ರಮ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಾದ ಜಯಶಂಕರ್ ಮತ್ತು ರಾಜು ಅವರು ಜೇನು ಕೃಷಿ ಇತಿಹಾಸ, ಜೇನು ಕೃಷಿಯ ಆರ್ಥಿಕ ಪ್ರಯೋಜನಗಳು, ಕೃಷಿಯಲ್ಲಿ ಜೇನು ಹುಳುಗಳ ಮಹತ್ವ, ಜೇನು ಸಾಕಾಣಿಕೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಈ ತರಬೇತಿಯಲ್ಲಿ 50ಕ್ಕೂ ಹೆಚ್ಚು ಕೃಷಿಕರು ಭಾಗವಹಿಸಿ ಜೇನು ಕೃಷಿ ಬಗ್ಗೆ ತರಬೇತಿ ಪಡೆದುಕೊಂಡರು. ಹೆಚ್ಚಿನ ವಿವರಗಳಿಗೆ ಆಸಕ್ತರು ಮೊ.ಸಂಖ್ಯೆ: 99806–17477 ಸಂಪರ್ಕಿಸಬಹುದು. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ.ಜಿ.ಎಂ.ವಿನಯ್, ಡಾ.ರಕ್ಷಿತ್‌ರಾಜ್, ಡಾ.ಶಾಮರಾಜ್, ಗಂಗಪ್ಪ ಹಿಪ್ಪರಗಿ, ಶಿಲ್ಪ, ಡಾ.ವೈ.ಪಿ.ಪ್ರಸಾದ್ ಉಪಸ್ಥಿತರಿದ್ದರು.



ಮೈಸೂರು ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ವಾರ್ಷಿಕೋತ್ಸವದ ಅಂಗವಾಗಿ ಕುಂಭಾಭಿಷೇಕ ಪ್ರಯುಕ್ತ ಸುದರ್ಶನ ಹೋಮದ ಪೂರ್ಣಾಹುತಿಯನ್ನು ಡಾ. ಭಾಷ್ಯಂ ಸ್ವಾಮೀಜಿ ಭಕ್ತಿಭಾವದಿಂದ ನೆರವೇರಿಸಿದರು.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಚಿಣ್ಣರಿಂದ ನೀಲಿ ವರ್ಣದ ದಿನ



ಮೈಸೂರು, ಮೇ 28– ನಗರದ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಇತ್ತೀಚೆಗೆ ನರ್ಸರಿ ಚಿಣ್ಣರಿಂದ ‘ಕೈ ತುತ್ತು ಉತ್ಸವ’ ಮತ್ತು ‘ನೀಲಿ ವರ್ಣದ ದಿನ’ (ಬ್ಲೂ ಡೇ) ವನ್ನು ವೈವಿಧ್ಯಮಯವಾಗಿ ಆಚರಿಸಲಾಯಿತು. ಶಾಲಾ ಆಡಳಿತಾಧಿಕಾರಿ ಶ್ರೀಮತಿ ಕಾಂತಿ ನಾಯಕ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಕ್ಕಳಿಗೆ ಕೈ ತುತ್ತು ತಿನ್ನಿಸಿ, ನೀಲಿ ಬಣ್ಣದ ಬಗ್ಗೆ ಶಿಶುಗೀತೆಯನ್ನು ಹೇಳಿಕೊಟ್ಟು, ಬಣ್ಣಗಳ ಬಗ್ಗೆ ಅರಿವು ಮೂಡಿಸಿದರು.

ಅದರಲ್ಲೂ ನೀರಲ್ಲಿ ಹೋಗುವ ನಾವೆಯ ಹಾಡನ್ನು ಹಾಡಿ, ಕುಣಿಯುತ್ತಾ ಬಣ್ಣದ ಚಿತ್ತಾರವನ್ನೇ ಸೃಷ್ಟಿಸಿದ್ದರು. ಆಕಾಶ ನೀಲಿ, ಸಮುದ್ರ ನೀಲಿ, ದಿನನಿತ್ಯ ಬಳಸುವ ಲೇಖನಿಯ ಶಾಯಿ ನೀಲಿ, ಶಾಲಾ ಯೂನಿಫಾರಂ, ಶೂ, ಸಾಕ್ಸ್ ನೀಲಿ, ಭಾರತ ಕ್ರಿಕೆಟ್ ತಂಡದವರು (ಟೀಮ್ ಇಂಡಿಯಾ) ಧರಿಸುವ ಜೆರ್ಸಿ ನೀಲಿ ಬಣ್ಣದ್ದು, ನೀಲಿ ಬಲೂನು, ನೀಲಿ ನೆಕ್ಲೆಸ್, ನೀಲಿ ಹಾರ, ನೀಲಿ ಬ್ಯಾನರ್, ನೀಲಿ ಜೀನ್ಸ್, ನೀಲಿ ಹಕ್ಕಿ, ನೀಲಿ ಬೆರಳಚ್ಚು, ಕಾಮನಬಿಲ್ಲಿನಲ್ಲಿ ನೀಲಿ ಬಣ್ಣವಿದೆ ಎನ್ನುತ್ತಾ ಯಾವ ಯಾವ ವಸ್ತುಗಳು ನೀಲಿ ಬಣ್ಣಗಳಿಂದ ಕೂಡಿದೆ ಎಂದು ಚಿತ್ರಗಳನ್ನು ಬಿಡಿಸಿ ಹೇಳುತ್ತಿದ್ದ ದೃಶ್ಯ ತುಂಬಾ ಸ್ವಾರಸ್ಯಕರವಾಗಿತ್ತು. ಎಲ್ಲಾ ಮಕ್ಕಳು ನೀಲಿ ಬಣ್ಣದ ವಸ್ತ್ರವನ್ನು ಧರಿಸಿದ್ದರು. ನರ್ಸರಿ ಶಿಕ್ಷಕಿಯರು ಮಕ್ಕಳು ತಂದ ನೀಲಿ ಬಣ್ಣದ ಬಲೂನ್ ಊದಿಸಿ, ಮಕ್ಕಳಿಂದಲೇ ಅದನ್ನು ಒಡೆಸಿ ಮಕ್ಕಳನ್ನು ರಂಜಿಸಿದರು. ಶಾಲಾ ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್ ಭಾಗವಹಿಸಿದ್ದರು.

ಮೆರುಗು ತಂದ ಕದಳಿ ಯಾತ್ರೆ





ಮೈಸೂರು, ಮೇ 28(ಎಸ್‌ಪಿಎನ್)–ವಚನಗಾರ್ತಿ ಅಕ್ಕ ಮಹಾದೇವಿ ಜಯಂತಿ ಅಂಗವಾಗಿ ನಡೆದ ಕದಳಿ ಯಾತ್ರೆಗೆ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಹೊಸಮಠದ ಶ್ರೀ ಚಿದಾನಂದ ಸ್ವಾಮಿ ನೇತೃತ್ವದಲ್ಲಿ ಚಾಲನೆ ನೀಡಲಾಯಿತು.

ಮೈಸೂರು ಜೆ.ಪಿ.ನಗರದ ಕ್ರೀಡಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕ, ಕದಳಿ ಮಹಿಳಾ ವೇದಿಕೆ, ಜೆಪಿ ನಗರ ಶರಣ ವೇದಿಕೆ ಹಾಗೂ ಅರಿವಿನ ಮನೆ ಮಹಿಳಾ ಬಳಗದ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಕದಳಿ ಯಾತ್ರೆಗೆ ಪುಟ್ಟರಾಜ ಗವಾಯಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಚಾಲನೆ ನೀಡಿದರು.

ಕದಳಿ ಯಾತ್ರೆಯು ಜೆ.ಪಿ.ನಗರದ ವಿವಿಧ ರಸ್ತೆಗಳಲ್ಲಿ ಸಂಚರಿಸಿತು. ಈ ಸಂದರ್ಭ ಅಕ್ಕ ಮಹಾದೇವಿ ರಚಿತ ವಚನಗಳನ್ನು ಯಾತ್ರೆಯಲ್ಲಿ ಭಾಗವಹಿಸಿದ್ದ ಮಹಿಳೆಯರು ಹಾಡುವ ಮೂಲಕ ಮೆರವಣಿಗೆಗೆ ಮೆರಗು ತಂದರು. ತದನಂತರ ಅಕ್ಕ ಮಹಾದೇವಿ ಪ್ರತಿಮೆ ಬಳಿ ಕದಳಿ ಯಾತ್ರೆ ಸಮಾಪ್ತಿಗೊಂಡಿತು.

ನಗರಪಾಲಿಕೆ ಸದಸ್ಯರಾದ ಶಾರದಮ್ಮ ಈಶ್ವರ್, ಶಾಂತಮ್ಮ ವಡಿವೇಲು, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಶಾರದಾ ಶಿವಲಿಂಗಸ್ವಾಮಿ, ಜೆ.ಪಿ.ನಗರ ಶರಣ ವೇದಿಕೆಯ ಪುಟ್ಟರಾಜಪ್ಪ, ಜೆ.ನಾಗೇಂದ್ರ ಕುಮಾರ್, ಬಿ.ಎಸ್.ಮಹದೇವಸ್ವಾಮಿ, ನಂದೀಶ್, ಸುಧಾಕರ್, ಪರಮೇಶ್ವರಪ್ಪ, ಸದಾಶಿವು, ಚಂದ್ರಶೇಖರ್, ಸತ್ಯೇಂದ್ರ ಮೂರ್ತಿ, ಅರಿವಿನ ಮನೆ ಮಹಿಳಾ ಬಳಗದ ಅಧ್ಯಕ್ಷೆ ಮಂಜುಳಾ ರವಿ ಹಾಗೂ ಪದಾಧಿಕಾರಿಗಳು ಹಾಜರಿದ್ದರು. 300ಕ್ಕೂ ಹೆಚ್ಚು ಮಹಿಳೆಯರು ಮೆರವಣಿಗೆಯಲ್ಲಿ ಭಾಗವಹಿಸಿ, ಕದಳಿ ಯಾತ್ರೆಗೆ ಮೆರಗು ತಂದುಕೊಟ್ಟರು.

ಇಗ್ನೋ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 28– ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ಮತ್ತು ನ್ಯಾಕ್ ಎ++(NAACA++) ಮಾನ್ಯತೆ ಪಡೆದ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ(IGNOU–ಇಗ್ನೋ)ದ 2023ನೇ ಸಾಲಿನ ವಿವಿಧ ಸ್ನಾತಕೋತ್ತರ, ಪದವಿ, ಪಿಜಿ ಡಿಪ್ಲೊಮಾ, ಡಿಪ್ಲೊಮಾ ಮತ್ತು ಪ್ರಮಾಣಪತ್ರ ಮಟ್ಟದ ಕಾರ್ಯಕ್ರಮಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ವಿವಿಯ ಹಿರಿಯ ಪ್ರಾದೇಶಿಕ ನಿರ್ದೇಶಕಿ ಡಾ.ಎಸ್.ರಾಧಾ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ದೈಹಿಕ ಅಶಕ್ತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ ಸೌಲಭ್ಯ ಪಡೆಯಲು ಅವಕಾಶವಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ (SC/ ST) ವಿದ್ಯಾರ್ಥಿಗಳು ಸಾಮಾನ್ಯ ಬಿ.ಕಾಂ, ಬಿ.ಎ ಮತ್ತು ಬಿ.ಎಸ್ಸಿಗೆ ಅರ್ಜಿ ಸಲ್ಲಿಸುವಾಗ ಪರಿಶಿಷ್ಟ ಜಾತಿ ಉಪ ಯೋಜನೆ(SCSP) ಮತ್ತು ಬುಡಕಟ್ಟು ಉಪ ಯೋಜನೆ(TSP) ಅಡಿಯಲ್ಲಿ ಶುಲ್ಕ ವಿನಾಯಿತಿ ಪಡೆಯಬಹುದು. ಅರ್ಹ ವಿದ್ಯಾರ್ಥಿಗಳು ಭಾರತ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ವಿದ್ಯಾಲಕ್ಷ್ಮಿ ಪೋರ್ಟಲ್ ಮೂಲಕ ಶಿಕ್ಷಣ ಸಾಲ ಸೌಲಭ್ಯವನ್ನೂ ಸಹ ಪಡೆಯಬಹುದು ಎಂದು ವಿವರಣೆ ನೀಡಿದ್ದಾರೆ.

> ಅರ್ಹತಾ ಷರತ್ತುಗಳು ಮತ್ತು ಇತರ ವಿವರಗಳಿಗಾಗಿ http://www.ignou.ac.in/userfiles/Common-Prospectus-English.pdf ನಲ್ಲಿ ಡೌನ್‌ಲೋಡ್ ಮಾಡಿ. ಸ್ಪಷ್ಟೀಕರಣಗಳಿಗಾಗಿ admissionrc13@ignou.ac.inಗೆ ಮೇಲ್, ಮೊ.ಸಂ.9449337272ಕ್ಕೆ ವ್ಯಾಟ್ಸಾಪ್ ಎಸ್‌ಎಂಎಸ್ ಅಥವಾ 080–29607272ಗೆ ಕರೆ ಮಾಡಬಹುದು.

ಜುಲೈನಲ್ಲಿ ನಡೆಯುವ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು https://ignouadmission.samarth.edu.in/ ಲಿಂಕ್ ಕ್ಲಿಕ್ ಮಾಡಿ ಮತ್ತು www.ignou.ac.inಗೆ ಭೇಟಿ ನೀಡಿ ಸಮಗ್ರ ವಿವರಗಳನ್ನು ಪಡೆಯಬಹುದು. ಎಐಸಿಟಿಇ ಪರಿಷ್ಕೃತ ನಿಯಮಗಳ ಪ್ರಕಾರ ಇಗ್ನೋ ಪ್ರವೇಶ ಪರೀಕ್ಷೆಯಿಲ್ಲದೆ ಎಂ.ಬಿಎ ಪದವಿಗೆ ನೇರ ಪ್ರವೇಶ ಒದಗಿಸಲಾಗುವುದು. ಡಿಜಿಟಲ್ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ, ಅಭಿವೃದ್ಧಿ ಪತ್ರಿಕೋದ್ಯಮದ ಅತ್ಯಂತ ಉಪಯುಕ್ತ ಮತ್ತು ಉದ್ಯಮದ ಅಗತ್ಯ ಕಾರ್ಯಕ್ರಮಗಳನ್ನು ಇಗ್ನೋ ಆರಂಭಿಸಿದ್ದು, ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ಸಂಸತ್ ಭವನ ಉದ್ಘಾಟನೆ; ಮೈಸೂರಲ್ಲಿ ಸಂಭ್ರಮಾಚರಣೆ

ವೀರ ಸಾವರ್ಕರ್‌ರ 140ನೇ ಜಯಂತಿ ಆಚರಣೆ

ಮೈಸೂರು,ಮೇ 28(ಪಿಎಂ)– ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಭಾನುವಾರ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರ 140ನೇ ಜಯಂತಿ ಆಚರಿಸಲಾಯಿತಲ್ಲದೆ, ನೂತನ ಸಂಸತ್ ಭವನದ ಉದ್ಘಾಟನೆಯ ಪ್ರಯುಕ್ತ ಸಿಹಿ ವಿತರಿಸಲಾಯಿತು.


ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ವೃತ್ತದ ಕಾರ್ಯಪ್ಪರ ಪ್ರತಿಮೆ ಮುಂಭಾಗ ನೂತನ ಸಂಸತ್ ಭವನದ ಫೋಟೋ ಹಾಗೂ ವೀರ ಸಾವರ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಇದಕ್ಕೂ ಮುನ್ನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪರ ಪ್ರತಿಮೆಗೂ ಪುಷ್ಪ ನಮನ ಸಲ್ಲಿಸಲಾಯಿತು.



ಇದೇ ವೇಳೆ ಮಾತನಾಡಿದ ಬಳಗದ ಅಧ್ಯಕ್ಷ ರಾಕೇಶ್ ಭಟ್, ಸಾವರ್ಕರ್ ಅವರಿಗೆ ಬ್ರಿಟಿಷರು ಏನೇ ಶಿಕ್ಷೆ ಕೊಟ್ಟರೂ ಕುಗ್ಗಲಿಲ್ಲ. ಬೇರೆ ಬೇರೆ ಕಾರಣಕ್ಕೆ ಸ್ವದೇಶೀಯ ಕೆಲವು ಮಂದಿ ಅವಮಾನಿಸಿದರೂ ಅವರು ಜಗ್ಗಲಿಲ್ಲ. ಈಗ ಪ್ರಧಾನಿ ನರೇಂದ್ರ ಮೋದಿಯವರು ಸಾವರ್ಕರ್ ಜನ್ಮದಿನದಂದು ನೂತನ ಸಂಸತ್ ಭವನ ಉದ್ಘಾಟಿಸುತ್ತಿರುವುದು ಅವರಿಗೆ ಸಂದ ಗೌರವವಾಗಿದೆ ಎಂದು ಹೇಳಿದರು.

ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್‌ಕುಮಾರ್, ಬಳಗದ ಸಂಚಾಲಕರಾದ ವಿಕ್ರಂ ಅಯ್ಯಂಗಾರ್, ಸಂದೇಶ್ ಪವಾರ್, ಹಿಂದೂಪರ ಸಂಘಟನೆಗಳ ಮುಖಂಡರಾದ ಸಂಜಯ್, ಜಯಸಿಂಹ ಶ್ರೀಧರ್, ಪರಮೇಶ್‌ಗೌಡ, ಮಧುಸೂದನ್ ಯಶಸ್ವಿ ಸೋಮಶೇಖರ್ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.5.2023 ಸೋಮವಾರ, ಮಳೆ ನಕ್ಷತ್ರ: ರೋಹಿಣಿ, 25.05.2023ರಿಂದ 07.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ,
ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ


- **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ :** ಶ್ರೀ ಕ್ಷೇತ್ರ ದಸರಿಘಟ್ಟ ಚೌಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಗೆ ವಿಶೇಷ ಪೂಜೆ, ಸಪ್ತಶತಿ ಪಾರಾಯಣ, ಅಭಿಷೇಕ, ತ್ರಿಶತಿ ಅರ್ಚನೆ, ದುರ್ಗಾಸ್ತುತಿ, ಮಹಾಮಂಗಳಾರತಿ, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ಸ್ಥಳ: ನಂ. 36, ಗೀತಾ ನಿಕೇತನ, ಸೋನಾರ್ ಸ್ಟ್ರೀಟ್, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 9 ಗಂಟೆಗೆ.
- **ಮಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಫೈರ್ ಅಂಡ್ ಸೇಫ್ಟಿ ಇಂಜಿನಿಯರಿಂಗ್ (ಎಂಐಎಫ್‌ಎಸ್‌ಇ), ಮೈಸೂರು :** ವ್ಯಕ್ತಿಗತ ಮಾರ್ಗದರ್ಶನ ಮತ್ತು ಸಮಾಲೋಚನಾ ಶಿಬಿರ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್–ಇಂಡಿಯಾ (ಐಇಐ), ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.
- **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಸಿಲ್ಕ್, ಕಾಟನ್ ಮತ್ತು ಇತರ ಸೀರೆಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ.
- **ಶ್ರೀ ಉತ್ತರಾದಿ ಮಠ–ರೋಗ ಮೋಚನಾ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಪ್ರಾದುರ್ಭಾವೋತ್ಸವ, ಬೆಳಗ್ಗೆ 7 ಗಂಟೆಯಿಂದ ಬೆಂಗಳೂರು ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲರಾದ ಪಂಡಿತ್ ಸತ್ಯಧ್ಯಾನಾಚಾರ್ಯ ಕಟ್ಟಿ ಅವರಿಂದ ಪ್ರವಚನ, ಸಂಜೆ 5.30ರಿಂದ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರಿಂದ ಅನುಗ್ರಹ ಸಂದೇಶ, ಸ್ಥಳ: ಧನ್ವಂತರಿ ಸನ್ನಿಧಾನ, ಉತ್ತರಾದಿ ಮಠ, ಅಗ್ರಹಾರ.
- **ಶ್ರೀ ನಾದಬ್ರಹ್ಮ ಸಂಗೀತಾ ಸಭಾ :** ಸಂಗೀತ ಕಲಾನಿಧಿ ಮೈಸೂರು ವಾಸುದೇವಚಾರ್ಯ ಸಂಸ್ಮರಣ ಕಾರ್ಯಕ್ರಮ, ವಿದುಷಿ ಸ್ಮಿತ ಶ್ರೀಕಿರಣ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ಗಂಟೆಗೆ.
- **ಚಿನ್ಮಯ ಮಿಷನ್, ಮೈಸೂರು :** ಮಂಡ್ಯ ಚಿನ್ಮಯ ಮಿಷನ್ ಆಚಾರ್ಯರಾದ ಸ್ವಾಮಿ ಆದಿತ್ಯಾನಂದ ಅವರಿಂದ ಗೀತಾ ಜ್ಞಾನ ಯಜ್ಞ, ವಿಷಯ: ಭಗವದ್ಗೀತೆಯ 1ನೇ ಅಧ್ಯಾಯ, ಅರ್ಜುನ ವಿಷಾದ ಯೋಗ, ಸ್ಥಳ: ಶಿವಾನಂದ ಜ್ಞಾನಾಲಯ, ಝಾನ್ಸಿ ಲಕ್ಷ್ಮೀಬಾಯಿ ರಸ್ತೆ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಸಾಣೆಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: “ಮಹಾ ಮೋಜಣಿ” ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ ‘ಕನ್ನಡ ಪದಗಳ ಬಳಕೆ’ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ–ಡಾ.ಜ್ಯೋತಿ ಶಂಕರ್, 7.15 ಭಾವಗೀತೆಗಳು: ಪ್ರೇಮಲತಾ ದಿವಾಕರ್, 10.00 ಲಯ ಸಂಭ್ರಮ, ಪಾಶ್ಚಾತ್ಯ ಲಯ ವಾದ್ಯಗಳ ಪರಿಚಯ, ಭಾಗವಹಿಸುವವರು: ಡ್ರಮ್ಸ್ ಕಲಾವಿದ ಅರುಣ್‌ಕುಮಾರ್, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ: ನಿತಿನ್ ರಾಜಾರಾಂ ಶಾಸ್ತ್ರಿ, 12.45 ನಮ್ಮ ಆರೋಗ್ಯ: ಮಕ್ಕಳಿಗೆ ಪೌಷ್ಟಿಕ ಆಹಾರ ಕುರಿತು ಡಾ.ಸವಿತಾ ಎಂ.ಆರ್., ಅವರೊಂದಿಗೆ ಮಾತುಕತೆ, 1.20 ಭಾವಗೀತೆ– ಹೆಚ್.ಎ.ನಳಿನಿ, 3.00 ಪಿ.ಗುರುಪ್ರಸಾದ್: ಸ್ಯಾಕ್ಸೋಫೋನ್ ವಾದನ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ಭಾಗವಹಿಸುವವರು ಡಾ. ರಜನೀ ಲೋಕೇಶ್, ವಿಷಯ–ದಂತ ಸಂರಕ್ಷಣೆ, ಪ್ರಸ್ತುತಿ–ಕೆ.ಬಿ.ಮೀನಾ, 4.30 ಝೇಂಕಾರ: ಕವಿ–ಕೆ.ಬಿ.ಪ್ರಭುಪ್ರಸಾದ್, ಸಂಗೀತ–ಎಸ್.ಜಿ.ರಘುರಾಂ, ಭಾಗವಹಿಸುವವರು ರಂಗರಾವ್ ಅಂಧ ಶಾಲೆಯ ಮಕ್ಕಳು, 4.45 ಹಿಂದಿ ಪಾಠ: ಪ್ರಸ್ತುತಿ–ಸ್ಮಿತಾ ಚಿಪ್ಳೂಣ್‌ಕರ್, 6.50 ಕೃಷಿರಂಗ: ಕಿಸಾನ್ ವಾಣಿ– ಮಣ್ಣಿನ ಸಂರಕ್ಷಣೆಯ ಪ್ರಾಮುಖ್ಯತೆ ಕುರಿತು ಮಂಡ್ಯದ ಡಾ.ಎಸ್.ಎಸ್.ಪ್ರಕಾಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್. ಸುಬ್ರಮಣ್ಯ. **ರಾತ್ರಿ:** 9.30 ಹಳ್ಳಿ ಹಾಡು: ಭಾಗವಹಿಸುವವರು ಭಾಗ್ಯಮ್ಮ ಮತ್ತು ದೇವಮ್ಮ, 10.00 ನಾಟಕ, 10.30 ಸವಿನೆನಪು.

ನೂತನ ಸಂಸತ್ ಭವನ ಲೋಕಾರ್ಪಣೆ



ನೂತನ ಸಂಸತ್ ಭವನ ಲೋಕಾರ್ಪಣೆಗೂ ಮುನ್ನ ಭಾನುವಾರ ಬೆಳಿಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸಿದರು.

ನೂತನ ಸಂಸತ್ ಭವನ ಭಾರತೀಯ ಸಂಸ್ಕೃತಿ ಬಿಂಬಿಸುತ್ತದೆ

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಸಂದೇಶ



ನವದೆಹಲಿ, ಮೇ 28– ನೂತನ ಸಂಸತ್ ಭವನ ಭಾರತೀಯ ಸಂಸ್ಕೃತಿ ಬಿಂಬಿಸುತ್ತದೆ. ಸಂಸತ್ ಭವನ ವಿವಿಧತೆಯಲ್ಲಿ ಏಕತೆಯ ಸಂದೇಶ ಸಾರಲಿದೆ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ಭಾನುವಾರ ಹೇಳಿದ್ದಾರೆ. ನೂತನ ಸಂಸತ್ ಭವನ ಉದ್ಘಾಟನೆ 2ನೇ ಹಂತದ ಕಾರ್ಯಕ್ರಮದಲ್ಲಿ ಉಪಸಭಾಪತಿ ಹರಿವಂಶ್ ಅವರು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರ ಸಂದೇಶ ಓದಿದರು.

ನೂತನ ಸಂಸತ್ ಭವನ ಕಟ್ಟಡ ವಾಸ್ತು ಪ್ರಕಾರ ನಿರ್ಮಾಣವಾಗಿದೆ. ನೂತನ ಸಂಸತ್ ಭವನ ಭಾರತೀಯ ಸಂಸ್ಕೃತಿ ಬಿಂಬಿಸುತ್ತದೆ. ಸಂಸತ್ ಭವನ ವಿವಿಧತೆಯಲ್ಲಿ ಏಕತೆಯ ಸಂದೇಶ ಸಾರಲಿದೆ ಎಂದು ಉಪ ರಾಷ್ಟ್ರಪತಿಯವರು ತಿಳಿಸಿದ್ದಾರೆಂದು ಹೇಳಿದರು.

ಬಳಿಕ ಮಾತನಾಡಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, ಇಡೀ ದೇಶವೇ ಇಂದು ಈ ಕ್ಷಣಕ್ಕೆ ಸಾಕ್ಷಿಯಾಗಿದೆ. 2.5 ವರ್ಷಗಳಲ್ಲಿ ಈ ಹೊಸ ಸಂಸತ್ತನ್ನು ನಿರ್ಮಿಸಲಾಗಿದೆ. ಇದಕ್ಕೆ ಪ್ರಧಾನಿ ಮೋದಿಯವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆಂದು ಹೇಳಿದರು.

ಹೊಸ ಸಂಸತ್ ಭವನ ಸ್ವಾತಂತ್ರ್ಯ ಅಮೃತ ಮಹೋತ್ಸವಕ್ಕೆ ಸಾಕ್ಷಿ. ಭಾರತದ ಪ್ರಜಾಪ್ರಭುತ್ವದ ಪ್ರತೀಕ ಈ ನೂತನ ಸಂಸತ್ ಭವನ. ಸ್ವಾತಂತ್ರ್ಯದ ಅಮೃತ್ ಮಹೋತ್ಸವದಲ್ಲಿ ನೂತನ ಸಂಸತ್ ನಿರ್ಮಾಣವಾಗಿದೆ. ಸಾವಿರಾರು ಕಾರ್ಮಿಕರ ಬಲದಿಂದ ಈ ಸಂಸತ್ ಭವನ ನಿರ್ಮಾಣವಾಗಿದೆ. ಲೋಕಸಭೆಯಲ್ಲಿ ಸದಸ್ಯರ ಚರ್ಚೆಯಿಂದ ಅನೇಕ ಕಾನೂನು ನಿರ್ಮಿಸಲಾಗಿದೆ. ನೂತನ ಸಂಸತ್ ಭವನ ಮಹತ್ವದ ವಿಚಾರಗಳ ಬಗ್ಗೆ ಚರ್ಚೆಗೆ ವೇದಿಕೆಯಾಗಿದೆ. ಸಂಸತ್ ಭವನ ಜನರ ಸಮಸ್ಯೆಗಳಿಗೆ ಸ್ಪಂದಿಸುವ ವೇದಿಕೆಯಾಗಲಿದೆ ಎಂದು ತಿಳಿಸಿದರು.

ಮೋದಿ ಸಂಸತ್ ಭವನ ಉದ್ಘಾಟಿಸಿದ್ದನ್ನು ಸ್ವಾಗತಿಸಿದ ರಾಷ್ಟ್ರಪತಿ ಮುರ್ಮು



ನವದೆಹಲಿ, ಮೇ 28– ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನೂತನ ಸಂಸತ್ ಭವನ ಕಟ್ಟಡ ಉದ್ಘಾಟಿಸಿದ್ದನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ವಾಗತಿಸಿದ್ದಾರೆ. ಇದು ಇಡೀ ದೇಶಕ್ಕೆ ಹೆಮ್ಮೆಯ ಮತ್ತು ಅಪಾರ ಸಂತೋಷದ ವಿಷಯ ಎಂದು ರಾಷ್ಟ್ರಪತಿಗಳು ಹೇಳಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ತಮ್ಮ ಸಂದೇಶ ಕಳುಹಿಸಿದ ರಾಷ್ಟ್ರಪತಿ ಮುರ್ಮು ಅವರು, ಹೊಸ ಸಂಸತ್ತಿನ ಕಟ್ಟಡದ ಉದ್ಘಾಟನೆಯು ದೇಶದ ಇತಿಹಾಸದಲ್ಲಿ ಚಿನ್ನದ ಪದಗಳಲ್ಲಿ ಬರೆಯಲ್ಪಡುತ್ತದೆ ಎಂದು ಹೇಳಿದರು.

ನೂತನ ಸಂಸತ್ ಭವನದ ಉದ್ಘಾಟನಾ ಸಮಾರಂಭಕ್ಕೆ ರಾಷ್ಟ್ರಪತಿಯವರನ್ನು ಆಹ್ವಾನಿಸಲಿಲ್ಲವೆಂದು ಕೊಂಕು ತೆಗೆದು ಹಲವಾರು ವಿಪಕ್ಷಗಳು ಉದ್ಘಾಟನಾ ಸಮಾರಂಭದಿಂದ ದೂರ ಉಳಿದಿವೆ. ಆದರೆ, ಈಗ ಸ್ವತಃ ರಾಷ್ಟ್ರಪತಿಯವರೇ ಉದ್ಘಾಟನಾ ಸಮಾರಂಭಕ್ಕೆ ತಮ್ಮ ಸಂದೇಶವನ್ನು ಕಳುಹಿಸಿ, ಪ್ರಧಾನಿಯವರು ಸಂಸತ್ ಭವನ ಉದ್ಘಾಟಿಸಿದ್ದು ಸ್ವಾಗತಾರ್ಹ ಎಂದು ಹೇಳಿರುವುದು ಗಮನಾರ್ಹ.

'ಹೊಸ ಸಂಸತ್ ಕಟ್ಟಡದ ಉದ್ಘಾಟನೆಯು ಭಾರತದ ಸಮಸ್ತ ಜನತೆಗೆ ಹೆಮ್ಮೆಯ ಮತ್ತು ಸಂತೋಷದ ವಿಷಯವಾಗಿದೆ' ಎಂದು ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ರಾಷ್ಟ್ರಪತಿಯವರ ಸಂದೇಶವನ್ನು ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ಅವರು ಓದಿದರು. ಸಂಸತ್ತು ದೇಶಕ್ಕೆ ಮಾರ್ಗದರ್ಶನ ತೋರುವ ಬೆಳಕು, ಹೊಸ ಸಂಸತ್ತಿನ ಕಟ್ಟಡವು ನಮ್ಮ ಪ್ರಜಾಪ್ರಭುತ್ವದ ಪಯಣದಲ್ಲಿ ಪ್ರಮುಖ ಮೈಲಿಗಲ್ಲು ಎಂದು ರಾಷ್ಟ್ರಪತಿಯವರು ಸಂದೇಶದಲ್ಲಿ ತಿಳಿಸಿದ್ದಾರೆ.




ಲೋಕಾರ್ಪಣೆ ವೇಳೆ ಪ್ರಧಾನಿ ಮೋದಿ ಜೊತೆ ಸ್ಪೀಕರ್ ಓಂ ಬಿರ್ಲಾ




ನೂತನ ಸಂಸತ್ ಭವನ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸಿದ್ದ ಗಣ್ಯರು

ಸೆಂಗೋಲ್ ಸ್ಥಾಪನೆ: ಪ್ರಧಾನಿ ಮೋದಿಗೆ ಧನ್ಯವಾದ ಹೇಳಿದ ರಜನಿ



ಚೆನ್ನೈ, ಮೇ 28– ಭಾನುವಾರ ನೂತನ ಸಂಸತ್ ಭವನ ಲೋಕಾರ್ಪಣೆಯಾಗಿದ್ದು, ಈ ಭವನದಲ್ಲಿ ಸೆಂಗೋಲ್ ಅನ್ನು ಸ್ಥಾಪಿಸಲಾಗಿದೆ. ಈ ವಿಚಾರವಾಗಿ ಸೂಪರ್ ಸ್ಟಾರ್ ರಜನಿಕಾಂತ್ ಅವರು ಮೋದಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ.

ಸೆಂಗೋಲ್ ಎನ್ನುವುದು ತಮಿಳು ಶಕ್ತಿಯ ಸಂಪ್ರದಾಯಿಕ ಚಿಹ್ನೆ. ಇಂತಹ ರಾಜದಂಡ ಭಾರತದ ಹೊಸ ಸಂಸತ್ತಿನ ಕಟ್ಟಡದಲ್ಲಿ ಇರಲಿದೆ ಎನ್ನುವುದೇ ಹೆಮ್ಮೆ. ತಮಿಳರ ಹೆಮ್ಮೆ ಪಡುವಂತೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಾಮಾಣಿಕ ಧನ್ಯವಾದಗಳನ್ನು ತಿಳಿಸಿವೆ ಎಂದು ರಜನಿಕಾಂತ್ ಟ್ವೀಟ್ ಮಾಡಿದ್ದಾರೆ.



ಹೊಸ ಸಂಸತ್ ಭವನದ ವಿಶೇಷತೆಗಳು

ಪ್ರಜಾಪ್ರಭುತ್ವದ ಹೊಸ ದೇಗುಲ ತ್ರಿಕೋನ ಆಕಾರದ ನಾಲ್ಕು ಅಂತಸ್ತಿನಲ್ಲಿ ನಿರ್ಮಿಸಲಾಗಿದೆ. ಸಂಸತ್ ಕಟ್ಟಡವು 64,500 ಚದರ ಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಇದು ಮೂರು ಮುಖ್ಯ ದ್ವಾರಗಳನ್ನು ಹೊಂದಿದೆ. ಜ್ಞಾನ, ಶಕ್ತಿ ಮತ್ತು ಕರ್ಮ ದ್ವಾರ ಎಂದು ಹೆಸರಿಸಲಾಗಿದೆ.

ಲೋಕಸಭೆಯಲ್ಲಿ 888 ಸದಸ್ಯರು ಮತ್ತು ರಾಜ್ಯಸಭೆಯಲ್ಲಿ 300 ಸದಸ್ಯರ ಆಸನಗಳನ್ನು ಅಳವಡಿಸಲಾಗಿದೆ. ಉಭಯ ಸದನಗಳ ಜಂಟಿ ಅಧಿವೇಶನ ಲೋಕಸಭೆಯಲ್ಲೇ ನಡೆಯಲಿದ್ದು, ಅಂತಹ ಸಂದರ್ಭದಲ್ಲಿ 1280 ಸದಸ್ಯರಿಗಾಗಿ ಆಸನ ವ್ಯವಸ್ಥೆ ಮಾಡುವಷ್ಟು ದೊಡ್ಡದಾಗಿದೆ.

ಹೊಸ ಸಂಸತ್ ಕಟ್ಟಡ 64,500 ಚದರ ಮೀಟರ್ ವಿಸ್ತೀರ್ಣದಲ್ಲಿ ಹಳೆಯ ಸಂಸತ್ತಿನ ಪಕ್ಕದಲ್ಲೇ ನಿರ್ಮಾಣ ಮಾಡಲಾಗಿದೆ. 2020ರ ಡಿಸೆಂಬರ್ 10 ರಂದು ಪ್ರಧಾನಿ ಮೋದಿ ಅವರು ಇದರ ಆರಂಭಕ್ಕೆ ಶಂಕುಸ್ಥಾಪನೆ ಮಾಡಿದ್ದರು. 1200 ಕೋಟಿ ರೂಪಾಯಿ ವೆಚ್ಚದಲ್ಲಿ ಕೇವಲ ಎರಡೂವರೆ ವರ್ಷದಲ್ಲಿ ಇದನ್ನು ನಿರ್ಮಾಣ ಮಾಡಿ ದಾಖಲೆ ಬರೆಯಲಾಗಿದೆ.

ಇದರಲ್ಲಿನ ಲೋಕಸಭೆ ಹಳೆಯದಕ್ಕಿಂತ ಮೂರು ಪಟ್ಟು ಹಿರಿದಾಗಿದೆ. 17 ಸಾವಿರ ಚದರ ಮೀಟರ್ ದೊಡ್ಡದು. ಲೋಕಸಭೆಯನ್ನು ರಾಷ್ಟ್ರಪಕ್ಷಿ ನವಿಲಿನ ಆಕಾರದಲ್ಲಿ ರೂಪಿಸಲಾಗಿದೆ. ರಾಜ್ಯಸಭೆಯನ್ನು ರಾಷ್ಟ್ರಪುಷ್ಪ ಕಮಲದ ಮಾದರಿಯಲ್ಲಿ ನಿರ್ಮಾಣ ಮಾಡಲಾಗಿದೆ. ಸಂಸತ್ತಿನ ಮೇಲೆ 6.5 ಮೀಟರ್ ಎತ್ತರದ ನಾಲ್ಕು ಮುಖಗಳ ಸಿಂಹದ ರಾಷ್ಟ್ರಲಾಂಛನವನ್ನು ಇಡಲಾಗಿದೆ. ಇದು 9500 ಕೇಜಿ ತೂಕವಿದೆ. ಇದನ್ನು ಹೊತ್ತಿರುವ ಕೆಳಗಿನ ಭಾಗವೇ 6500 ಕೆಜಿ ತೂಕವಿದೆ.

ನೂತನ ಸಂಸತ್ ಆಧುನೀಕರಣಗೊಂಡಿದೆ. ಸರ್ಕಾರದ ಆಶಯದಂತೆ ಕಾಗದ ರಹಿತವಾಗಿ ಕಾರ್ಯನಿರ್ವಹಣೆ ಮಾಡುವಂತೆ ರೂಪಿಸಲಾಗಿದೆ. ಎಲ್ಲಾ ಆಸನಗಳ ಬಳಿ ಮಲ್ಟಿಮೀಡಿಯಾ ಡಿಸ್‌ಪ್ಲೇಗಳನ್ನು ಅಳವಡಿಸಲಾಗಿದೆ. ಆಧುನಿಕ ಗ್ಯಾಜೆಟ್‌ಗಳು ಇಲ್ಲಿದ್ದು, ಯಾವುದೇ ಭಾಷೆಯಲ್ಲಿ ಮಾತನಾಡಿದರೂ ಅದನ್ನು ಕೃತಕಬುದ್ಧಿಮತ್ತೆಯ(ಎಐ) ನೆರವಿನಿಂದ ಭಾಷಾಂತರ ಮಾಡುವ ವ್ಯವಸ್ಥೆಯನ್ನು ಹೊಂದಲಾಗಿದೆ.



ಮನ್ ಕಿ ಬಾತ್‌ನಲ್ಲಿ ವೀರ್ ಸಾವರ್ಕರ್ ಬಲಿದಾನ, ಎನ್.ಟಿ.ರಾಮರಾವ್‌ರನ್ನು ಸ್ಮರಿಸಿದ ಪ್ರಧಾನಿ ಮೋದಿ


ನವದೆಹಲಿ, ಮೇ 28– ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ತಮ್ಮ ಮಾಸಿಕ ರೇಡಿಯೊ ಪ್ರಸಾರದ 101ನೇ ಸಂಚಿಕೆ ಮನ್ ಕಿ ಬಾತ್ ಅನ್ನು ಉದ್ದೇಶಿಸಿ ಮಾತನಾಡಿದರು. ಇಂದಿನ ಆವೃತ್ತಿಯು ಎರಡನೇ ಸೆಂಚುರಿಯ ಪ್ರಾರಂಭವಾಗಿದೆ ಎಂದು ಹೇಳಿದರು.

ವೀರ್ ಸಾವರ್ಕರ್ ಅವರ ಜನ್ಮ ವಾರ್ಷಿಕೋತ್ಸವವನ್ನು ಸ್ಮರಿಸಿದ ಪ್ರಧಾನಿ ಮೋದಿ, ಅವರ ತ್ಯಾಗ ಮತ್ತು ಧೈರ್ಯವನ್ನು ಸ್ಮರಿಸಿದರು. ಎನ್‌ಟಿ ರಾಮರಾವ್ ಅವರ 100 ನೇ ಜನ್ಮದಿನವನ್ನು ಸಹ ಸ್ಮರಿಸಿದರು, ರಾಮರಾವ್ ಅವರು ಭಾರತೀಯ ಚಿತ್ರರಂಗ ಮತ್ತು ರಾಜಕೀಯದಲ್ಲಿ ಅಳಿಸಲಾಗದ ಗುರುತು ಹಾಕಿ ಹೋಗಿದ್ದಾರೆ ಎಂದರು. ನಮಗೆ ಇಂದಿಗೂ ಪ್ರಸ್ತುತವಾಗಿರುವ ಮಾರ್ಗವನ್ನು ತೋರಿಸಿದ ಕವಿ ಸಂತ ಕಬೀರ್ ದಾಸ್ ಅವರ ಜನ್ಮದಿನದಂದು ಜೂನ್ 4ರಂದು ಆಚರಿಸಲಾಗುತ್ತದೆ. ಸಮಾಜವನ್ನು ವಿಭಜಿಸುವ ಪ್ರತಿಯೊಂದು ಆಚರಣೆಯನ್ನು ಸಂತ ಕಬೀರರು ವಿರೋಧಿಸಿದರು ಎಂದರು.

ಭಾರತದಲ್ಲಿನ ಅನೇಕ ವಸ್ತುಸಂಗ್ರಹಾಲಯಗಳ ಕುರಿತು ಮಾತನಾಡಿದ ಮೋದಿ, ಗುರುಗ್ರಾಮ್ ಒಂದು ವಿಶಿಷ್ಟವಾದ ವಸ್ತುಸಂಗ್ರಹಾಲಯವನ್ನು ಹೊಂದಿದೆ. ಮ್ಯೂಸಿಯೊ ಕ್ಯಾಮೆರಾ. ಇದು 1860 ರ ನಂತರದ ಯುಗಕ್ಕೆ ಸೇರಿದ 8,000 ಕ್ಕೂ ಹೆಚ್ಚು ಕ್ಯಾಮೆರಾಗಳ ಸಂಗ್ರಹವನ್ನು ಹೊಂದಿದೆ. ನಮ್ಮ ದಿವ್ಯಾಂಗ ಜನರನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡಿನ ಸಾಧ್ಯತೆಗಳ ವಸ್ತುಸಂಗ್ರಹಾಲಯವನ್ನು ವಿನ್ಯಾಸಗೊಳಿಸಲಾಗಿದೆ ಎಂದರು. ನಂತರ ಪ್ರಧಾನ ಮಂತ್ರಿಗಳು ರಾಷ್ಟ್ರದಾದ್ಯಂತ ಜಾಗೃತಿ ಗುಂಪುಗಳ ನೀರಿನ ಸಂರಕ್ಷಣೆ ಪ್ರಯತ್ನಗಳ ಮೇಲೆ ಬೆಳಕು ಚೆಲ್ಲಿದರು.




ವೀರ್ ಸಾವರ್ಕರ್



ಎನ್.ಟಿ. ರಾಮರಾವ್

ಇತ್ತೀಚಿನ ಸಂಚಿಕೆಯು ಭಾರತದ ಹೊಸ ಸಂಸತ್ತಿನ ಕಟ್ಟಡದ ಉದ್ಘಾಟನೆಯ ದಿನವಾದ ಇಂದು ಆಗಿದ್ದು, ಇದು ನವೀಕರಿಸಿದ ಸೆಂಟ್ರಲ್ ವಿಸ್ಟಾ ಯೋಜನೆಯ ಭಾಗವಾಗಿದೆ, ಇದರ ನಿರ್ಮಾಣವು 2019 ರಲ್ಲಿ ಪ್ರಾರಂಭವಾಯಿತು.

ಕಳೆದ ತಿಂಗಳು, ಪ್ರಧಾನಿ ರೇಡಿಯೊ ಕಾರ್ಯಕ್ರಮದ 100 ನೇ ಸಂಚಿಕೆಯನ್ನು ಉದ್ದೇಶಿಸಿ ಮಾತನಾಡಿದ್ದರು. ಅಲ್ಲಿ ಅವರು 30 ನಿಮಿಷಗಳ ಕಾರ್ಯಕ್ರಮದಲ್ಲಿ ದೇಶಾದ್ಯಂತ ಕೆಲವು ಬದಲಾವಣೆಗಳನ್ನು ಮಾಡುವವರನ್ನು ಸಂದರ್ಶಿಸಿದ್ದರು. ಮನ್ ಕಿ ಬಾತ್‌ನ್ನು "ಪ್ರತಿ ತಿಂಗಳು ಬರುವ ಒಳ್ಳೆಯತನ ಮತ್ತು ಸಕಾರಾತ್ಮಕತೆಯ ವಿಶಿಷ್ಟ ಹಬ್ಬ" ಎಂದು ಕರೆದ ಮೋದಿ, ದೇಶದ ಜನರೇ ಕಾರ್ಯಕ್ರಮವನ್ನು ಜೀವಂತಗೊಳಿಸಿದ ನಮ್ಮ ನಾಯಕರು ಎಂದು ಹೇಳಿದರು.




ಸೆಂಗೋಲ್ ಅನ್ನು ಸಂಸತ್ ಭವನದಲ್ಲಿ ಸ್ಥಾಪಿಸುವುದಕ್ಕೂ ಮುನ್ನ ದೀರ್ಘದಂಡ ನಮಸ್ಕಾರ ಸಲ್ಲಿಸಿದ ಪ್ರಧಾನಿ ಮೋದಿ



ಸಂಸತ್ ಲೋಕಾರ್ಪಣೆಗೂ ಮುನ್ನ ತಮಿಳುನಾಡಿನ ಅಧೀನಂ ಪೀಠದ ಸಂತರು ಪ್ರಧಾನಿ ಮೋದಿ ಅವರಿಗೆ ಸೆಂಗೋಲ್ ಅನ್ನು ಹಸ್ತಾಂತರಿಸಿದರು.

ಜೀವಿತಾವಧಿಯ ಅವಿಸ್ಮರಣೀಯ ಕ್ಷಣಕ್ಕೆ ಸಾಕ್ಷಿ ಆಗಿರುವುದು ನನ್ನ ಅದೃಷ್ಟ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಭಾವುಕ ನುಡಿ



ನವದೆಹಲಿ: ನವದೆಹಲಿಯಲ್ಲಿ ಭಾನುವಾರ ನಡೆದ ನೂತನ ಸಂಸತ್ ಭವನದ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿ ಮಹತ್ತರವಾದ ಕ್ಷಣಕ್ಕೆ ಸಾಕ್ಷಿಯಾಗಿರುವುದು ನನ್ನ ಅದೃಷ್ಟ ಎಂದು ಹೇಳಿದ್ದಾರೆ. ಈ ಕುರಿತು ಮಾತನಾಡಿರುವ ಮಾಜಿ ಪ್ರಧಾನಿ ಎಚ್‌ಡಿಡಿ ತನ್ನ ಜೀವಿತಾವಧಿಯಲ್ಲಿ ಹೊಸ ಸಂಸತ್ತಿನ ಕಟ್ಟಡದಲ್ಲಿ ಕುಳಿತುಕೊಳ್ಳುತ್ತೇನೆ ಎಂದು ಯೋಚಿಸಿರಲಿಲ್ಲ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಉಳಿಯುತ್ತೇನೆ ಎಂದು ಊಹಿಸಿರಲಿಲ್ಲ: ಭಾರತದ ಪ್ರಜಾಸತ್ತಾತ್ಮಕ ಇತಿಹಾಸದಲ್ಲಿ ಒಂದು ಮಹತ್ತರ ಕ್ಷಣಕ್ಕೆ ಸಾಕ್ಷಿಯಾಗಿರುವುದು ನನ್ನ ಅದೃಷ್ಟ. 1962ರಲ್ಲಿ ಕರ್ನಾಟಕ ವಿಧಾನಸಭೆಗೆ ಶಾಸಕನಾಗಿ, 1991ರಲ್ಲಿ ಸಂಸತ್ ಸದಸ್ಯನಾಗಿದ್ದೆ.

32 ವರ್ಷಗಳ ಹಿಂದೆ ನಾನು ಜನರ ಈ ಮಹಾನ್ ಸದನವನ್ನು ಪ್ರವೇಶಿಸಿದಾಗ ನಾನು ಪ್ರಧಾನಿಯಾಗುತ್ತೇನೆ ಎಂದು ನಾನು ಎಂದಿಗೂ ಭಾವಿಸಿರಲಿಲ್ಲ. ಸಾರ್ವಜನಿಕ ಜೀವನದಲ್ಲಿ ನಾನು ಇಷ್ಟು ದಿನ ಉಳಿಯುತ್ತೇನೆ ಎಂದು ಊಹಿಸಿರಲಿಲ್ಲ ಎಂದು ಹೇಳಿದ್ದಾರೆ.


ದೊಡ್ಡ ಆಶ್ಚರ್ಯವೆಂದರೆ ನನ್ನ ಜೀವಿತಾವಧಿಯಲ್ಲಿ ನಾನು ಹೊಸ ಸಂಸತ್ತಿನ ಕಟ್ಟಡದಲ್ಲಿ ಕುಳಿತುಕೊಳ್ಳುತ್ತೇನೆ ಎಂದು ನಾನು ಎಂದಿಗೂ ಯೋಚಿಸಿರಲಿಲ್ಲ. ಭಾರತೀಯ ಸಂಪ್ರದಾಯದಲ್ಲಿ ಹೊಸ ನಿರ್ಮಾಣ ಹಾಗೂ ಗೃಹಪ್ರವೇಶ ಅತ್ಯಂತ ಮಂಗಳಕರವಾಗಿದ್ದು ನೂತನ ಸಂಸತ್ ಭವನ ಉದ್ಘಾಟನೆ ಒಂದು ಅಸಾಧಾರಣವಾದ ಕ್ಷಣ ಎಂದು ಬಣ್ಣಿಸಿದ್ದಾರೆ.

ಜನತೆ ಪಾಠ ಕಲಿಸಿದ್ದಾರೆ: ಸ್ವಾತಂತ್ರ್ಯ ಬಂದಾಗಿನಿಂದಲೂ ನಮ್ಮ ಸಂಸತ್ತು ಏರಿಳಿತಗಳನ್ನು ಕಂಡಿದೆ ದೇಶದ ಜನತೆ ಜಾಗರೂಕರಾಗಿದ್ದಾರೆ ರಾಷ್ಟ್ರದ ಶಾಂತಿಗೆ ಚ್ಯುತಿ ತರಲು ಹೋದವರನ್ನು ಈ ಮನೆಯಿಂದ ಹೊರ ಕಳುಹಿಸಿದ್ದಾರೆ.

ಜನತೆ ರಾಜಕಾರಣಿಗಳಿಗೆ ಕಠಿಣ ಪಾಠಗಳನ್ನು ಕಲಿಸಿದ್ದಾರೆ. ನೂತನ ಸಂಸತ್ ಭವನದ ಉದ್ಘಾಟನೆಯ ಈ ಸಂದರ್ಭದಲ್ಲಿ ನಾನು ಭಾರತದ ಸಮಸ್ತ ಜನತೆಗೆ ವಂದಿಸುತ್ತೇನೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹೇಳಿದ್ದಾರೆ.


ಶಾರುಖ್ ಖಾನ್, ಅಕ್ಷಯ್ ಕುಮಾರ್ ಸಂಭ್ರಮಿಸಿದ್ದು ಹೀಗೆ..

ನವದೆಹಲಿ, ಮೇ 28– ನವ ಭಾರತಕ್ಕೆ ಹೊಸ ಸಂಸತ್ ಭವನವು ತನ್ನ ಕೊಡುಗೆ ನೀಡಲಿದೆ. ದೇಶದ ಅಭಿವೃದ್ಧಿ ಸಂಕೇತವಾಗಿದೆ ಎಂದು ಬಾಲಿವುಡ್ ನಟರಾದ ಶಾರುಖ್ ಖಾನ್ ಮತ್ತು ಅಕ್ಷಯ್ ಕುಮಾರ್ ಕೊಂಡಾಡಿದ್ದಾರೆ.



ಶನಿವಾರ ರಾತ್ರಿಯೇ ಸಂಸತ್ ಭವನದ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಶಾರುಖ್ ಖಾನ್, ಪ್ರಧಾನಿ ಮೋದಿಯವರಿಂದ ಉದ್ಘಾಟನೆಯಾಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ್ದರು.

'ನಮ್ಮ ಸಂವಿಧಾನವನ್ನು ಎತ್ತಿಹಿಡಿಯುವ, ಈ ಮಹಾನ್ ರಾಷ್ಟ್ರದ ಎಲ್ಲ ನಾಗರಿಕರನ್ನು ಪ್ರತಿನಿಧಿಸುವ ಹಾಗೂ ವಿವಿಧತೆಯಲ್ಲಿ ಏಕತೆಯನ್ನು ರಕ್ಷಿಸುವ ಜನರಿಗೆ ಎಂತಹ ಭವ್ಯ ನಿವಾಸ ನರೇಂದ್ರ ಮೋದಿಜೀ. ನವ ಭಾರತಕ್ಕಾಗಿ ಹೊಸ ಸಂಸತ್ತಿನ ಕಟ್ಟಡ. ಗತವೈಭವದ ಕನಸಿನೊಂದಿಗೆ ಭಾರತ. ಜೈ ಹಿಂದ್! #MyParliamentMyPride' ಎಂದು ಶಾರುಖ್ ತಮ್ಮ ಧ್ವನಿಯನ್ನು ಒಳಗೊಂಡ ವಿಡಿಯೊ ಜೊತೆಗೆ ಬರೆದಿದ್ದಾರೆ.



ನಟ ಅಕ್ಷಯ್ ಕುಮಾರ್ ಸಹ ಸಂಸತ್ ಭವನದ ವಿಡಿಯೋಗೆ ತಮ್ಮದೇ ಧ್ವನಿ ನೀಡಿ ಸಂಭ್ರಮಿಸಿದ್ದಾರೆ. 'ಸಂಸತ್ತಿನ ಈ ವೈಭವದ ಹೊಸ ಕಟ್ಟಡವನ್ನು ನೋಡಲು ಹೆಮ್ಮೆಯಾಗುತ್ತದೆ. ಇದು ಭಾರತದ ಬೆಳವಣಿಗೆಯ ಪ್ರತೀಕವಾಗಲಿ. #MyParliamentMyPride' ಎಂದು ಅವರು ಟ್ವೀಟ್ ಮಾಡಿದ್ದಾರೆ. ದೆಹಲಿಯ ಚಾಂದಿನಿ ಚೌಕ್ ಪ್ರದೇಶದಲ್ಲಿ ಹುಟ್ಟಿ ಬೆಳೆದಿರುವ ಅಕ್ಷಯ್, ಇಂಡಿಯಾ ಗೇಟ್ ಬಳಿಯಿರುವ ಹೆಚ್ಚಿನ ಕಟ್ಟಡಗಳನ್ನು ಬ್ರಿಟಿಷರು ನಿರ್ಮಿಸಿರುವುದನ್ನು ಬಾಲ್ಯದಲ್ಲಿ ಗಮನಿಸುತ್ತಿದ್ದೆ ಎಂದು ಹೇಳಿದ್ದಾರೆ.

ಇಂದು, ಈ ಹೊಚ್ಚಹೊಸ ಮತ್ತು ಭವ್ಯವಾದ ಹೊಸ ಕಟ್ಟಡವನ್ನು ನೋಡಿದಾಗ ನನ್ನ ಹೃದಯವು ಹೆಮ್ಮೆಯಿಂದ ತುಂಬಿದೆ, ಭಾರತೀಯ ಸಂಸತ್ತು ಪ್ರಜಾಪ್ರಭುತ್ವದ ದೇವಾಲಯವಾಗಿದೆ, ಇದು ನವ ಭಾರತದ ಸಂಕೇತವಾಗಿದೆ. ಭಾರತವು ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಮಾತ್ರವಲ್ಲದೆ ಪ್ರಗತಿಯೊಂದಿಗೆ ಜಗತ್ತಿನ ಜೊತೆ ಮುನ್ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ. ಈ ದಿನವನ್ನು ಸಾಧ್ಯವಾಗಿಸಿದ್ದಕ್ಕಾಗಿ ಅಕ್ಷಯ್ ಕುಮಾರ್, ಪ್ರಧಾನಿ ಮೋದಿಯನ್ನು ಅಭಿನಂದಿಸಿದ್ದಾರೆ. ಮುಂದಿನ ವರ್ಷಗಳಲ್ಲಿ ಭಾರತವು ಹೆಚ್ಚು ಹೆಚ್ಚು ಪ್ರಗತಿ ಹೊಂದಲು ದೇವರ ಆಶೀರ್ವಾದ ಇರಲಿದೆ ಎಂದು ಅವರು ಹೇಳಿದ್ದಾರೆ. ಅಕ್ಷಯ್ ಅವರ ಪೋಸ್ಟ್‌ಗೆ ಉತ್ತರಿಸಿರುವ ಪ್ರಧಾನಿ ಮೋದಿ, 'ಹೊಸ ಸಂಸತ್ ಭವನವು ನಿಜವಾಗಿಯೂ ನಮ್ಮ ಪ್ರಜಾಪ್ರಭುತ್ವದ ದಾರಿದೀಪವಾಗಿದೆ'ಎಂದು ಹೇಳಿದ್ದಾರೆ.



ಸಂಸತ್ ಭವನ ನಿರ್ಮಾಣ ಮಾಡಿದ ಕಾರ್ಮಿಕರನ್ನು ಸನ್ಮಾನಿಸಿದ ಪ್ರಧಾನಿ ಮೋದಿ.

ನಕ್ಕರೆ ಅದೇ ಸ್ವರ್ಗ

ಗಂಡ ಆಫೀಸ್‌ನಲ್ಲಿ ಕುಳಿತ್ತಿದ್ದಾಗ ಫೇಸ್‌ಬುಕ್‌ನಲ್ಲಿ ಸ್ಟೇಟಸ್ ಹಾಕಿದ
'ಹಕ್ಕಿಯಂತೆ ಬಾನಂಗಳದಲ್ಲಿ ಹಾರಾಡುವ ಆಸೆ'
ಕೆಳಗೆ ಹೆಂಡತಿ ಕಾಮೆಂಟ್ ಮಾಡಿದಳು
'ಭೂಮಿ ಮೇಲೆ ಕಾಲಿಟ್ಟಾಗ ಮನೆಗೆ ಕೊತ್ತಂಬರಿ ಸೊಪ್ಪು ತೆಗೆದುಕೊಂಡು ಬನ್ನಿ'

ಮೈಸೂರು ಮಿತ್ರ

ಸೋಮವಾರ, 29 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಹಣವಿಲ್ಲದ ಪುರುಷನನ್ನು ವೇಶ್ಯೆ ತೊರೆಯುತ್ತಾಳೆ, ಸೋತ ರಾಜನನ್ನು ಪ್ರಜೆಗಳು ತೊರೆಯುತ್ತಾರೆ, ಹಣ್ಣು ಬಿಡದ ಮರಗಳನ್ನು ಪಕ್ಷಿಗಳು ತೊರೆಯುತ್ತವೆ, ಪ್ರಪಂಚದಲ್ಲಿ ಎಲ್ಲರೂ ಲಾಭವನ್ನೇ ನೋಡುತ್ತಾರೆ. ಎಲ್ಲಿಯವರೆಗೆ ನಮ್ಮಲ್ಲಿ ಜನರಿಗೆ ಬೇಕಾದದ್ದು ಇದೆಯೋ ಅಲ್ಲಿಯವರೆಗೆ ಮಾತ್ರ ನಮಗೆ ಬೆಲೆ. – ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸೋಲೆ ಗೆಲುವಿನ ಸೋಪಾನ.

ನಿಮ್ಮ ಪತ್ರಗಳು

ಮುಖ್ಯಮಂತ್ರಿಗಳೇ ಗಮನಿಸಿ..!

ಮಾನ್ಯರೆ,

ಕರ್ನಾಟಕದ ಜನತೆ ನೀವೂ ನಿರೀಕ್ಷಿಸದ ರೀತಿಯಲ್ಲಿ ಬಹುಮತವನ್ನು ಏಕೆ ಕೊಟ್ಟಿದ್ದಾರೆಂದು ಯೋಚಿಸಿ.



ಜಾತಿ, ಮತ, ಧರ್ಮಗಳ ಜಂಜಾಟಕ್ಕೆ ಗುರಿ ಮಾಡಿದ ಭ್ರಷ್ಟ ವ್ಯವಸ್ಥೆಯ ವಿರುದ್ಧ ಮತ ನೀಡಿರುವ ಮತದಾರರ ಅನಿಸಿಕೆಯನ್ನು ಅರ್ಥ ಮಾಡಿಕೊಳ್ಳಲು ಮಾಧ್ಯಮಗಳಲ್ಲಿ ಬರುವ ಜನಾಭಿಪ್ರಾಯವನ್ನು ವಾರ್ತಾ ಇಲಾಖೆಯ ವರಿಷ್ಠಾಧಿಕಾರಿಗಳು ಗಮನಿಸಿ ನಿಮಗೆ ವರದಿಮಾಡುವ ಪ್ರಕ್ರಿಯೆ ಜಾರಿಗೆ ಬರಲಿ. ಜನರು ಉತ್ತಮ ಆಡಳಿತವನ್ನು ನಿರೀಕ್ಷಿಸಿದ್ದಾರೆ. ತಮ್ಮ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಬೇಕೆಂಬುವುದೇ ಜನರ ಆಶಯವಾಗಿದೆ.

ಸರಕಾರಿ ಕಚೇರಿಗಳಲ್ಲಿ ಪದೇ ಪದೆ ಎಡತಾಕುವ ಆಡಳಿತ ನಮಗೆ ಬೇಡ. ಕೊಟ್ಟ ಅರ್ಜಿಯ ಬಗ್ಗೆ ಒಂದು ವಾರದಲ್ಲೇ ಪರಿಹಾರ ಸಿಗುವಂತಾಗಬೇಕು. ಮಾನ್ಯ ಮುಖ್ಯಮಂತ್ರಿಗಳೇ ನೀವು ಏನೂ ನೀಡದಿದ್ದರೂ ಪರವಾಗಿಲ್ಲ ಜನರು ಪತ್ರಿಕೆಗಳ ಮೂಲಕ ಬರೆಯುವ ಪತ್ರಗಳಿಗೆ ಕಿವಿಯಾಗಿರಿ. ಜನರಿಗೆ ಕಡಿಮೆ ಬೆಲೆಗೆ ಪದಾರ್ಥಗಳು ಸಿಗುವಂತೆ ಮಾಡಲು ಈಗಿರುವ ತೆರಿಗೆ/ಅಧಿಕ ಕರಭಾರವನ್ನು ಕಡಿಮೆ ಮಾಡಿ. ಸರಕಾರಿ ಸಂಸ್ಥೆಗಳಲ್ಲಿ ಶಿಸ್ತನ್ನು ಮರುಸ್ಥಾಪಿಸಿ. ಜನಸಾಮಾನ್ಯರು ಸರಕಾರಿ ಕಚೇರಿಗೆ ಹೋದಾಗ ಏಕೆ ಬಂದಿದ್ದೀರಾ ಎಂದು ಕೇಳುವ ಪ್ರವೃತ್ತಿಯೇ ಇಲ್ಲವಾಗಿದೆ. ಇದನ್ನು ತಪ್ಪಿಸಿ ಪ್ರತಿ ಕಚೇರಿಯಲ್ಲೂ ಒಬ್ಬ ಸಿಬ್ಬಂದಿಯನ್ನು ಸ್ವಾಗತಕಾರರನ್ನಾಗಿ ಕೂರಿಸಿ ಜನರ ನೆರವಿಗೆ ಆತ ಬರುವಂತೆ ಮಾಡಬೇಕು. ಇಷ್ಟೆಲ್ಲ ಈಗ ಇಲ್ಲವಾ ಎಂದು ಕೇಳಬೇಡಿ. ಹಲವೆಡೆ ಸರಕಾರಿ ನೌಕರರು ನಿರೀಕ್ಷೆಗೂ ಮೀರಿ ಉತ್ತಮ ಕೆಲಸ ಮಾಡುತ್ತಾರೆ. ಇದರ ಅನುಭವ ನನಗಾಗಿದೆ.

ಮೈಸೂರು ನಗರ ಪಾಲಿಕೆಯ ಹೆಬ್ಬಾಳು ಕಚೇರಿಯಲ್ಲಿ ಸಹಾಯಕ ಆಯುಕ್ತರ ಪ್ರಭಾರದಲ್ಲಿದ್ದ ಸಿಬ್ಬಂದಿಯೋರ್ವರು ಸುಮಾರು ಎಂಟು ವರ್ಷಗಳಿಂದ ಬಗೆಹರಿಯದ ಒಂದು ಸಮಸ್ಯೆಗೆ ಪರಿಹಾರ ಸೂಚಿಸಿ ಕೆಲಸ ಮಾಡಿಕೊಟ್ಟರು.

ಎಲ್ಲ ಕಚೇರಿಯಲ್ಲೂ ಅಧಿಕಾರಿಗಳು ಹೀಗೇ ಇದ್ದರೆ ಎಷ್ಟು ಚೆನ್ನ ಎನಿಸಿತು. ಉತ್ತಮವಾಗಿ ಕೆಲಸ ಮಾಡುವ ಸರಕಾರಿ ನೌಕರರಿಗೆ ಪುರಸ್ಕಾರ ನೀಡುವ ರೂಢಿಯಿದೆಯಾದರೂ ಪರಿಣಾಮಕಾರಿಯಾಗಿ ಅರ್ಹರನ್ನು ಗುರುತಿಸುವ ಕೆಲಸವಾಗಬೇಕು. ಸರಕಾರಿ ನೌಕರರು ಕೆಲಸ ಮಾಡಲು ಅಡ್ಡಿ ಆತಂಕಗಳಿಲ್ಲದಂತೆ ನೋಡಿಕೊಳ್ಳಬೇಕು. ಆಗಷ್ಟೇ ಜನರು ನಿಮ್ಮನ್ನು... ನಿಮ್ಮ ಆಡಳಿತವನ್ನೂ ಮೆಚ್ಚುತ್ತಾರೆ.

– ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಚಾ.ನಗರದ ಜೈ ಭುವನೇಶ್ವರಿ ವೃತ್ತದಲ್ಲಿ ಅಪಘಾತಗಳನ್ನು ತಪ್ಪಿಸಿ

ಮಾನ್ಯರೆ,

ಚಾಮರಾಜನಗರ ಜಿಲ್ಲೆ ಹಲವಾರು ಅಭಿವೃದ್ಧಿಯ ಕಾರ್ಯಗಳಿಂದ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿಯಿಂದ ಹೊರಬರಲು ಪ್ರಯತ್ನಿಸುತ್ತಿದೆ. ಇಂತಹ ನಗರದ ಪ್ರಮುಖ ಭಾಗವಾಗಿರುವ ಜೈ ಭುವನೇಶ್ವರಿ ವೃತ್ತ (ಪಚ್ಚಪ್ಪ ಸರ್ಕಲ್)ದಲ್ಲಿ ದಿನನಿತ್ಯ ಸಾವಿರಾರು ಜನರು, ವಾಹನಗಳು ಓಡಾಡುತ್ತಿದ್ದು, ವೃತ್ತದಲ್ಲಿರುವ ಸಿಗ್ನಲ್ ಲೈಟ್ ಕೆಟ್ಟಿರುವುದರಿಂದ ಮತ್ತು ಟ್ರಾಫಿಕ್ ಪೊಲೀಸರು ಸರಿಯಾಗಿ ಕರ್ತವ್ಯ ನಿರ್ವಹಿಸದೆ ಇರುವ ಕಾರಣ ಅಪಘಾತಗಳು ಸಂಭವಿಸುತ್ತಿವೆ.

ವೃತ್ತದ ಅಕ್ಕಪಕ್ಕ ಕರ್ನಾಟಕ ರಸ್ತೆ ಸಾರಿಗೆ ಬಸ್ ನಿಲ್ದಾಣ, ಸಾರ್ವಜನಿಕ ಸರ್ಕಾರಿ ಆಸ್ಪತ್ರೆ, ಪೆಟ್ರೋಲ್ ಬಂಕ್, ಶ್ರೀ ಚಾಮರಾಜೇಶ್ವರ ದೇವಸ್ಥಾನ ಹಾಗೂ ಶಾಲಾ ಕಾಲೇಜುಗಳು ಇರುವ ಕಾರಣ ದಿನನಿತ್ಯ ಓಡಾಡುವ ಜನರು ಮತ್ತು ಸಂಚರಿಸುವ ವಾಹನಗಳ ಸಂಖ್ಯೆ ಹೆಚ್ಚು.

ಈ ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್ ಕೆಟ್ಟು ಬಹಳ ದಿನಗಳೇ ಕಳೆದಿವೆ. ಇಂತಹ ಸಮಯದಲ್ಲಿ ಈ ವೃತ್ತದಲ್ಲಿ 4 ಕಡೆಯಿಂದಲೂ ವಾಹನ ದಟ್ಟಣೆ ಉಂಟಾಗುತ್ತಿದ್ದು, ದಿನನಿತ್ಯ ಸಣ್ಣ-ಪುಟ್ಟ ಅಪಘಾತಗಳು ಸಂಭವಿಸುತ್ತಿವೆ. ಕರ್ತವ್ಯನಿರತ ಟ್ರಾಫಿಕ್ ಪೋಲಿಸರು ವೃತ್ತದಲ್ಲಿರುವ ಪೊಲೀಸ್ ಚೌಕಿಯಲ್ಲಿ ಇದಕ್ಕೂ ತಮಗೂ ಸಂಬಂಧವಿಲ್ಲವೆಂಬಂತೆ ಆರಾಮಾಗಿ ಮೊಬೈಲ್‌ನಲ್ಲಿ ಮಾತನಾಡುತ್ತಾ ಕುಳಿತಿರುತ್ತಾರೆ. ಇದು ಬಹಳ ನೋವಿನ ಸಂಗತಿ.

ಸಂಬಂಧಪಟ್ಟ ಅಧಿಕಾರಿಗಳು ಈ ವೃತ್ತದಲ್ಲಿರುವ ಸಿಗ್ನಲ್ ದೀಪಗಳನ್ನು ಸರಿಪಡಿಸಿ, ರಸ್ತೆಯಲ್ಲಿ ವಾಹನ ಸವಾರರಿಗೆ ಕಟ್ಟುನಿಟ್ಟಿನ ಕ್ರಮಗಳೊಂದಿಗೆ ರಸ್ತೆಯ ನಿಯಮವನ್ನು ಪಾಲಿಸಲು ಸೂಚಿಸುವಂತಹ ಟ್ರಾಫಿಕ್ ಪೊಲೀಸರನ್ನು ಕರ್ತವ್ಯಕ್ಕೆ ನೇಮಿಸಿ ಅಪಘಾತಗಳನ್ನು ತಪ್ಪಿಸುವಂತೆ ಮನವಿ.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು

'ಸೆಲೆಬ್ರಿಟಿ'

ಮಾನ್ಯರೆ,

'ಪ್ರಜಾಪ್ರಭುತ್ವ ಹಬ್ಬವೆಂದರೆ...' (ಪ್ರೊ. ಆರ್. ಇಂದಿರಾ ಅವರ ಮೇ 11ರ 'ಸಮಾಜಮುಖಿ' ಅಂಕಣ ಬರಹ).

ಉಳಿದದ್ದು ಹಾಗಿರಲಿ, ಪ್ರೊ. ಇಂದಿರಾ ಅವರ ಈ ಪ್ರಶ್ನೆ ಅರ್ಥಪೂರ್ಣವಾಗಿತ್ತು. "ಚುನಾವಣೆಗಳು ಪ್ರಜಾಪ್ರಭುತ್ವದ ಮೂಲಸ್ತಂಭ. ಇಲ್ಲಿ 'ಸೆಲೆಬ್ರಿಟಿ ಮತದಾರರು' ಮತ್ತು 'ಸಾಮಾನ್ಯ ಮತದಾರರು' ಎಂಬ ಎರಡು ವರ್ಗಗಳಾಗಿ ವಿಂಗಡಿಸಿಲ್ಲ. ಆದರೆ ಪದೇ ಪದೆ ಇವರನ್ನು ತೋರಿಸಿ, ಅದರಿಂದ ಪ್ರಜಾಪ್ರಭುತ್ವದ ಮಹತ್ವದ ಬಗ್ಗೆ ತಿಳಿವಳಿಕೆ ನೀಡಿಸಿದ್ದು ಎಷ್ಟರ ಮಟ್ಟಿಗೆ... ಗಣ್ಯರನ್ನು ವೈಭವೀಕರಿಸುವ ಸಂಸ್ಕೃತಿಯಿಂದ ನಾವು ಹೊರಬರುವುದು ಯಾವಾಗ?"

ಪತ್ರಿಕೆಯೊಂದು 'ಸೆಲೆಬ್ರಿಟಿ ಮಾತು' ಎಂದು ಪ್ರತಿದಿವಸ ಒಬ್ಬೊಬ್ಬರ ಹೇಳಿಕೆಯನ್ನು ಪ್ರಕಟಿಸುತ್ತಿತ್ತು. ಅದರಲ್ಲಿ ಅರ್ಥವಿದೆಯೇ? ಪ್ರಜಾಪ್ರಭುತ್ವದಲ್ಲಿ ಎಲ್ಲರೂ 'ಸೆಲೆಬ್ರಿಟಿ'ಗಳೇ ಅಲ್ಲವೆ?

ಕರ್ಮ: ಚುನಾವಣೆಯಲ್ಲಿ ಮತ ಹಾಕಿ, ಸಾಂವಿಧಾನಿಕ ಕರ್ತವ್ಯ ಪಾಲಿಸಿದ ತಪ್ಪಿಗೆ ಅಳಿಸಲಾಗದ 'ಮಸಿ' ಬಳಿಸಿಕೊಂಡದ್ದಾಯಿತು: ಕರ್ಮ!

– ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಪ್ರೀತಿನೇ ಆಸ್ತಿಯೋ... ಆಸ್ತಿನೇ ಪ್ರೀತಿಯೋ...?



"ಮನುಷ್ಯನು ಪ್ರಾಣಿಗಳಿಂದ ಕಲಿಯುವುದು ಬಹಳಷ್ಟಿದೆ. ಪ್ರಾಣಿ-ಪಕ್ಷಿಗಳು ತಮ್ಮ ಮರಿಗಳಿಗೆ ಮನುಷ್ಯನಿಗಿಂತ ಉತ್ತಮವಾಗಿ ಜೀವನಪಾಠವನ್ನು ಮಾಡುತ್ತವೆ. ಯಾವುದೇ ಹುಲಿಯು ತನ್ನ ಮಕ್ಕಳಿಗೆ ಜಿಂಕೆ ವನವನ್ನು ಸ್ಥಾಪಿಸಿ, ಕುಳಿತಲ್ಲಿಯೇ ತಿನ್ನಲು ವ್ಯವಸ್ಥೆ ಮಾಡಿರುವುದಿಲ್ಲ, ಬದಲಿಗೆ ಹುಲಿಯು ಮರಿಗಳಿಗೆ ಬೇಟೆ ಆಡುವುದನ್ನು ಕಲಿಸುತ್ತದೆ, ಹಾಗೆ ಪಕ್ಷಿಗಳು ಸಹ ಆಹಾರ ಸಂಪಾದನೆಯ ಪಾಠ ಕಲಿಸುತ್ತವೆ, ಮರಿಗಳು ದೊಡ್ಡದಾದ ಮೇಲೂ ಅವುಗಳಿಗೆ ಆಹಾರ ತಂದು ನೀಡುವುದಿಲ್ಲ. ಆದರೆ ಮನುಷ್ಯ ಮಾತ್ರ ತ್ಯಾಗ, ಪ್ರೀತಿ, ನಿಸ್ವಾರ್ಥ ಎಂದು ಮಕ್ಕಳಿಗೆ ಕತ್ತೆಗಾಗುವಷ್ಟು ವಯಸ್ಸಾಗಿದ್ದರೂ ತಮ್ಮ ಮಕ್ಕಳು ಕುಳಿತಲ್ಲಿಯೇ ತಿನ್ನಬೇಕು ಎಂದು ಒಂದು ರೀತಿಯ ವಿಚಿತ್ರ ಪ್ರೀತಿಯನ್ನು ಹೊಂದಿರುತ್ತಾರೆ. ಅದರಿಂದಲೇ ಅನೇಕ ಊಹಿಸಲಾಗದ ಅನಾಹುತಗಳು ಸಂಭವಿಸುತ್ತಿರುವುದು. ಮಕ್ಕಳನ್ನು ಬಾಲ್ಯದಲ್ಲಿ ಉತ್ತಮ ರೀತಿಯಲ್ಲಿ ಬೆಳೆಸಬೇಕು, ಅವರಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡಿಸಬೇಕು, ಅವರು ತಮ್ಮ ಕಾಲ ಮೇಲೆ ನಿಲ್ಲುವಂತೆ ಮಾಡಬೇಕು. ಎಲ್ಲದಕ್ಕೂ ಪೋಷಕರನ್ನೇ ಆಶ್ರಯಿಸಬೇಡ ಎನ್ನುವ ಪಾಠ ಮಾಡಬೇಕು.

"ನೀವು ನಮಗೆ ಕೊಡೋಕೆ ಅಂತ ಏನ್ ಆಸ್ತಿ ಮಾಡಿ ಇಟ್ಟಿದೀರಾ?, ಹುಡುಗನ ಮನೆ ಕಡೆ ಸೌಂಡ್ ಆಗಿದಾರಾ? ಅಂದ್ರೆ ಹುಡುಗನಿಗೆ ಕೆಲಸ ಅಷ್ಟೇ ಅಲ್ಲದೆ ಮನೆ ಕಡೆ ಆಸ್ತಿ-ಪಾಸ್ತಿ ಹೇಗೆ ಅಂತ? ಹುಡುಗಿ ಮನೆಯವರು ಸೈಟ್-ಗೀಟ್ ಏನಾದ್ರೂ ಕೊಡ್ತಾರಾ? ಹುಡುಗಿ ತಂದೆಗೆ ಬರೀ ಹೆಣ್ಮಕ್ಕಳೇ ಅಲ್ವೆ, ಇರೋ ಆಸ್ತೀನ ಅಳಿಯಂದಿರಿಗೆ ಕೊಡದೆ ಇನ್ನಾರಿಗೆ ಕೊಡ್ತಾರೆ?, ಮದುವೆ ಆದ ಹೊಸದರಲ್ಲಿ ಚೆನ್ನಾಗೇ ನೋಡ್ಕೋತಾ ಇದ್ರು, ಕೇಳಿದಷ್ಟು ವರದಕ್ಷಿಣೆ ಕೊಟ್ಟಿರಲಿಲ್ಲ ಅಂತ ಈಗ ಹುಡುಗಿಗೆ ಹಿಂಸೆ ಕೊಡ್ತಾ ಇದಾರೆ... ಈ ಥರದ ಮಾತುಗಳನ್ನು ನಿತ್ಯಬದುಕಿನಲ್ಲಿ ಅಲ್ಲಲ್ಲಿ ಆಗಾಗ್ಗೆ ನಾವು ನೀವು ಕೇಳುತ್ತಾ ಇರಬಹುದು. ಹೌದು ಇಂದು ಮನುಷ್ಯನ ಸಂಬಂಧಗಳು ಏರ್ಪಾಡಾಗೋದು ಪ್ರೀತಿಗಿಂತ ಆಸ್ತಿಯ ಆಧಾರದ ಮೇಲೆ ಅಂದರೆ ತಪ್ಪಾಗಲಾರದು. ಹಿಂದೆ 'ಒಲವೇ ಜೀವನ ಸಾಕ್ಷಾತ್ಕಾರ' ಅನ್ನುತ್ತಿದ್ದರು, ಇಂದು 'ಒಲವೇ ಜೀವನ ಲೆಕ್ಕಾಚಾರ' ಅನ್ನುವ ಮಟ್ಟಕ್ಕೆ ಬಂದು ನಿಂತಿದೆ. ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ಒಳ್ಳೆಯತನ, ಪ್ರಾಮಾಣಿಕತೆ, ನೈಜ ಪ್ರೀತಿ, ಕಾಳಜಿ ಎಲ್ಲವೂ ಕೊಚ್ಚಿ ಹೋಗುತ್ತಿವೆ. ಸ್ವಾರ್ಥ ಪ್ರಪಂಚದಲ್ಲಿ ಅಗೋಚರವಾದ, ಅದಮ್ಯವಾದ, ಅಪೂರ್ವ ಎನಿಸುವ, ಅನನ್ಯವಾದ, ಅಳತೆ ಮಾಡಲಾಗದ ಪ್ರೀತಿಗಿಂತ ಕಣ್ಣಿಗೆ ಕಾಣುವ, ಲಾಭ ತಂದುಕೊಡುವ, ಅಳತೆ ತೂಕಕ್ಕೆ ಸಿಗುವ ಆಸ್ತಿಯೇ ಮುಖ್ಯವೆನಿಸುತ್ತಿರುವುದು ವಿಪರ್ಯಾಸ. ಮನುಷ್ಯ ಅನ್ಯರನ್ನು ದ್ವೇಷಿಸುವಷ್ಟು ಸುಲಭವಾಗಿ ಪ್ರೀತಿಸಲು ಸಾಧ್ಯವಾಗದೇ ಇರುವುದು ದುರದೃಷ್ಟಕರ!

ಬದುಕು ಮಾಯೆಯ ಆಟ. ಭೂಮಿಯ ಮೇಲಿನ ಪ್ರತಿಯೊಂದು ಜೀವಿಯು ಬದುಕಲು ಆಹಾರ, ಆಶ್ರಯ, ಆರೋಗ್ಯದಷ್ಟೇ ಪ್ರೀತಿ, ಸ್ನೇಹ, ವಿಶ್ವಾಸ, ನಂಬಿಕೆ ಇವುಗಳು ಸಹ ಅತ್ಯವಶ್ಯ. ಪ್ರಾಣಿ-ಪಕ್ಷಿಗಳು ಸಹ ತಮ್ಮ ಪ್ರೀತಿಯನ್ನು ಅನೇಕ ಬಗೆಯಲ್ಲಿ ವ್ಯಕ್ತಪಡಿಸುವುದನ್ನು ಕಂಡಿರಬಹುದು. ಆದರೆ ಮನುಷ್ಯನ ವಿಷಯದಲ್ಲಿ ಪ್ರೀತಿ ಎಂಬುದು ಒಂದು ವಿಶೇಷವಾದ ಅನುಭೂತಿ. ಅದನ್ನು ವ್ಯಕ್ತಪಡಿಸಲು ಅನೇಕ ಮಾರ್ಗ, ಕ್ರಮ, ನೀತಿ, ರೀತಿ ಎಲ್ಲವೂ ಇದೆ. 'ದೂರದ ಬೆಟ್ಟ' ಎಂಬ ಕನ್ನಡ ಚಿತ್ರದಲ್ಲಿನ ಒಂದು ಹಾಡು ಆಲ್ ಟೈಮ್ ಫೇವರಿಟ್ ಎನ್ನಬಹುದು. ಚಿ.ಉದಯಶಂಕರ್ ಅವರ ರಚನೆಯ 'ಪ್ರೀತಿನೇ ಆ ದ್ಯಾವ್ರು ತಂದ ಆಸ್ತಿ ನಮ್ಮ ಬಾಳ್ವೆಗೆ, ಹಸಿವಿನಲ್ಲೂ ಹಬ್ಬಾನೇ, ದಿನವು ನಿತ್ಯ ಉಗಾದಿನೇ, ನನ್ನ ನಿನ್ನ ಪಾಲಿಗೆ' ಎಂಬ ಗೀತೆಯು ಬದುಕಿನಲ್ಲಿ ಪ್ರೀತಿಯೇ ದೊಡ್ಡ ಆಸ್ತಿ ಎಂಬ ಸಂದೇಶವನ್ನು ಸಾರುತ್ತದೆ. ಅದಕ್ಕೆ ಅಷ್ಟೇ ಜೀವ ತುಂಬಿ ಡಾ.ರಾಜಕುಮಾರ್ ಹಾಗೂ ಡಾ.ಭಾರತಿ ಅಭಿನಯಿಸಿದ್ದಾರೆ. ಆದರೆ ಪ್ರೀತಿಯೇ ಆಸ್ತಿ ಆಗುವ ಬದಲು ಆಸ್ತಿಯೇ ದೊಡ್ಡ ಪ್ರೀತಿ ಆಗುತ್ತಿದೆ ಎಂಬುದನ್ನು ಇಂದಿನ ಜಮಾನದಲ್ಲಿ ನಡೆಯುತ್ತಿರುವ ಘಟನೆಗಳು ನಿರೂಪಿಸುತ್ತಲೇ ಇವೆ.

ಆಸ್ತಿಗಾಗಿ ಹೆತ್ತವರನ್ನೇ ಕೊಂದ ಮಗ, ಆಸ್ತಿ ವಿಷಯಕ್ಕೆ ಸಹೋದರ/ಸಹೋದರಿಯ ಕೊಲೆ, ವರದಕ್ಷಿಣೆ ಕೊಡದ ಕಾರಣಕ್ಕೆ ಸೊಸೆಗೆ ಬೆಂಕಿ ಹಚ್ಚಿದ ಅತ್ತೆ-ಮಾವ, ಆಸ್ತಿ ಇಲ್ಲದ ಕಾರಣಕ್ಕೆ ಪತಿಯನ್ನು ತೊರೆದ ಪತ್ನಿ, ಆಸ್ತಿ ಕೊಡಲಿಲ್ಲ ಎಂದ ಕಾರಣಕ್ಕೆ ಹೆತ್ತವರನ್ನು ಬೀದಿಗೆ ತಳ್ಳಿದ ಮಕ್ಕಳು, ತಂದೆ ಆಸ್ತಿಯಲ್ಲಿ ತಮಗೂ ಪಾಲು ಬರಬೇಕು ಎಂದು ಕೋರ್ಟ್ ಮೆಟ್ಟಿಲು ಹತ್ತಿದ ಪುತ್ರಿಯರು... ಈ ರೀತಿಯ ಸುದ್ದಿಗಳು ಆಗಾಗ್ಗೆ ಪತ್ರಿಕೆಗಳಲ್ಲಿ, ನ್ಯೂಸ್ ಚಾನೆಲ್‌ಗಳಲ್ಲಿ ಸದ್ದು ಮಾಡುತ್ತಿರುತ್ತವೆ. ಅದರಲ್ಲೂ ಹೆತ್ತವರು-ಮಕ್ಕಳು, ಗಂಡ-ಹೆಂಡತಿ ನಡುವಿನ ಸಂಬಂಧಕ್ಕೆ ಪ್ರೀತಿ ಎಂಬುದು ಬಹುಮುಖ್ಯವಾದ ವಾಹಿನಿ ಆಗಬೇಕಿತ್ತು, ದುರದೃಷ್ಟವಶಾತ್ ಆಸ್ತಿಯೇ ವಾಹಿನಿಯಾಗಿ ಮಾರ್ಪಾಡಾಗುತ್ತಿರುವುದು ಉತ್ತಮ ಬೆಳವಣಿಗೆ ಅಲ್ಲ. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು 'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?... ಪ್ರೀತಿ ಇಲ್ಲದ ಮೇಲೆ ಮಾತಿಗೆ ಮಾತು ಕೂಡೀತು ಹೇಗೆ?' ಎಂದು ತಮ್ಮ ಕವನವೊಂದರಲ್ಲಿ ಹೇಳಿದ್ದಾರೆ. ಅದು ಇಂದು ಆಸ್ತಿ ಇಲ್ಲದ ಮೇಲೆ ಪ್ರೀತಿ ಹುಟ್ಟೀತು ಹೇಗೆ? ಆಸ್ತಿ ಇಲ್ಲದ ಮೇಲೆ ಮಾತಿಗೆ ಮಾತು ಕೂಡೀತು ಹೇಗೆ' ಎಂದು ಬದಲಾಗಿಬಿಟ್ಟಿದೆ ಎಂದರೆ ಆಶ್ಚರ್ಯಪಡಬೇಕಿಲ್ಲ.

'ಮಕ್ಕಳಿಗೆ ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ' ಎಂದು ಮಹಾತ್ಮರೊಬ್ಬರು ಹೇಳಿದ್ದಾರೆ. ಆದರೆ ಮಕ್ಕಳನ್ನು ಆಸ್ತಿಯನ್ನಾಗಿ ಮಾಡಿದರೂ, ಆ ಮಕ್ಕಳು ನಮಗೆ ಮಾಡಿಟ್ಟಿರುವ ಆಸ್ತಿ ಎಲ್ಲಿ? ಎಂದು ಬಹುಪಾಲು ಮಕ್ಕಳು ಇಳಿವಯಸ್ಸಿನ ಹೆತ್ತವರನ್ನು ಕೇಳುವ ಸಾಮಾನ್ಯ ಪ್ರಶ್ನೆಯಾಗಿದೆ. ಅವರನ್ನು ಹೆತ್ತದ್ದು, ಹೊತ್ತದ್ದು, ತಮಗೆ ಒಳ್ಳೆಯ ಊಟ, ಬಟ್ಟೆ ಇರದಿದ್ದರೂ ಮಕ್ಕಳಿಗೆ ಅಂತ ಒಳ್ಳೆಯದ್ದನ್ನು ಕೊಟ್ಟಿದ್ದು, ಮಕ್ಕಳಿಗೋಸ್ಕರ ಪಟ್ಟ ಶ್ರಮ, ಅವರಿಗೋಸ್ಕರ ಮಾಡಿದ ತ್ಯಾಗ, ಅವರಿಗೋಸ್ಕರ ಹಗಲಿರುಳು ತೋರಿದ ತೋರಿಕೆಯಲ್ಲದ ಪ್ರೀತಿ, ಎಲ್ಲವೂ ಕಣ್ಣಿಗೆ ಕಾಣದ ಸಂಗತಿಗಳಾಗಿವೆ. ಬಾಲ್ಯದಲ್ಲಿ ಅಪ್ಪ ಅಮ್ಮ ಏನೂ ಬೇಸರಿಸಿಕೊಳ್ಳದೆ ಮಕ್ಕಳ ಅಂಡು ತೊಳೆದದ್ದು ಮಕ್ಕಳಿಗೆ ದೊಡ್ಡ ವಿಷಯ ಅನಿಸುವುದೇ ಇಲ್ಲ. ಬೆಳೆದು ನಿಂತಾಗ ಬೆಲೆಬಾಳುವಂತದ್ದು ಏನು ಮಾಡಿದ್ದೀರಿ? ಅದರಲ್ಲಿ ನನಗೆ ಏನು ಕೊಡುತ್ತೀರಿ? ಎಂದು ನೇರವಾಗಿ ಕೇಳುತ್ತಾರೆ. ಏನೂ ಸಿಗುವುದಿಲ್ಲ ಎಂದು ತಿಳಿದರೆ ಹೆತ್ತವರ ಕೈಗೆ ಸಿಗದೇ ಅವರನ್ನು ಅತಂತ್ರ ಮಾಡಿಬಿಡುವ ವ್ಯವಸ್ಥೆ ಇಂದು ನಿರ್ಮಾಣವಾಗಿದೆ. ಅದಕ್ಕಾಗಿ ಇಂದು ವೃದ್ಧಾಶ್ರಮಗಳಲ್ಲಿ ಹಿರಿಯ ಜೀವಿಗಳು ತಾವು ಮಾಡಿದ ತಪ್ಪುಗಳಿಗೆ ಪರಿತಪಿಸುತ್ತಾ, ಪಶ್ಚಾತ್ತಾಪಪಡುತ್ತಾ ತಮ್ಮನ್ನೇ ದೂಷಿಸಿಕೊಳ್ಳುತ್ತಾ ದಿನದೂಡುತ್ತಿದ್ದಾರೆ. 'ತಾವು ಎಲ್ಲವನ್ನೂ ಮಕ್ಕಳಿಗೆ ಅಂತ ಮಾಡಬಾರದಿತ್ತು, ನಾವು ಗಂಡ ಹೆಂಡತಿ ನಮ್ಮ ಬದುಕಿನ ಸೌಖ್ಯವನ್ನು ಸ್ವಲ್ಪ ನೋಡಿಕೊಳ್ಳಬೇಕಿತ್ತು' ಎಂದು ಕೊರಗುತ್ತಿರುವುದು ವೃದ್ಧಾಶ್ರಮದ ಗೋಡೆಗಳಿಗೆ ಮಾತ್ರ ಕೇಳಿಸುತ್ತಿದೆ.

ಇಂದಿನ ಪ್ರಪಂಚದಲ್ಲಿ ಐಷಾರಾಮದ ಹುಚ್ಚು ಬಹುಪಾಲು ಜನರ ತಲೆಗೆ ಹತ್ತಿದೆ. ಮನೆಯ ಯಜಮಾನ ಎಷ್ಟೇ ದುಡಿದರೂ ಮನೆ ಮಂದಿಯ ಆಸೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಮನೆಯಲ್ಲಿ ಗಂಡ-ಹೆಂಡತಿಯ ನಡುವೆ ಪ್ರೀತಿಯೆಂಬ ಇಟ್ಟಿಗೆ ಸೇತುವೆಯಾಗಿ ಕೆಲಸ ಮಾಡಬೇಕಿದೆ. ಆದರೆ ಇಂದು ಆಸ್ತಿ ಎಂಬ ಇಟ್ಟಿಗೆ ಇಬ್ಬರ ನಡುವೆ ಗೋಡೆಯನ್ನೇ ನಿರ್ಮಿಸುತ್ತಿದೆ. 'ಪ್ರೀತಿ ಇಲ್ಲದಿದ್ದರೂ ಮನೆಯಲ್ಲಿ ಇರಬಲ್ಲೆ, ಆದರೆ ಆಸ್ತಿ ಇಲ್ಲದಿದ್ದರೆ ಇರಲು ಒಲ್ಲೆ' ಎಂಬ ಮನೋಭಾವ ಬಹುಪಾಲು ಪತಿ/ಪತ್ನಿಯರದಾಗಿದೆ. ಹಾಗೆಯೇ ಅನೇಕ ಹೆಣ್ಣು ಮಕ್ಕಳಿಗೆ ಇಂದು ತವರು ಮನೆ ಎಂಬುದು ನೆಮ್ಮದಿಯ ತಾಣವಾಗಿಲ್ಲ. ಆಸ್ತಿಗಾಗಿ ಕೋರ್ಟ್ ಮೆಟ್ಟಿಲೇರಿ ಅಣ್ಣ-ತಂಗಿ, ಅಕ್ಕ-ತಮ್ಮ ಬಾಂಧವ್ಯಕ್ಕೆ ದೊಡ್ಡ ಕಂದಕವನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಎಲ್ಲರೂ ಇದ್ದರೂ ಒಂದು ರೀತಿಯ ಅನಾಥ ಪ್ರಜ್ಞೆಯನ್ನು ಅನೇಕ ಹೆಣ್ಣುಮಕ್ಕಳು ಅನುಭವಿಸುತ್ತಿದ್ದಾರೆ.

ಈ ವಿಚಾರದಲ್ಲಿ ಮನುಷ್ಯನು ಪ್ರಾಣಿಗಳಿಂದ ಕಲಿಯುವುದು ಬಹಳಷ್ಟಿದೆ ಎನ್ನಬಹುದು. ಪ್ರಾಣಿ-ಪಕ್ಷಿಗಳು ತಮ್ಮ ಮರಿಗಳಿಗೆ ಮನುಷ್ಯನಿಗಿಂತ ಉತ್ತಮವಾಗಿ ಜೀವನಪಾಠವನ್ನು ಮಾಡುತ್ತವೆ. ಯಾವುದೇ ಹುಲಿಯು ತನ್ನ ಮರಿಗಳಿಗೆ ಜಿಂಕೆ ವನವನ್ನು ಸ್ಥಾಪಿಸಿ, ಕುಳಿತಲ್ಲಿಯೇ ತಿನ್ನಿ ಎನ್ನುವುದಿಲ್ಲ, ಬದಲಿಗೆ ಹುಲಿಯು ಮರಿಗಳಿಗೆ ಬೇಟೆ ಆಡುವುದನ್ನು ಕಲಿಸುತ್ತದೆ. ಹಾಗೆಯೆ ಪಕ್ಷಿಗಳು ಸಹ ಮರಿಗಳಿಗೆ ಆಹಾರ ಸಂಪಾದನೆಯ ಪಾಠ ಕಲಿಸುತ್ತವೆಯೇ ಹೊರತು ಮರಿಗಳು ದೊಡ್ಡದಾದ ಮೇಲೂ ಅವುಗಳಿಗೆ ಆಹಾರ ತಂದು ನೀಡುವುದಿಲ್ಲ. ಆದರೆ ಮನುಷ್ಯ ಮಾತ್ರ ತ್ಯಾಗ, ಪ್ರೀತಿ, ನಿಸ್ವಾರ್ಥ ಎಂದು ಮಕ್ಕಳಿಗೆ ಕತ್ತೆಗಾಗುವಷ್ಟು ವಯಸ್ಸಾಗಿದ್ದರೂ ತಮ್ಮ ಮಕ್ಕಳು ಕುಳಿತಲ್ಲಿಯೇ ತಿನ್ನಬೇಕು ಎಂದು ಒಂದು ರೀತಿಯ ವಿಚಿತ್ರ ಪ್ರೀತಿಯನ್ನು ಹೊಂದಿರುತ್ತಾರೆ. ಅದರಿಂದಲೇ ಅನೇಕ ಊಹಿಸಲಾಗದ ಅನಾಹುತಗಳು ಸಂಭವಿಸುತ್ತಿರುವುದು. ಮಕ್ಕಳನ್ನು ಬಾಲ್ಯದಲ್ಲಿ ಉತ್ತಮ ರೀತಿಯಲ್ಲಿ ಬೆಳೆಸಬೇಕು, ಅವರಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡಿಸಬೇಕು, ಅವರು ತಮ್ಮ ಕಾಲ ಮೇಲೆ ನಿಲ್ಲುವಂತೆ ಮಾಡಬೇಕು. ಎಲ್ಲದಕ್ಕೂ ಪೋಷಕರನ್ನೇ ಆಶ್ರಯಿಸಬೇಡ ಎನ್ನುವ ಪಾಠ ಮಾಡಬೇಕು. ಹಾಗೆಯೇ ಪೋಷಕರು ಆಸ್ತಿ ಮಾಡುವುದರಲ್ಲೂ ಒಂದು ಸ್ವಾರ್ಥವಿರುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಇಳಿವಯಸ್ಸಿನಲ್ಲಿ ತಮ್ಮನ್ನು ಚೆನ್ನಾಗಿ ನೋಡಿಕೊಳ್ಳಲಿ ಎಂದು ನಿರೀಕ್ಷೆ ಮೇಲೆಯೇ ಅನೇಕರು ಆಸ್ತಿಪಾಸ್ತಿ ಮಾಡುತ್ತಾರೆ. ಆದರೆ ದುರ್ದೈವ ಏನೆಂದರೆ ಇಂದಿನ ಮಕ್ಕಳು ನಿಮ್ಮ ಆಸ್ತಿಯೂ ಬೇಡ, ನಿಮ್ಮನ್ನು ನೋಡಿಕೊಳ್ಳುವ ಜವಾಬ್ದಾರಿಯೂ ಬೇಡ ಎಂದು ಓಡಿ ಹೋಗುವ ಪ್ರವೃತ್ತಿ ಶುರುವಾಗಿದೆ.

ಎಲ್ಲರೂ ಇದೇ ರೀತಿ ಇರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಪ್ರೀತಿಯನ್ನೇ ಉಸಿರಾಗಿಸಿಕೊಂಡಿರುವ ಅನೇಕ ಆದರ್ಶ ದಂಪತಿಗಳು ಇದ್ದಾರೆ, ಆದರ್ಶ ಹೆತ್ತವರು – ಮಕ್ಕಳು ಇದ್ದಾರೆ, ಆದರ್ಶ ಅಣ್ಣ-ತಂಗಿ ಇದ್ದಾರೆ. ಆದರೆ ಅವರುಗಳು ಬೆಳಕಿಗೆ ಬರುವುದು ವಿರಳ.

ಹಿರಿಯರಾದವರು ಕಿರಿಯ ವಯಸ್ಸಿನಲ್ಲೇ ತಮ್ಮ ಸಂಧ್ಯಾಕಾಲದ ಬದುಕಿಗೆ ಸೂಕ್ತ ರೀತಿಯಲ್ಲಿ ಯೋಜನೆ ಸಿದ್ಧಪಡಿಸಿಕೊಳ್ಳಬೇಕು. ಸಂಪಾದಿಸಿದ ಎಲ್ಲವನ್ನೂ ಮಕ್ಕಳಿಗೆ ಧಾರೆ ಎರೆಯುವ ಅವಶ್ಯವಿಲ್ಲ ಎಂಬುದ ಅರಿತು ತಮಗಾಗಿ ಕೊಂಚ ಉಳಸಿಕೊಳ್ಳಬೇಕು. ಹಾಗೆಯೆ ತಮ್ಮ ಬದುಕನ್ನು ಉತ್ತಮ ರೀತಿಯಲ್ಲಿ ಅನುಭವಿಸಬೇಕು. ಮಕ್ಕಳಿಗಾಗಿ ತಮ್ಮ ಬದುಕಿನ ಸೌಖ್ಯಕ್ಕೆ ಕೊರತೆ ಮಾಡಿಕೊಳ್ಳಬಾರದು. ಬದುಕು ನಾವು ಎಣಿಸಿದಂತೆ ನಡೆಯಲು ಇದು ಚಲನಚಿತ್ರ ಅಥವಾ ನಾಟಕವಲ್ಲ. ಜೀವನವನ್ನು ವಾಸ್ತವದ ನೆಲೆಗಟ್ಟಿನಲ್ಲಿ ನೋಡಬೇಕು. ಯಾವಾಗಲೂ ಊಹೆಗಳಿಂದ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಳ್ಳಬಾರದು. ಬಂದಂತೆ ಬದುಕನ್ನು ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ವ್ಯವಹಾರಿಕ ಜ್ಞಾನ ಕೊಂಚವಾದರೂ ಇರಬೇಕು. ಪ್ರೀತಿವಿಶ್ವಾಸ ಎಲ್ಲದಕ್ಕೂ ಒಂದು ಮಿತಿ ಹೇರಿಕೊಳ್ಳಬೇಕು. ಅದೇ ರೀತಿ ಆಸ್ತಿಪಾಸ್ತಿ ವಿಚಾರದಲ್ಲೂ ಮಿತಿ ಹೇರಿಕೊಳ್ಳಬೇಕು. ಜೀವನದಲ್ಲಿ ಅನುಭವಿಸುವ ಅನೇಕ ಸುಂದರ ಕ್ಷಣಗಳನ್ನು ಕಳೆದುಕೊಳ್ಳಬಾರದು. ಪ್ರವಾಸ, ಸಿನೆಮಾ, ನಾಟಕ ಅನ್ನದೇ ಹಣ ಗುಡ್ಡೆ ಹಾಕುವ ಕೆಲಸವನ್ನೇ ಮಾಡಬಾರದು. ಆಸ್ತಿಗೂ ಮೀರಿದ ಅನೇಕ ವಿಷಯಗಳು ಜಗತ್ತಿನಲ್ಲಿವೆ ಎಂಬುದನ್ನು ಮರೆಯಬಾರದು. ಏನಂತೀರಿ?


ಪದ ತಾಂಬೂಲ :

ಪ್ರೀತಿಗೆ ಮನಸೋಲುವವರು ವಿರಳ, ಆಸ್ತಿಗೆ ಮರುಳಾಗುವವರು ಹೇರಳ

ಮನೆ-ಮನೆಗೆ ಗ್ಯಾರಂಟಿ ಕಾರ್ಡ್ ಎಸೆದ ಹಾಗೆ, ಎಲ್ಲರಿಗೂ ಗ್ಯಾರಂಟಿ ಕೊಡಲು ಸಾಧ್ಯವಿಲ್ಲ

ಬೆಳಗಾವಿ, ಮೇ 28– ಚುನಾವಣೆಯಲ್ಲಿ ಮನೆ-ಮನೆಗೆ ಗ್ಯಾರಂಟಿ ಕಾರ್ಡ್ ಎಸೆದ ಹಾಗೆ ಎಲ್ಲರಿಗೂ ಗ್ಯಾರಂಟಿ ಯೋಜನೆ ಕೊಡಲು ಸಾಧ್ಯವಿಲ್ಲ. ನಿರ್ಗತಿಕರು, ಬಡವರು ಯಾರಿದ್ದಾರೆ ಅವರನ್ನು ಗುರುತಿಸಿ ಗ್ಯಾರಂಟಿ ಯೋಜನೆ ತಲುಪಿಸುತ್ತೇವೆ ಎಂದು ನೂತನ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನ ಬೈಲೂರು ಗ್ರಾಮದಲ್ಲಿ ಮಾತನಾಡಿದ ಅವರು, ರಾಜ್ಯದ ಜನರು ಬಹಳಷ್ಟು ನಿರೀಕ್ಷೆಗಳನ್ನು ನಮ್ಮ ಸರ್ಕಾರದ ಮೇಲೆ ಇಟ್ಟುಕೊಂಡಿದ್ದಾರೆ. ಚುನಾವಣೆಯಲ್ಲಿ ನಾವು ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸುತ್ತೇವೆ. ನಾವು ಗ್ಯಾರಂಟಿ ಈಡೇರಿಸಲು ಸಿದ್ಧರಿದ್ದೇವೆ. ಆದರೆ ಪ್ರತಿಪಕ್ಷಗಳು ಗೊಂದಲ ಸೃಷ್ಟಿಸುತ್ತಿವೆ. ಗ್ಯಾರಂಟಿ ನೀಡಿದ್ದು ನಾವು, ಅವರಲ್ಲ. ಗ್ಯಾರಂಟಿ ಯೋಜನೆ ಈಡೇರಿಸಲು ಸಮಯ ಬೇಕು. ಯೋಜನೆ ಜಾರಿಗಾಗಿ ಈಗಾಗಲೇ ಸಿದ್ಧತೆ ನಡೆದಿವೆ. ನಾವು ಜಾರಿಗೊಳಿಸುತ್ತೇವೆ ಎಂದರು.



ಸ್ವಾಮೀಜಿಗಳ ಆಶೀರ್ವಾದ ಮತ್ತು ಮಾರ್ಗದರ್ಶನ ಪಡೆಯಲು ಬೈಲೂರು ಮಠಕ್ಕೆ ಬಂದಿರುವೆ. ನಿಜಗುಣಾನಂದ ಸ್ವಾಮೀಜಿ ಹಾಗೂ ನಮ್ಮ ಹೋರಾಟ ಒಂದೇ ಇದೆ. ಸ್ವಾಮೀಜಿಗಳ ಜೊತೆಗೂಡಿ ಮೌಢ್ಯದ ವಿರುದ್ಧ ಹೋರಾಟ ಮಾಡಿದ್ದೇವೆ. ಸ್ವಾಮೀಜಿಗೆ ಮತ್ತಷ್ಟು ಶಕ್ತಿ ತುಂಬಲು ನಾನು ಇಲ್ಲಿಗೆ ಬಂದಿದ್ದೇನೆ ಎಂದು ಹೇಳಿದರು.

ಜಗಜ್ಯೋತಿ ಬಸವೇಶ್ವರ, ಬುದ್ಧ, ಅಂಬೇಡ್ಕರ್ ವಿಚಾರ ಎಲ್ಲೆಡೆ ತಲುಪಿಸಬೇಕು. ಐದು ವರ್ಷಗಳ ಕಾಲ ನಮ್ಮ ಸರ್ಕಾರ ಬಂದಿದೆ. ಈ ವಿಚಾರವನ್ನು ತಲುಪಿಸುವ ಕಾರ್ಯ ಮಾಡುತ್ತೇವೆ. ಹಿಂದಿನಿಂದಲೂ ನಾನು ಮಾನವ ಬಂಧುತ್ವ ವೇದಿಕೆ ಮೂಲಕ ಈ ಕಾರ್ಯ ಮಾಡಿದ್ದೇನೆ. ನಿಜಗುಣಾನಂದ ಸ್ವಾಮೀಜಿ ಕೂಡ ಹೋರಾಟ ಮಾಡಿದ್ದಾರೆ, ನಾವೂ ಕೈ ಜೋಡಿಸಿದ್ದೇವೆ. ನಮ್ಮ ಸರ್ಕಾರ ಬಸವೇಶ್ವರರ ವಿಚಾರಧಾರೆಯಲ್ಲಿ ನಡೆಯುತ್ತದೆ. ಹಿಂದಿನ ಸಿದ್ದರಾಮಯ್ಯ ಸರ್ಕಾರ ಎಲ್ಲಾ ಕಚೇರಿಗಳಲ್ಲಿ ಬಸವಣ್ಣನ ಫೋಟೊ ಹಾಕಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಬಸವಣ್ಣನನ್ನು ವಿಶ್ವಗುರು ಎನ್ನುತ್ತಾರೆ. ಆದರೆ ಅವರನ್ನು ವಿಶ್ವಕ್ಕೆ ಪರಿಚಯಿಸುವ ಕೆಲಸವಾಗಿಲ್ಲ. ಬಸವಣ್ಣನನ್ನು ಅರಿತರೆ ಯಾವುದಕ್ಕೂ ಹೆದರುವ ಅವಶ್ಯಕತೆ ಇಲ್ಲ. ನಿಜಗುಣಾನಂದ ಸ್ವಾಮೀಜಿಗಳ ವೈಚಾರಿಕ ಹೋರಾಟ ಇನ್ನೂ ಹೆಚ್ಚಾಗಲಿ, ನಮ್ಮ ಸಹಕಾರವೂ ಅವರಿಗೆ ಇರಲಿದೆ ಎಂದರು.

ಜೂನ್ ಮೊದಲ ವಾರ ನಗರಪಾಲಿಕೆ ಬಜೆಟ್

ಮೈಸೂರು, ಮೇ 28(ಆರ್‌ಕೆ)–ಜೂನ್ ಮೊದಲ ವಾರ ಮೈಸೂರು ಮಹಾನಗರ ಪಾಲಿಕೆಯ 2023–24ನೇ ಸಾಲಿನ ಬಜೆಟ್ ಸಭೆ ನಡೆಯಲಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಘೋಷಣೆಯಾದ ಕಾರಣ ಹಾಗೂ ನಾಲ್ಕು ಸ್ಥಾಯಿ ಸಮಿತಿಗಳ ರಚನೆಯಾಗುವುದು ವಿಳಂಬವಾದ್ದರಿಂದ ಬಜೆಟ್ ಮಂಡನೆ ಸಭೆ ನಿಗದಿಪಡಿಸಲು ಸಾಧ್ಯವಾಗಿರಲಿಲ್ಲ. ಇದೀಗ ಹಣಕಾಸು ಸೇರಿದಂತೆ ಎಲ್ಲಾ ಸ್ಥಾಯಿ ಸಮಿತಿ ಚುನಾವಣೆ ನಡೆದು ಅಧ್ಯಕ್ಷರು, ಸದಸ್ಯರ ಆಯ್ಕೆ ಪ್ರಕ್ರಿಯೆ ಮುಗಿದಿರುವುದರಿಂದ ಜೂನ್ 5 ಅಥವಾ 6ರಂದು ಆಯ-ವ್ಯಯ ಸಭೆ ನಿಗದಿಪಡಿಸುತ್ತೇವೆ ಎಂದು ಅವರು ತಿಳಿಸಿದರು.

ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಡಿ. ನಾಗರಾಜು ಅವರು ಪ್ರಸಕ್ತ ಸಾಲಿನ ಪಾಲಿಕೆ ಬಜೆಟ್ ಮಂಡಿಸಲಿದ್ದು, ಸಂಪನ್ಮೂಲ ಕ್ರೋಢೀಕರಣಕ್ಕನುಗುಣವಾಗಿ ಖರ್ಚಿನ ಬಾಬ್ತು ಮತ್ತು ಹೊಸ ಹಾಗೂ ವಿಶೇಷ ಯೋಜನೆಗಳನ್ನು ಆಯ-ವ್ಯಯದಲ್ಲಿ ಜೋಡಿಸಲು ಪ್ರಯತ್ನಿಸಲಾಗುತ್ತಿದೆ ಎಂದ ಅವರು, ಅನುಷ್ಠಾನಗೊಳಿಸಲು ಸಾಧ್ಯವಾಗುವಂತಹ ಯೋಜನೆಗಳನ್ನು ಮಾತ್ರ ಘೋಷಿಸಲಾಗುತ್ತಿದೆ ಎಂದು ತಿಳಿಸಿದರು.



ಬಜೆಟ್ ಅನುಮೋದನೆಯಾಗದಿರುವುದರಿಂದ ಪಾಲಿಕೆಯಲ್ಲಿ ಬಿಲ್‌ಗಳ ಪಾವತಿಗೆ ತೊಂದರೆಯಾಗುತ್ತಿರುವುದ ರಿಂದ ತಡ ಮಾಡದೇ ಶೀಘ್ರ ಸಭೆ ಏರ್ಪಡಿಸಲಾಗುತ್ತಿದೆ. ನಾಳೆ(ಮೇ 29)ಯೇ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು, ಸದಸ್ಯರು ಹಾಗೂ ಕೌನ್ಸಿಲ್ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಮೀಟಿಂಗ್ ನೋಟಿಸ್ ಕಳುಹಿಸುತ್ತೇವೆ ಎಂದು ಅವರು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದೆಹಲಿ ಕುಸ್ತಿಪಟುಗಳ ಬೆಂಬಲಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರು, ಮೇ 28(ಎಸ್‌ಪಿಎನ್)– ಭಾರತೀಯ ಕುಸ್ತಿ ಫೆಡರೇಶನ್ (ಡಬ್ಲ್ಯುಎಫ್ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ನವ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಮಹಿಳಾ ಕುಸ್ತಿಪಟುಗಳಿಗೆ ಬೆಂಬಲ ವ್ಯಕ್ತಪಡಿಸಿ ಹಾಗೂ ದೆಹಲಿ ಪೊಲೀಸರ ಧೋರಣೆ ಖಂಡಿಸಿ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಎಐಡಿಎಸ್‌ಓ, ಎಐಎಂಎಸ್‌ಎಸ್, ಎಐಕೆಕೆಎಂಎಸ್ ಪದಾಧಿಕಾರಿಗಳು ಭಾನುವಾರ ಪ್ರತಿಭಟನೆ ನಡೆಸಿದರು.

ದೆಹಲಿಯಲ್ಲಿ ಹೋರಾಟನಿರತ ಮಹಿಳಾ ಕುಸ್ತಿ ಪಟುಗಳು ಕರೆ ನೀಡಿದ್ದ ಮಹಾ ಪಂಚಾಯತ್ ಕರೆಗೆ ಸ್ಪಂದಿಸಿ, ಮೈಸೂರಿನಲ್ಲಿ ಪ್ರತಿಭಟನೆ ನಡೆಸಲಾಗಿದೆ ಎಂದು ಮಹಿಳಾ ಹೋರಾಟಗಾರ್ತಿ ಜಿ.ಎಸ್.ಸೀಮಾ ಮಾಧ್ಯಮಗಳಿಗೆ ತಿಳಿಸಿದರು. ಈ ಪ್ರತಿಭಟನೆಗೆ ಬೆಂಬಲ ಸೂಚಿಸಲು ದೆಹಲಿಯ ಜಂತರ್–ಮಂತರ್ ಕಡೆಗೆ ತೆರಳುತ್ತಿದ್ದ ಹಲವು ಕಾರ್ಯಕರ್ತರು ಹಾಗೂ ಸಾಮಾಜಿಕ ಹೋರಾಟಗಾರರನ್ನು ದೆಹಲಿ ಪೊಲೀಸರು ಬಂಧಿಸಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಗಿದೆ ಎಂದು ತಿಳಿಸಿದರು.

ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ನೂತನ ಸಂಸತ್ ಕಟ್ಟಡವನ್ನು ಪ್ರಜಾತಂತ್ರದ ದೇಗುಲ ಎಂದು ಕರೆದು ಭಾನುವಾರ ಉದ್ಘಾಟನೆ ಮಾಡಿದ್ದಾರೆ. ಆದರೆ, ಆ ಕಟ್ಟಡದಿಂದ ಅಣತಿ ದೂರದಲ್ಲಿರುವ ಜಂತರ್ ಮಂತರ್‌ನಲ್ಲಿ ಕೇಂದ್ರ ಸರ್ಕಾರ ಬೆಂಬಲಿತ ದೆಹಲಿ ಪೊಲೀಸರು ಪ್ರಜಾತಂತ್ರದ ಹಕ್ಕುಗಳನ್ನು ದಮನಗೊಳಿಸುತ್ತಿರುವುದಕ್ಕೆ ಪ್ರತಿಭಟನಾಕಾರರು ತೀವ್ರ ಬೇಸರ ಹೊರಹಾಕಿದರು. ಪ್ರತಿಭಟನೆಯಲ್ಲಿ ಎಐಎಂಎಸ್‌ಎಸ್ ಜಿಲ್ಲಾ ಜಂಟಿ ಕಾರ್ಯದರ್ಶಿ ಅಭಿಲಾಷ್, ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷ ಸುಭಾಷ್, ಕಾರ್ಯದರ್ಶಿ ಚಂದ್ರಕಲಾ ಹಾಗೂ ಕಾರ್ಯಕರ್ತರಾದ ಸ್ವಾತಿ, ನಿತಿನ್, ಚಂದನಾ, ಹೇಮಾಲತಾ, ಎಐಕೆಕೆಎಂಎಸ್ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದಿವ್ಯಾಶ್ರೀಗೆ ಪಿಹೆಚ್.ಡಿ ಪದವಿ



ಮೈಸೂರು, ಮೇ 28– ದಿವ್ಯಾಶ್ರೀ ಹೆಚ್.ಆರ್. ಅವರು ಡಾ.ಎಂ. ಕೋಮಲ ಅವರ ಮಾರ್ಗದರ್ಶನದಲ್ಲಿ ಮಾನವ ಅಭಿವೃದ್ಧಿ ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

VS Infratech Pvt.Ltd.
WANTED
Experienced Civil Engineer
#196, 1st Floor, Opp.Chamundeshwari Tempel Surya Bakery Circle, Hebbal
8494908024

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

ಸೈಟು ಮಾರಾಟಕ್ಕಿದೆ
30x40 ಸೈಟ್ ನಂ. 2, ಮುಡಾ ಅಪ್ರೂವ್ಡ್, ಕುಸುಮಾ ಚಂದ್ರಶೇಖರ್ ಕಲ್ಯಾಣ ಮಂಟಪದ ಮುಂಭಾಗದ ರಸ್ತೆ, ಶಾದನ ಹಳ್ಳಿ ರಸ್ತೆ, ಕೆ.ಆರ್.ಎಸ್. ರಸ್ತೆ, ಮೈಸೂರು.
ಸಂಪರ್ಕಿಸಿ : 98454 30098 / 72043 01250

ನೇರ ನೇಮಕಾತಿ
Trainee/ Helpers ಗಳಾಗಿ 10th, PUC, ಯಾದ Age - (18-24), Earn (8500/- ರಿಂದ 16500/-) PM Only ಹೊಸಬರಿಗೆ, No Fee, ತಮ್ಮ ವಿವರಗಳೊಂದಿಗೆ Meet Kavya (11AM to 3PM)
9342827788

ಸಂಪು ಕ್ಲೀನಿಂಗ್
ಸಂಪರ್ಕಿಸಿ: 8431541631

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ: 8861612486

WANTED
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ
99011 63200
97435 65907

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 13,448+ESI+PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ
8453408502,9108100117

St. Mary's GIRLS PU COLLEGE
Chamundipuram, Mysore
* Admission Open
* Arts & Commerce
* Affordable Fee
9972389020
9844144232
above 85%, Free Admission

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

HOUSE FOR RENT
3 BHK
Near Abhishek Circle, hebbal with Car Parking
8073562425
7483463551

ಬೇಕಾಗಿದ್ದಾರೆ
ಮೈಸೂರಿನ ವೆಜ್ ಹೋಟೆಲ್‌ಗೆ ವೇಯಿಟರ್ಸ್ ಬೇಕಾಗಿದ್ದಾರೆ (Wanted Waiters for Veg Restaurant)
8073162978
9900765507

WANTED TEACHERS
Qualification : CPEd, DEd, BEd, and NTT Nursery Teachers Training
Good Communication in English is Must.
Location: JP Nagar, Mysore
8884348504

ಬೇಕಾಗಿದ್ದಾರೆ
ಹೋಂ ನರ್ಸ್ ಕೆಲಸಕ್ಕೆ ಅನುಭವ ಇರುವ ಇಲ್ಲದೆ ಇರುವ SSLC, PUC ಪಾಸ್ ಫೇಲಾದ ಹುಡುಗ ಹುಡುಗಿಯರು ಮತ್ತು ಅಲ್ಲೇ ಇದ್ದು ಮನೆ ಕೆಲಸ ಅಡುಗೆ ಕೆಲಸ ಮಾಡುವವರು ಮತ್ತು ಅಲ್ಲೇ ಇದ್ದು ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಹೋಂ ನರ್ಸ್ ಬೇಕಾಗಿದ್ದಾರೆ. ESI, PF .ಊಟ ಉಳಿದುಕೊಳ್ಳಲು ವ್ಯವಸ್ಥೆ ಇರುತ್ತದೆ. ಉತ್ತಮ ಸಂಬಳ
8123630683

HOME LOANS
CORPORATION, MUDA, KHB GRAMATHANA PROPERTY (9 & 11A, 11B Khata)
Site Purchase, Site Construction
House Purchase
Site Mortgage, house Mortgage
Contact: 9108416410

DIRECT II PUC ARTS & COMMERCE
ಜೂನ್ 1 ರಿಂದ ತರಗತಿಗಳು ಆರಂಭ
I PUC ಯಾವುದೇ ವಿಭಾಗದಲ್ಲಿ ಅನುತ್ತೀರ್ಣರಾದ ಹಾಗೂ SSLC ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾಲೇಜು ಮಾದರಿಯಲ್ಲಿ
REGULAR CLASSES 9.30 am to 3.30 pm
ಹೊರ ಜಿಲ್ಲೆಯ ಬಾಲಕ ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ
CHANAKYA COACHING CENTRE(R)
Virajpet, Kodagu.
Mob : 8277496007, 948008554



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

ಬೇಕಾಗಿದ್ದಾರೆ
ಮೈಸೂರಿನ ಗೋಕುಲಂ ಬಡಾವಣೆ ಇಲ್ಲಿಗೆ ಹಗಲು (Day) ಕೆಲಸ ಮಾಡಲು ಪುರುಷ, ವಿದ್ಯಾವಂತ 40 ವರ್ಷ ಮೇಲ್ಪಟ್ಟು, ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವೇತನ: 10,000/-
9731976148

HOUSE FOR SALE
A Beacutiful Independent HOUSE FOR SALE with Five BED Rooms and Three attached Bathrom, Dining Hall, Kitchen, Car Parking, Lenght 86.5x32 Nalapak Hotel Behind Vontikoppal Mysore. No Brokers, Contact Direct Party Only: (10 AM to 5.30PM)
8217729205

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
Mob: 9148733213

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.
9731891409

ಕಳೆದಿದೆ
ಶ್ರೀನಿವಾಸ್. ಡಿ.ಪಿ., ನಂ. 144, 6ನೇ ಕ್ರಾಸ್, ಲೋಕನಾಯಕನಗರ, ಮೈಸೂರು–570 016, ನನಗೆ ಸೇರಿದ ಮೂಲ ಖಾತಾ ಟ್ರಾನ್ಸ್‌ಫರ್ ಲೆಟರ್ ನಂ. New-24753/18-19 ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9972350178

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಅಡುಗೆ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ
ಸ್ಥಳ : ಸುಳ್ಯ
9902176566

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೂಟ್ಟಳ್ಳಿನ ಕಂಪನಿಯೊಂದರಲ್ಲಿ ಕೆಲಸ ಮಾಡಲು ಟೈಲರುಗಳು, ಹೆಲ್ಪರುಗಳು, ಸೆಕ್ಯೂರಿಟಿ ಗಾರ್ಡುಗಳು ಮತ್ತು ವೆಲ್ಡರ್ (Welder)ಗಳು ಬೇಕಾಗಿದ್ದಾರೆ.
ESI & PF ವಾರದ ರಜೆ ಮತ್ತು ಕೆಲವು ಸ್ಥಳಗಳಿಗೆ ಬಸ್ಸು ವ್ಯವಸ್ಥೆ ಇರುತ್ತದೆ.
7795285485
8105249880

ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚಾತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಲಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕಳೆದಿದೆ
ಮಹದೇವಮ್ಮ, W/o ಸಿದ್ದಪ್ಪ, ಕತ್ವಾಡಿಪುರ ಗ್ರಾಮ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಿದ್ದು, ದಿನಾಂಕ 20–5–2023 ರಂದು ಸರ್ವೆ ನಂ. 71/2, ಮೇಗಳಾಪುರ, ವರುಣಾ ಹೋಬಳಿ, ಮೈಸೂರು ತಾಲ್ಲೂಕು Reg. No. 1778 ಈ ಸ್ವತ್ತಿನ ಕ್ರಯಪತ್ರವನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ತಾಂಡವಪುರ ದಾರಿ ಮಧ್ಯೆ ಸಂಜೆ 5 ಗಂಟೆ ಸಮಯದಲ್ಲಿ ಕಳೆದುಹೋಗಿರುತ್ತದೆ. ಸಿಕ್ಕಿದವರು ಮೇಲ್ಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ಕೋರಲಾಗಿದೆ.
Mob: 7411891790

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಿ ಕಟಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸು, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

CHANGE OF NAME
I, Ashok Tukaram Bansode, residing at Door No. 731/S, 24th Cross, Sankranthi Circle, Hebbal 2nd Stage, Vijayanagar 2nd Stage, Mysuru-570 017, have changed my name from Ashok Tukaram Bansode to Ashok T. Bansode, on my own free will, sworn in before Notary C. Mangala, Mysuru, vide affidavit, dated 25-5-2023.
Sd/- Ashok T. Bansode

ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಆಟೋಮೆಟಿಕ್ ಆಕೆಲ್ ಹತ್ತಿರ ಇರುವ ಕಂಪನಿಗೆ 50 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 12 ಗಂಟೆ ಕೆಲಸಕ್ಕೆ 15000/– ಕೆಲಸದ ಸಮಯ: ಬೆಳಿಗ್ಗೆ 8 ರಿಂದ ಸಂಜೆ 8 ರವರೆಗೆ
ಚಾಮುಂಡೇಶ್ವರಿ ಎಂಟರ್‌ಪ್ರೈಸಸ್
ಕೂಡಲೇ ಸಂಪರ್ಕಿಸಿ ಲೋಕೇಶ್:
8722844236

ಪತ್ರ ಬರಹಗಾರರು
ಜಿ.ಪ್ರಫುಲ್ಲ ಚಂದ್ರ, ನೋಂದಣಿ ಸಲಹೆಗಾರರು, ಕ್ರಯಪತ್ರ, ಕರಾರು ಪತ್ರ, ರಿಜಿಸ್ಟ್ರೇಷನ್‌ಗಳಿಗೆ ಸಂಪರ್ಕಿಸಿ: #386, 14ನೇ ಮೇನ್, ಸರಸ್ವತಿಪುರಂ
9480379977

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ.
Salary : 13000-21000+ESI,PF
ವಿದ್ಯಾರ್ಹತೆ: 10th, PUC, ITI, Diploma & Any Degree
9035734821

COMMERCIAL SPACE FOR RENT
IInd Floor, (15x18 Ft) With attached Bath-room, Shivarampet, Behind M.K.Hostel
9448494830

ಬೇಕಾಗಿದ್ದಾರೆ
ಕಬ್ಬಿಣದ ಅಂಗಡಿ ಮತ್ತು ಫ್ಯಾಕ್ಟರಿ ಲೇಬರ್ ಲೋಡಿಂಗ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಿಶ್ವೇಶ್ವರನಗರ, ಇಂಡಸ್ಟ್ರಿಯಲ್ ಸಬರ್ಬ್, ಮೈಸೂರು
ಸಂಬಳ: 12,000/-
7829665715
9742491306

HOUSE FOR SALE
20X30 N/F Ground Floor 2Bhk, First Floor 2BHK Dattagalli (Kanakadasanagar) Mysore, Near Mahamane & Triveni Circle
(Broker Excuse)
9945428296

ಬೀಗದ ಕೀ ಕಳೆದಿದೆ
ಶ್ರೀರಾಂಪುರ ಬರೋಡ ಬ್ಯಾಂಕ್ ATM ಎದುರುಗಡೆ ಶಂಖು ಮತ್ತು ನೀಲಿ ಬಣ್ಣದ ಟ್ಯಾಗ್ ಹಾಕಿರುವ ಬೀಗದ ಒಂದು ಕೀ ದಿನಾಂಕ: 23–5–2023ರಂದು ಕಳೆದಿದೆ. ಸಿಕ್ಕಿದವರು ಈ ಕೆಳಕಂಡ ಮೊಬೈಲ್‌ಗೆ ಕರೆ ಮಾಡಿ ಸೂಕ್ತ ಬಹುಮಾನ ಪಡೆಯಬಹುದು.
9741089455
S. ಕೃಷ್ಣೇಚಾರ್

ತಕ್ಷಣ ಬೇಕಾಗಿದ್ದಾರೆ
Security Guardಗಳು ಬೋಗಾದಿ, ಹೂಟಗಳ್ಳಿ ಹಾಗೂ ಹೆಬ್ಬಾಳುನಲ್ಲಿ, ESI, PF, ಲಭ್ಯ ವಿರುತ್ತದೆ. Parking ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. 08 Hour Duty, City Centre.
9945291877
9901453272

ಬೇಕಾಗಿದ್ದಾರೆ
ಸಂಭ್ರಮ ಬಾರ್ & ರೆಸ್ಟೋರೆಂಟ್ ನಜರ್‌ಬಾದ್ ಮೈಸೂರು ಕ್ಲೀನರ್, ಸಪ್ಲೈಯರ್, ಕಿಚನ್, ಅಸಿಸ್ಟೆಂಟ್ ಮತ್ತು ಸೆಕ್ಯೂರಿಟಿ ಬೇಕಾಗಿದ್ದಾರೆ.
7411164808
9901176704

Wanted /ಬೇಕಾಗಿದ್ದಾರೆ
Drivers - 10 nos.
Aishwarya Driving School, Mysore. Driver Must Have 5 Years Experience.
ಚಾಲಕರು ಅಗತ್ಯವಿದೆ
ಐಶ್ವರ್ಯ ಡ್ರೈವಿಂಗ್ ಸ್ಕೂಲ್, ಮೈಸೂರು ಚಾಲಕ 5 ವರ್ಷಗಳ ಅನುಭವ ಹೊಂದಿರಬೇಕು. (10 ಚಾಲಕರ ಅಗತ್ಯವಿದೆ.)
ಆನಂದ್ ಕುಮಾರ್
9341922646

ಪರ್ಮನೆಂಟ್ ಉದ್ಯೋಗ
ಮೈಸೂರಿನಲ್ಲಿರುವ "ACTION WORLD GROUP" OF COMPANYಯಲ್ಲಿ ಖಾಲಿಯಿರುವ 224 ವಿವಿಧ ಪರ್ಮನೆಂಟ್ ಹುದ್ದೆಗಳಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC-114, ITI, JOC-35, Any Degree =51, Diploma-24
ವಯೋಮಿತಿ:18 to 30 Years, ತಿಂಗಳಿಗೆ:25000-32000
(ಉಚಿತ ವಸತಿ+ಊಟದ ವ್ಯವಸ್ಥೆ ಇರುತ್ತದೆ)
ಸೌಂದರ್ಯ: 7349699460
9900163228

ಬೇಕಾಗಿದ್ದಾರೆ
Ladies P.G ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ P.G ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ, ಸಂಬಳ ದೊರೆಯುತ್ತದೆ (ಅಡುಗೆ ಹೆಲ್ಪರ್)
9972567537,9035004605

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ ಎಲ್ಲಾ ವಿದ್ಯಾವಂತ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಗುರೂಜಿ
9448229184
7899625268

ಟೆಲಿಕಾಮ್ ಲೇಔಟ್
30x40 N/F ಸೈಟು @ Rs.25 ಲಕ್ಷ
ತಕ್ಷಣ ಮನೆ ಕಟ್ಟಬಹುದು. ಬ್ಯಾಂಕ್ ಲೋನ್ ಲಭ್ಯ
ಇಲವಾಲ ಬಸ್ ನಿಲ್ದಾಣ ಹಿಂಭಾಗ, ಹುಣಸೂರು ರಸ್ತೆ, ಮೈಸೂರು
9538583377

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು: 18 ರಿಂದ 40 ವರ್ಷ
ವಿದ್ಯಾರ್ಹತೆ: 7 ರಿಂದ ಪಿಯುಸಿ
9480404036

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಸಂಬಳ: 12000 ದಿಂದ 18000 (ESI, PF, ಸೌಲಭ್ಯ ಇರುತ್ತದೆ)
8050699742,6366141518

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡುಗಳು (ಪುರುಷರು)
ಸ್ಥಳ: * ಸಯ್ಯಾಜಿರಾವ್ ರಸ್ತೆ, * ಕೊಳ್ಳೇಗಾಲ, * ತೂಬಿನಕೆರೆ (ಮಂಡ್ಯ), * ವಿದ್ಯಾರಣ್ಯಪುರಂ, * ಲಲಿತಮಹಲ್ ನಗರ, * ಮೇಟಗಳ್ಳಿ
2) ಸೆಕ್ಯೂರಿಟಿ ಗಾರ್ಡುಗಳು (ಮಹಿಳೆಯರು) ಇಟ್ಟಿಗೆಗೂಡು ಸುತ್ತಮುತ್ತ
9686422400
9242406261

30x50
Sites Available at Uthanahalli Road 500 Meters From Ring Road
Price 3650/- Sqft
7026901111

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು (12ಗಂಟೆ),
ವೇತನ : 11500/– ರಿಂದ 12000,
ಸ್ಥಳ: ಆಲನಹಳ್ಳಿ
ವಯಸ್ಸು: 25 ರಿಂದ 55 ವರ್ಷ
9741616826

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು 18-30 ಸೆರಾಕೇರ್ ಮೈಸೂರು ಹೆಲ್ ಸೆಂಟರ್ ವಿದ್ಯಾರ್ಹತೆ – SSLC, 2nd PUC, Any Degree
ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
7996011692,8296366894

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194,9606783264

REQUIRED
For Factory PUC M/F with System Knowledge - 1 Hootagalli Vijayanagar 2nd Stage
F 9-6 with Computer Knowledge Kuvempunagar Depot Evening 5-9 with Computer Knowledge.
Please Whatsapp your Resume to
9880808479
Please do not Call.

ತಕ್ಷಣ ಬೇಕಾಗಿದ್ದಾರೆ
(ಹೋಟೆಲ್) 1) ದೋಸೆ ಮಾಸ್ಟರ್ (ಅನುಭವಿಗೆ ಆದ್ಯತೆ)
2) ತಂದೂರಿ ಮತ್ತು ನಾರ್ತ್ ಕುಕ್
ವಿವೇಕಾನಂದ ಸರ್ಕಲ್ ಹತ್ತಿರ ಹೋಟೆಲ್ ಅನ್ನಬ್ರಹ್ಮ ಫ್ಯಾಮಿಲಿ ರೆಸ್ಟೋರೆಂಟ್
6362498234

ಜಮೀನು ಮಾರಾಟಕ್ಕಿದೆ
* 1ಎಕರೆ 13 ಗುಂಟೆ + 9 ಗುಂಟೆ ಖರಾಬು ಸರ್ಕಾರಿ ಉತ್ತನಹಳ್ಳಿ(ವರುಣಾ ಹೋ॥)
* ರಿಂಗ್ ರಸ್ತೆಯಿಂದ ಕೇವಲ 2 ಕಿ.ಮೀ. ದೂರವಿದೆ. ಆಸಕ್ತರು ಸಂಪರ್ಕಿಸಿ
9972572465
9945251832
7760097320

WANTED EXECUTIVES
For Mysore Project Sales & Marketing (Real Estate) HR Executive.
Good in English Communication
Salary: 25 K to 30K Plus Incentives
080-22632222
9900265218
Email:hr@eagletonindia.com

ADMISSION OPEN
Govt. of Karnataka - Dept. of Tourism
Food Craft Institute, Mysuru.
Exibition Ground, Ittigegudu
HOTEL MANAGEMENT
100% Job Placements / Govt. College/ 80% Practical Classes
www.fcimysuru.com
6362018821

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಸೌತ್ ಇಂಡಿಯನ್ ಭಟ್ಟರು, ಹೆಲ್ಪರ್, ಕ್ಲೀನಿಂಗ್ & ವಾಷಿಂಗ್ ಮತ್ತು ಫಾಸ್ಟ್ ಫುಡ್‌ಗೆ ದೋಸೆ ಭಟ್ಟರು ಮತ್ತು ಹೆಲ್ಪರ್ ಬೇಕಾಗಿದ್ದಾರೆ.
7975100387
8088337564

WANTED TEACHERS
Only Ladies Teachers B.Sc, M.Sc, (Maths) B.Ed, Hindi Full Time/ Part Time, Rtd Teachers can also apply
9900593211
9845353761

FOR SALE
1) 20x30,30x40,40x60 sites in H D Kote Road Near Defence Apartment
2) 12x36 G+2 House Kuvempu Nagar
3) 30x40 40x60 and 50x80 site Residential,Commercial Properties Vijay Nagar, Srirampura, Dattagalli
9538690359
9035990359

ಬೇಕಾಗಿದ್ದಾರೆ
Cafeಗೆ ಬೇಕಾಗಿದ್ದಾರೆ
ಕಾಫಿ/ಟೀ ಮಾಸ್ಟರ್, ICe, ಜ್ಯೂಸ್, ಚಾಟ್ಸ್ ಮೇಕರ್ಸ್ Girls / Boys
7975755792

ಮನೆ ಬಾಡಿಗೆಗಿದೆ
ಗ್ರೌಂಡ್ ಫ್ಲೋರ್ 40x30 ಪಶ್ಚಿಮಕ್ಕೆ ಬಾಗಿಲು, ಸೋಲಾರ್ ವಾರ್ಡ್ರೋಬ್ ವ್ಯವಸ್ಥೆ ಇದೆ. ದಟ್ಟಗಳ್ಳಿ, 2ನೇ ಅಡ್ಡರಸ್ತೆ, 3ನೇ ಹಂತ ಮೈಸೂರು
9611091429
Brokers Excuse

SITE FOR SALE
30x40 West Facing Panchacharya Layout Near SVEI School Vijayanagar 4th Stage
9845809369

SITES FOR SALE
EAST FACING SITE
NO.52 EAST TO WEST 17.80/2 METER
NORTH TO SOUTH 9 METER
KANDAYANAGAR 1ST STAGE
SRI RAMPURA, MYSORE
9986731199

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಯುವಕರು ಲಾಭದಾಯಕ ವ್ಯವಸಾಯ ಮಾಡದಿದ್ದರೆ ಸಾಮಾಜಿಕ ಸ್ಥಿತಿ ಅಧೋಗತಿ

ಕೃಷಿ ಆರ್ಥಿಕ ತಜ್ಞ ಡಾ.ಪ್ರಕಾಶ್ ಕಮ್ಮರಡಿ ಎಚ್ಚರಿಕೆ



ಮಂಡ್ಯ, ಮೇ 28– ಪ್ರಸ್ತುತ ಯುವಕರು ಲಾಭದಾಯಕ ವ್ಯವಸಾಯ ಮಾಡಲು ಮುಂದಾಗದಿದ್ದರೆ ಸಾಮಾಜಿಕ ಸ್ಥಿತಿ ಅಧೋಗತಿಯತ್ತ ಸಾಗಲಿದೆ ಎಂದು ಕೃಷಿ ಆರ್ಥಿಕ ತಜ್ಞ ಡಾ.ಪ್ರಕಾಶ್ ಕಮ್ಮರಡಿ ಎಚ್ಚರಿಕೆ ನೀಡಿದರು.

ನಗರದ ಕರ್ನಾಟಕ ಸಂಘದ ಕೆವಿಎಸ್ ಸಭಾಂಗಣದಲ್ಲಿ ವೈ.ಕೆ.ರಾಮಯ್ಯ ಕೃಷಿ ತಜ್ಞ ಪ್ರಶಸ್ತಿ ಹಾಗೂ ಎನ್.ಆರ್.ರಂಗಯ್ಯ ಸಹಕಾರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಯೋಜನೆಗಳು ಪರಿಣಾಮಕಾರಿಯಾಗಿದ್ದರೆ ಅದರ ಫಲಿತಾಂಶ ಬೇರೆಯೇ ಆಗಿರುತ್ತಿತ್ತು ಎಂದರು.

ದೇಶದಲ್ಲಿ ಆಹಾರ, ಹಣ್ಣು, ಹಾಲಿನ ಉತ್ಪಾದನೆ ಹೆಚ್ಚಾದರೂ ಕಷ್ಟ ಎನ್ನುವಂತಹ ಪರಿಸ್ಥಿತಿ ಇದೆ. ಏಕೆಂದರೆ ಎಲ್ಲಾ ಬೆಳೆಗಳನ್ನು ಸಮೃದ್ಧಿಯಾಗಿ ಬೆಳೆದರೂ ಸೂಕ್ತ ಮಾರುಕಟ್ಟೆ ಮೌಲ್ಯ, ಶ್ರಮಕ್ಕೆ ತಕ್ಕ ಪ್ರತಿಫಲದ ದರ ಸಿಗದೆ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದಕ್ಕೆ ಮೂಲ ಕಾರಣ ಏನು ಎಂಬುದರತ್ತ ನಮ್ಮ ಸರ್ಕಾರಗಳು ಗಮನ ನೀಡುತ್ತಿಲ್ಲ. ಹೀಗಾಗಿ ಮಲೆನಾಡು ಸೇರಿದಂತೆ ರಾಜ್ಯದ ರೈತರ ಮಕ್ಕಳಿಗೆ ರೈತನೇ ಹೆಣ್ಣು ಕೊಡದ ಸ್ಥಿತಿ ಬಂದೊದಗಿದೆ. ಇದು ತಮಾಷೆಯ ಸಂಗತಿಯಲ್ಲ. ಇದೊಂದು ಗಂಭೀರ ಸಮಸ್ಯೆಯಾಗಿ ಮಾರ್ಪಟ್ಟಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಗ್ರಾಮೀಣ ಯುವಜನರು ಉದ್ಯೋಗ ಅರಸಿ ಪಟ್ಟಣ ಸೇರಿಕೊಂಡಿದ್ದಾರೆ. ಪರಿಣಾಮ ಗ್ರಾಮಗಳು ವೃದ್ಧಾಶ್ರಮದಂತಾಗಿವೆ. ಇದು ಹೀಗೆ ಮುಂದುವರೆದರೆ ಸಮಸ್ಯೆ ಬಿಗಡಾಯಿಸುತ್ತದೆ ಎಂಬ ಜಾಗೃತಿ ಮೂಡಬೇಕಾಗಿದೆ. ಹಸಿರು ಕ್ರಾಂತಿಯಾದ ಬಳಿಕ ಬೆಳೆ ಹೆಚ್ಚಾಗಿ ಉತ್ಪಾದನಾ ಕೇಂದ್ರಿತವಾಯಿತೇ ಹೊರತು ಕೃಷಿ ರೈತ ಕೇಂದ್ರಿತವಾಗಲಿಲ್ಲ ಎಂದು ತಿಳಿಸಿದರು. ಇಂದು ರಾಜಕೀಯ ಪಕ್ಷಗಳು ಅಹಿಂದ, ಒಕ್ಕಲಿಗ, ವೀರಶೈವ, ಬ್ರಾಹ್ಮಣ ಎಂದು ವರ್ಗೀಕರಿಸುತ್ತವೆ. ಆದರೆ ರೈತನಾದವನಿಗೆ ಯಾವ ಜಾತಿ. ಒಕ್ಕಲುತನ ಮಾಡುವಾತನೇ ರೈತ ಎಂಬ ಅರಿವು ಏಕಿಲ್ಲ. ಆದ್ದರಿಂದ ರೈತನನ್ನು ನೋಡಿ, ಆತನ ಜಾತಿ ಯಾವುದೆಂಬುದನ್ನು ನೋಡಬೇಡಿ ಎಂದು ಮನವಿ ಮಾಡಿದರು.

ಟೊಮೇಟೊ ಬೆಳೆದು ಮಾರುಕಟ್ಟೆಯಲ್ಲಿ ಮಧ್ಯವರ್ತಿಯ ಮುಂದೆ ನಿಂತು ಅವ ಹೇಳುವ ದರಕ್ಕೆ ಮಾರಾಟ ಮಾಡುವುದನ್ನು ಬಿಟ್ಟು, ರೈತ ಉತ್ಪಾದನಾ ಕೇಂದ್ರ ಮಾಡಿಕೊಂಡು ಮಧ್ಯವರ್ತಿಯಾಗಲಿ, ಗ್ರಾಹಕನಾಗಲಿ ನಿಮ್ಮ ಮುಂದೆ ಬರುವಂತೆ ಮಾಡಿ. ಆಗ ನಿಮ್ಮ ಶ್ರಮಕ್ಕೆ ಪ್ರತಿಫಲ ಸಿಗುತ್ತದೆ. ಕೃಷಿ ವಲಯಕ್ಕೆ ಸಹಕಾರಿ ಸಿದ್ಧಾಂತವೇ ಮೋಕ್ಷದಾಯಕವಾದುದು. ಹಾಗಾಗಿ ರೈತರಲ್ಲಿ ಒಗ್ಗಟ್ಟಿನ ಮನೋಧರ್ಮ ಅಗತ್ಯ ಎಂದು ಅಭಿಪ್ರಾಯಿಸಿದರು.

ಇದೇ ಸಂದರ್ಭ ವೈ.ಕೆ.ರಾಮಯ್ಯ ಕೃಷಿ ತಜ್ಞ ಪ್ರಶಸ್ತಿಯನ್ನು ಬೆಂಗಳೂರು ಲಾಲ್‌ಬಾಗ್ ಉದ್ಯಾನವನದ ಜಂಟಿ ನಿರ್ದೇಶಕ ಡಾ.ಎಂ.ಜಗದೀಶ್, ವೈ.ಕೆ.ರಾಮಯ್ಯ ಕೃಷಿ ಪ್ರಶಸ್ತಿಯನ್ನು ಪ್ರಗತಿಪರ ರೈತ ದೇವಯ್ಯ ಹಾಗೂ ಎನ್.ರಂಗಯ್ಯ ಸಹಕಾರ ಪ್ರಶಸ್ತಿಯನ್ನು ಹಿರಿಯ ಸಹಕಾರಿ ಧುರೀಣ ಜಿ.ಟಿ.ಪುಟ್ಟಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು.

ವೇದಿಕೆಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ಕಾನೂನು ಸಲಹೆಗಾರ ಹಾಗೂ ವಕೀಲ ಎ.ಇಮ್ಯಾನ್ಯುಯೆಲ್, ಕರ್ನಾಟಕ ಸಂಘದ ನಿರ್ದೇಶಕರಾದ ನಿರ್ದೇಶಕರಾದ ಲೋಕೇಶ್, ಜಯರಾಮ್, ಎಂ.ಕೆ.ಹರೀಶ್‌ಕುಮಾರ್ ಉಪಸ್ಥಿತರಿದ್ದರು.

ಜಪಾನ್‌ನಲ್ಲಿ ಮಂಡ್ಯ ವಿದ್ಯಾರ್ಥಿಗಳ ಕನ್ನಡದ ಕಂಪು

ಅಂತಾರಾಷ್ಟ್ರೀಯ ವಿದ್ಯಾರ್ಥಿ ಸಂಸ್ಕೃತಿ ವಿನಿಮಯ ಕಾರ್ಯಕ್ರಮದಲ್ಲಿ ಸಕ್ಕರೆ ನಾಡಿನ ವಿದ್ಯಾರ್ಥಿಗಳು ಭಾಗಿ



ಮಂಡ್ಯ, ಮೇ 28– ಸಕ್ಕರೆ ನಾಡು ಮಂಡ್ಯದ ವಿದ್ಯಾರ್ಥಿಗಳಿಬ್ಬರು ಜಪಾನ್‌ನ ಇಥಮಿ ನಗರದಲ್ಲಿ ಕನ್ನಡದ ಕಂಪು ಪಸರಿಸುವ ಮೂಲಕ ಜಿಲ್ಲೆಯ ಸಂಸ್ಕೃತಿ, ಸೊಗಡನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪಸರಿಸಿ, ವಿದ್ಯಾರ್ಥಿ ಮತ್ತು ಶಿಕ್ಷಕರಿಂದ ಶ್ಲಾಘನೆ ಪಡೆದುಕೊಂಡಿದ್ದಾರೆ.

ತಾಲೂಕಿನ ಸಿದ್ದಯ್ಯನ ಕೊಪ್ಪಲು ಬಳಿಯ ರಿಪಬ್ಲಿಕ್ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಜಪಾನ್‌ನಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ಸಂಸ್ಕೃತಿ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಸಂಸ್ಕೃತಿ ವಿನಿಮಯ ಮಾಡಿಕೊಂಡು ಜೂ.2ರಂದು ಮಂಡ್ಯಕ್ಕೆ ವಾಪಸ್ಸಾಗಲಿದ್ದಾರೆ.

ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಧನ್ಯ ಜಿ.ಗೌಡ ಹಾಗೂ ಏಳನೇ ತರಗತಿ ವಿದ್ಯಾರ್ಥಿ ಸ್ಟೀವನ್ ಅವರು ಮಂಡ್ಯ ಸೊಗಡಿನ ಜೊತೆಗೆ ರಾಜ್ಯ, ದೇಶ, ಸಂಸ್ಕೃತಿ, ಆಚಾರ, ವಿಚಾರ ಪರಿಚಯ ಮಾಡಿ ಕೊಡುವ ಮೂಲಕ ಸಕ್ಕರೆ ನಾಡಿನ ಹಿರಿಮೆಯನ್ನು ಜಪಾನ್‌ನ ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುವ ಸಲುವಾಗಿ ಏ.23ರಂದು ಜಪಾನ್‌ಗೆ ತೆರಳಿದ್ದರು. ಕರ್ನಾಟಕ ಸಂಸ್ಕೃತಿ, ಆಚಾರ, ವಿಚಾರ, ಭಾಷೆ, ಊಟ, ತಿಂಡಿ, ಉಡುಗೆ, ತೊಡುಗೆ, ಕಲೆ, ಕನ್ನಡದ ಸೊಗಡಿನ ಬಗ್ಗೆ ಜೊತೆಗೆ ಈ ನೆಲದ ಇತಿಹಾಸ ಸೇರಿದಂತೆ ಹಲವಾರು ವಿಚಾರಗಳನ್ನು ಜಪಾನ್ ಮಕ್ಕಳೊಂದಿಗೆ ಹಂಚಿಕೊಂಡಿದ್ದಾರೆ.

ಈ ಇಬ್ಬರು ವಿದ್ಯಾರ್ಥಿಗಳು ಅಲ್ಲಿನ ವಿದ್ಯಾರ್ಥಿಗಳ ಮನೆಯಲ್ಲಿ ಉಳಿದುಕೊಂಡು ಅವರ ಸಾಂಪ್ರದಾಯಿಕ ಉಡುಗೆ ತೊಟ್ಟು, ಅವರ ಸಂಸ್ಕೃತಿ, ಆಚಾರ, ವಿಚಾರ ಕಲಿಯುವ ಪ್ರಯತ್ನ ಮಾಡುವ ಮೂಲಕ ಕನ್ನಡದ ಕಂಪನ್ನು ಅವರಿಗೆ ಕಲಿಸಿಕೊಡುವ ಕೆಲಸ ಮಾಡಿರುವುದು ಶ್ಲಾಘನೀಯ ಎಂದು ಶಾಲೆ ಅಧ್ಯಕ್ಷ ಮಂಜು ತಿಳಿಸಿದ್ದಾರೆ.

ಇಥಮಿ ಶಾಲೆಯ ವಿವಿಧ ತರಗತಿ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ಅವಕಾಶ ದೊರಕಿದ್ದು, ಅಲ್ಲಿನ ಮಕ್ಕಳೊಂದಿಗೆ ಬೆರೆತು ನಮ್ಮ ಕನ್ನಡ ಸಂಸ್ಕೃತಿಯ ಬಗ್ಗೆಯೂ ವಿವರಿಸಿ ಹೇಳಲಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ, ತಂತ್ರಜ್ಞಾನ, ಸಂಸ್ಕೃತಿ ಬಗ್ಗೆ ತಿಳಿದುಕೊಳ್ಳಲು ಪ್ರಮುಖ ವೇದಿಕೆಯಾಗಿದೆ. ಇದರ ಜೊತೆಗೆ ಕನ್ನಡದ ಸಂಸ್ಕೃತಿಯನ್ನು ಅಲ್ಲಿನ ಮಕ್ಕಳಿಗೆ ಹೇಳಿ ಅಲ್ಲಿನ ಸಂಸ್ಕೃತಿಯನ್ನು ನಮ್ಮ ಮಕ್ಕಳು ಕಲಿಯುವ ಉದ್ದೇಶವಾಗಿತ್ತು ಎಂದು ಅವರು ವಿವರಿಸಿದ್ದಾರೆ.

ಸಾಕಷ್ಟು ಶಾಲೆಯ ಪೈಪೋಟಿ ನಡುವೆ ಅಂತಾರಾಷ್ಟ್ರೀಯ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ರಿಪಬ್ಲಿಕ್ ಸೆಂಟ್ರಲ್ ಶಾಲೆಯ ಮಕ್ಕಳು ಆಯ್ಕೆಯಾಗಿದ್ದು, ಆಡಳಿತ ಮಂಡಳಿ ಮತ್ತು ಶಿಕ್ಷಕ ವೃಂದಕ್ಕೆ ಖುಷಿ ನೀಡಿದೆ ಎಂದು ತಿಳಿಸಿದರು.

ಒಟ್ಟಾರೆ ವಿದೇಶದಲ್ಲಿ ಕನ್ನಡ ಕಂಪನ್ನು ಪಸರಿಸುವ ಮೂಲಕ ಜಿಲ್ಲೆ ಮತ್ತು ದೇಶಕ್ಕೆ ನಮ್ಮ ಶಾಲೆಯ ವಿದ್ಯಾರ್ಥಿಗಳು ಕೀರ್ತಿ ತಂದಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ರಿಪಬ್ಲಿಕ್ ಶಾಲೆಯ ಕೀರ್ತಿ ಪತಾಕೆ ಹಾರಿಸಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಸಂಚಾರಿ ವಾಹನದಲ್ಲಿ ರಕ್ತದಾನ ಮಾಡಿದ ಯುವಕರು

ಮಂಡ್ಯ, ಮೇ 28– ತಾಲೂಕಿನ ಮಂಗಲ ಗ್ರಾಮದ ಜೈ ಭೀಮ್ ಯುವಕರ ಸಂಘದ ಆವರಣದಲ್ಲಿ ಜೈ ಭೀಮ್ ಯುವಕರ ಸಂಘ ಮತ್ತು ನೆಲದನಿ ಬಳಗ ಭಾನುವಾರ ಆಯೋಜಿಸಿದ್ದ ಗ್ರಾಮೀಣ ಭಾಗದಲ್ಲಿ ಮಿಮ್ಸ್‌ನ ರಕ್ತನಿಧಿ ಕೇಂದ್ರದ ಸಂಚಾರಿ ರಕ್ತ ಸಂಗ್ರಹಿಸುವ ಮತ್ತು ಸಾಗಿಸುವ ವಾಹನದಲ್ಲಿ ಸ್ವಯಂ ಪ್ರೇರಿತ ರಕ್ತದಾನಕ್ಕೆ ಚಾಲನೆ ನೀಡಲಾಯಿತು.



ಈ ಸಂದರ್ಭ ಮಾತನಾಡಿದ ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ 66ನೇ ಬಾರಿಯ ರಕ್ತದಾನಿ ಎಂ.ಸಿ.ಲಂಕೇಶ್, ಜಿಲ್ಲೆಯಲ್ಲಿ ರಕ್ತದ ಕೊರತೆ ಹೆಚ್ಚಾಗುತ್ತಿದ್ದು ಮಿಮ್ಸ್‌ನ ರಕ್ತನಿಧಿ ಕೇಂದ್ರವು ರಕ್ತದಾನಿಗಳ ನಿರೀಕ್ಷೆಯಲ್ಲಿದೆ. ಕೋವಿಡ್–19ರ ಲಾಕ್‌ಡೌನ್‌ನಿಂದ ಸಂಘ–ಸಂಸ್ಥೆಗಳು ನಡೆಸುತ್ತಿದ್ದ ರಕ್ತದಾನ ಕಾರ್ಯಕ್ರಮ ಸಮರ್ಪಕವಾಗಿ ನಡೆಯದಿರುವುದರಿಂದ ಸದ್ಯ ಜಿಲ್ಲೆಯ ರಕ್ತನಿಧಿಯಲ್ಲಿ ರಕ್ತದ ಅಭಾವ ಉಂಟಾಗಿದೆ ಇದರಿಂದ ರೋಗಿಗಳು ಮತ್ತು ಪೋಷಕರು ರಕ್ತಕ್ಕಾಗಿ ಪರದಾಡುವಂತಾಗಿದೆ ಎಂದರು.

ತಿಂಗಳಲ್ಲಿ ಸಾವಿರಕ್ಕೂ ಹೆಚ್ಚಿನ ರಕ್ತದ ಸಂಗ್ರಹ ಸ್ವಯಂಪ್ರೇರಿತ ರಕ್ತದಾನಿಗಳು, ಕ್ಯಾಂಪ್ ಮತ್ತು ವಿದ್ಯಾರ್ಥಿಗಳಿಂದ ಆಗುತ್ತಿದ್ದವು. ಆದರೆ ಸದ್ಯ ರಕ್ತ ಸಂಗ್ರಹಣೆ ಶೇ.60 ರಷ್ಟು ಕಡಿಮೆಯಾಗಿದೆ. ಯುವ ಜನತೆ ರಕ್ತದಾನ ಮಾಡಿ ಜೀವ ಉಳಿಸುವ ಮಾನವೀಯತೆ ಬೆಳೆಸಿಕೊಳ್ಳಬೇಕಿದೆ ಎಂದರು.

ರಕ್ತನಿಧಿ ಕೇಂದ್ರಕ್ಕೆ ಸಂಚಾರಿ ರಕ್ತ ಸಂಗ್ರಹಿಸುವ ಮತ್ತು ಸಾಗಿಸುವ ವಾಹನ ಲಭ್ಯವಾಗಿದೆ. ಮಂಗಲ ಗ್ರಾಮದಲ್ಲಿ ಪ್ರಥಮ ಬಾರಿಗೆ ವಾಹನದ ಒಳಗಡೆ 25ಕ್ಕೂ ಹೆಚ್ಚು ರಕ್ತದಾನಿಗಳಿಂದ ರಕ್ತ ಸಂಗ್ರಹಿಸಲಾಗಿದ್ದು, ಗ್ರಾಮೀಣ ಭಾಗದಲ್ಲಿ ರಕ್ತದಾನ ಮಾಡಿ ಮಾನವೀಯತೆ ಮೆರೆಯುವ ಸಹೃದಯಿಗಳು ಹೆಚ್ಚಾಗಬೇಕಿದೆ ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ರಕ್ತದಾನ ಮಾಡಲು ಬಂದ ಯುವಕರ ಆರೋಗ್ಯ ತಪಾಸಣೆ ನಡೆಸಿ, ಸ್ಥಳದಲ್ಲೇ ರಕ್ತವನ್ನು ಸಂಗ್ರಹಿಸಿ ರಕ್ತ ವರ್ಗೀಕರಣ ಮಾಡಿ, ದಾನಿಗಳಿಗೆ ರಕ್ತದ ಗುಂಪಿನ ಹೆಸರನ್ನು ತಿಳಿಸಿ ಪ್ರಮಾಣ ಪತ್ರಗಳನ್ನು ನೀಡಿ ಅಭಿನಂದಿಸಲಾಯಿತು. ಗ್ರಾಪಂ ಸದಸ್ಯ ಮಹದೇವಸ್ವಾಮಿ ಅವರು 25ನೇ ಬಾರಿ ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ರಕ್ತನಿಧಿ ಕೇಂದ್ರದ ವೈದ್ಯರಾದ ಡಾ.ಆಯುಷಾ, ಸಿಬ್ಬಂದಿಗಳಾದ ಜ್ಞಾನೇಶ್, ಧನಂಜಯ್, ಗ್ರಾಪಂ ಸದಸ್ಯರಾದ ಕುಮಾರ್‌ಗೌಡ, ಮಹದೇವಸ್ವಾಮಿ, ಮಧು, ಶಿವಲಿಂಗ, ದೇವರಾಜು, ವಿಕಾಶ್, ಸನತ್ ಕುಮಾರ್, ಮಲ್ಲೇಶ್, ಶಿವರಾಂ, ಕೀರ್ತಿ ಕುಮಾರ್, ಸುನೀಲ್, ಶಿಕ್ಷಕಿ ವರಲಕ್ಷ್ಮಿ ಮತ್ತಿತರರಿದ್ದರು.

ಶಾಲಾ ಶೈಕ್ಷಣಿಕ ಚಟುವಟಿಕೆಯನ್ನು ಹಬ್ಬದಂತೆ ಆರಂಭಿಸಿ: ಬಿಇಓ ಸೀತಾರಾಮ್



ಕೆ.ಆರ್.ಪೇಟೆ, ಮೇ 28– ಶಿಕ್ಷಕರು ಪೂರ್ವಸಿದ್ಧತೆ ಕೈಗೊಂಡು ಸಮುದಾಯದ ಸಹಕಾರದೊಂದಿಗೆ ಶಾಲಾ ಶೈಕ್ಷಣಿಕ ಚಟುವಟಿಕೆಯನ್ನು ಹಬ್ಬದಂತೆ ಆರಂಭಿಸುವ ಮೂಲಕ ಮಕ್ಕಳ ದಾಖಲಾತಿ ಹೆಚ್ಚಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಸೀತಾರಾಮ್ ತಿಳಿಸಿದರು.

ಪಟ್ಟಣದ ಬಿಜಿಎಸ್ ಶಾಲಾವರಣದಲ್ಲಿ 2023–24ನೇ ಶೈಕ್ಷಣಿಕ ಸಾಲಿನ ಶಾಲಾ ಪ್ರಾರಂಭೋತ್ಸವ ಕುರಿತ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಕಳೆದ ಸಾಲಿನಲ್ಲಿ ತಾಲೂಕಿನಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಶೈಕ್ಷಣಿಕ ಸಾಲನ್ನು ಯಶಸ್ವಿಯಾಗಿ ಪೂರೈಸಿದ್ದಕ್ಕೆ ಇಲಾಖೆ ಪರವಾಗಿ ಧನ್ಯವಾದ. ಎಸ್‌ಎಸ್‌ಎಲ್‌ಸಿಯಲ್ಲೂ ಉತ್ತಮ ಫಲಿತಾಂಶಕ್ಕೆ ಕಾರಣರಾಗಿದ್ದೀರಿ. ಈ ಸಾಲಿನಲ್ಲೂ ಶಾಲೆಯನ್ನು ಉತ್ತಮವಾಗಿ ಆರಂಭಿಸಿ ಎಲ್ಲರ ವಿಶ್ವಾಸಗಳಿಸಿ ಮುಖ್ಯಶಿಕ್ಷಕರು ಕಾರ್ಯ ನಿರ್ವಹಿಸಬೇಕು. ಶಾಲೆಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಎಲ್ಲಾ ಶಿಕ್ಷಕರು ಆರೋಗ್ಯವಂತರಾಗಿ ಶುಚಿಯಾದ ಬಟ್ಟೆಗಳನ್ನು ಧರಿಸಿ ಕರ್ತವ್ಯ ನಿರ್ವಹಿಸಬೇಕು. ಸಮುದಾಯ, ಪೋಷಕರೊಂದಿಗೆ ಉತ್ತಮ ಒಡನಾಟ ಇಟ್ಟುಕೊಳ್ಳಬೇಕು. ಸಭೆ ಸಮಾರಂಭದ ನಡಾವಳಿ ಮಾಡಿ ಎಲ್ಲಾ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕಡ್ಡಾಯವಾಗಿ ಸಮಯಪಾಲನೆ ಮಾಡಿ, ಮಕ್ಕಳ ಪ್ರತಿಭೆ ಪ್ರೋತ್ಸಾಹಿಸಿ ಉತ್ಸಾಹ ತುಂಬುವ ಕೆಲಸ ಮಾಡಬೇಕು. ಖಾಸಗಿ ಶಾಲೆಗಳು ಸರ್ಕಾರಿ ಪಠ್ಯ ಪುಸ್ತಕಗಳನ್ನು ಕಡ್ಡಾಯವಾಗಿ ಬೋಧಿಸಬೇಕು. ಈ ಹಿಂದೆ ಮುಚ್ಚಲಾಗಿದ್ದ ತಾಲೂಕಿನ ದೊಡ್ಡಗಾಡಿಗನಹಳ್ಳಿ ಹಾಗೂ ಚಾವಡಘಟ್ಟ ಶಾಲೆಗಳನ್ನು ಮತ್ತೆ ಪ್ರಾರಂಭಿಸಲಾಗುತ್ತಿದೆ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ಲಿಂಗರಾಜು ಮಾತನಾಡಿ, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಪ್ರತಿದಿನ ಅಗತ್ಯ ಮಾಹಿತಿಗಳನ್ನು ಅಪ್‌ಲೋಡ್ ಮಾಡಬೇಕು. ಇಲಾಖೆ ಸುತ್ತೋಲೆಯಂತೆ ಕರ್ತವ್ಯ ನಿರ್ವಹಿಸಬೇಕು. ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಬೇಕು ಎಂದರು.

ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್ ಮಾತನಾಡಿದರು. ಸಭೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿಎನ್.ಯತೀಶ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಲಕ್ಷ್ಮಣಗೌಡ, ಶಿಕ್ಷಣ ಸಂಯೋಜಕರಾದ ಮೋಹನ್‌ಕುಮಾರ್, ವೇಣುಗೋಪಾಲ್, ವೀರಭದ್ರಯ್ಯ, ನೀಲಾಮಣಿ, ನಿಂಗೇಗೌಡ ಇತರರಿದ್ದರು.

ಮಳೆ ನೀರು ಚರಂಡಿ ಸ್ವಚ್ಛತೆ ವೇಳೆ ತಲೆ ಬುರುಡೆ ಪತ್ತೆ?



ಮನುಷ್ಯನ ತಲೆ ಬುರುಡೆ ಕಂಡಿದ್ದಾಗಿ ಕಾರ್ಮಿಕ ಹೇಳಿದ್ದರ ಹಿನ್ನೆಲೆಯಲ್ಲಿ ಅದರ ಪತ್ತೆಗೆ ಕಾರ್ಯಾಚರಣೆ ನಡೆಸಲಾಯಿತು.

ಮೈಸೂರು, ಮೇ 28(ಎಸ್‌ಬಿಡಿ)– ಮೈಸೂರಿನ ಅಗ್ರಹಾರದಲ್ಲಿ ಮಳೆನೀರು ಚರಂಡಿ ಸ್ವಚ್ಛತೆ ವೇಳೆ ಮನುಷ್ಯನ ತಲೆಬುರುಡೆ ಕಾಣಿಸಿದ್ದಾಗಿ ಕಾರ್ಮಿಕರು ತಿಳಿಸಿದ್ದು, ಸ್ಥಳೀಯರಲ್ಲಿ ಆತಂಕ ಮನೆ ಮಾಡಿದೆ.

ಮುಂಗಾರು ಮಳೆ ನಿರ್ವಹಣೆ ಹಿನ್ನೆಲೆಯಲ್ಲಿ ಅಗ್ರಹಾರದ ಶಂಕರಮಠ ರಸ್ತೆ, 4ನೇ ಕ್ರಾಸ್‌ನ ಶ್ರೀಕಾಂತ ಶಾಲೆ ಎದುರು ಮಳೆ ನೀರು ಚರಂಡಿಯ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದೆ. ಚರಂಡಿಯಿಂದ ತ್ಯಾಜ್ಯವನ್ನು ತೆರವು ಮಾಡುವಾಗ ಹೆಲ್ಮೆಟ್‌ನಲ್ಲಿ ಮನುಷ್ಯನ ತಲೆಬುರುಡೆ ಕಂಡಿದ್ದಾಗಿ ಕಾರ್ಮಿಕರು ತಿಳಿಸಿದ್ದರಿಂದ ಪತ್ತೆ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಈ ಬಗ್ಗೆ ಸ್ಥಳೀಯ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಪ್ರತಿಕ್ರಿಯಿಸಿ, ಶ್ರೀಕಾಂತ ಶಾಲೆ ಭಾಗದ ಮಳೆ ನೀರು ಚರಂಡಿ ಹೂಳೆತ್ತುವ ಕಾಮಗಾರಿಗೆ ಪಾಲಿಕೆಯಿಂದ 95 ಸಾವಿರ ರೂ. ಮಂಜೂರಾಗಿದ್ದು, ದಯಾನಂದ ಎನ್ನುವವರಿಗೆ ಗುತ್ತಿಗೆ ನೀಡಲಾಗಿದೆ. ಶುಕ್ರವಾರದಿಂದ ಕೆಲಸ ಪ್ರಾರಂಭಿಸಲಾಗಿದೆ. ಹೂಳೆತ್ತುವ ವೇಳೆ ಕೈಗೆ ಸಿಕ್ಕ ಹೆಲ್ಮೆಟ್ ಹೊರತೆಗೆದಾಗ ಅದರೊಂದಿಗೆ ಮನುಷ್ಯನ ತಲೆ ಬುರುಡೆಯಿತ್ತು. ಗಮನಿಸದೆ ಅದರ ಬಾಯಿಯೊಳಗೆ ಕೈಹಾಕಿ ಹಲ್ಲುಗಳನ್ನು ಹಿಡಿದುಕೊಂಡಿದ್ದೆ. ಮತ್ತೆ ಹೆಲ್ಮೆಟ್ ನೋಡಿದಾಗ ತಲೆಬುರುಡೆ ಬಾಯಿಯೊಳಗೆ ಕೈ ಹಾಕಿದ್ದು ಗೊತ್ತಾಗಿ ಗಾಬರಿಯಿಂದ ಅಲ್ಲೇ ಬಿಸಾಡಿ ಹೊರಬಂದೆ. ತಲೆ ಸುತ್ತಿದಂತಾಗಿ ವಾಂತಿಯಾಯಿತು ಎಂದು ಕಾರ್ಮಿಕ ಪಳನಿಸ್ವಾಮಿ ಹೇಳಿದ್ದು, ಅವರೊಂದಿಗೆ ಕೆಲಸ ಮಾಡುತ್ತಿದ್ದ ಮಹಿಳೆಯೂ ಗಮನಿಸಿದ್ದಾಗಿ ಶನಿವಾರ ಬೆಳಗ್ಗೆ ಪರಿಶೀಲನೆಗೆ ಹೋದಾಗ ಗುತ್ತಿಗೆದಾರರು ತಿಳಿಸಿದರು ಎಂದು ಹೇಳಿದ್ದಾರೆ.

ಕೂಡಲೇ ನಾನು ಕೆಆರ್.ಠಾಣೆ ಇನ್‌ಸ್ಪೆಕ್ಟರ್ ಮಹೇಶ್ ಅವರಿಗೆ ಮಾಹಿತಿ ನೀಡಿದಾಗ ಅವರು ಪೊಲೀಸ್ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿದರು. ಜೆಸಿಬಿ ಮೂಲಕ ಚರಂಡಿಯ ಸ್ಲಾಬ್‌ಗಳನ್ನು ತೆಗೆಸಿ ತ್ಯಾಜ್ಯ ಹೊರ ತೆಗೆಯಲಾಯಿತು. ಚರಂಡಿಯಲ್ಲಿ ಮೂಟೆ ಕಟ್ಟಿ ಬಿಸಾಡಿದ್ದ ತ್ಯಾಜ್ಯದ ರಾಶಿಯಿತ್ತು. ಹಲವು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಲಾಯಿತಾದರೂ ತಲೆಬುರುಡೆ ಪತ್ತೆಯಾಗಲಿಲ್ಲ. ನೀರಿನೊಂದಿಗೆ ಕೊಚ್ಚಿ ಕೊಂಡು ಮುಂದೆ ಹೋಗಿರಬಹುದು. ಮತ್ತೆ ಸೋಮವಾರವೂ ಕಾರ್ಯಾಚರಣೆ ಮುಂದುವರೆಸಲಾಗುವುದು ಎಂದು ತಿಳಿಸಿದರು.

ಉಕ್ಕಿ ಹರಿಯುತ್ತಿರುವ ಮ್ಯಾನ್‌ಹೋಲ್ ಹಂಚ್ಯಾ–ಸಾತಗಳ್ಳಿ ಬಿ–ಜೋನ್ ನಿವಾಸಿಗಳ ನರಕಯಾತನೆ



ಮೈಸೂರು, ಮೇ 28(ಎಂಕೆ)– ಮೈಸೂರಿನ ಹೊರವಲಯದಲ್ಲಿರುವ ಹಂಚ್ಯಾ–ಸಾತಗಳ್ಳಿ ಬಿ–ಜೋನ್‌ನಲ್ಲಿ ಯುಜಿಡಿ ಮ್ಯಾನ್‌ಹೋಲ್‌ಗಳಿಂದ ಕೊಳಚೆ ನೀರು ಉಕ್ಕಿ ಹರಿಯುತ್ತಿದ್ದು, ನಿವಾಸಿಗಳು ಉಸಿರಾಡುವುದಕ್ಕೂ ಕಷ್ಟಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಭಿವೃದ್ಧಿ ಪಡಿಸಿರುವ ಹಂಚ್ಯಾ–ಸಾತಗಳ್ಳಿ ಬಿ–ಜೋನ್‌ನಲ್ಲಿ ಯುಜಿಡಿ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿಯುತ್ತಿದ್ದು, ನಿವಾಸಿಗಳು ಮೂಗು ಮುಚ್ಚಿಕೊಂಡು ತಿರುಗಾಡುವ ದುಸ್ಥಿತಿ ಎದುರಾಗಿದೆ.

ಕೆಲ ತಿಂಗಳುಗಳ ಹಿಂದೆಯಷ್ಟೇ ಇಲ್ಲಿನ ರಸ್ತೆಗಳಿಗೆ ಡಾಂಬರೀಕರಣ, ಮಳೆ ನೀರು ಹರಿಯುವ ಚರಂಡಿ ಹಾಗೂ ಯುಜಿಡಿ ಮ್ಯಾನ್‌ಹೋಲ್‌ಗಳ ಕಾಮಗಾರಿಯನ್ನು ಮಾಡಲಾಗಿದೆ. ಆದರೆ ಅವ್ಯವಸ್ಥಿತ ಯುಜಿಡಿ ಕಾಮಗಾರಿಯಿಂದಾಗಿ ಮ್ಯಾನ್‌ಹೋಲ್‌ಗಳಿಂದ ಹೊರಬರುತ್ತಿರುವ ಕೊಳಚೆ ನೀರು, ಮಳೆ ನೀರು ಹರಿಯುವ ಚರಂಡಿಗಳಲ್ಲಿ ತುಂಬಿ ಅವಾಂತರ ಸೃಷ್ಟಿಸುತ್ತಿದೆ.

ರಸ್ತೆಯ ಎರಡೂ ಬದಿಯಲ್ಲಿರುವ ಚರಂಡಿಗಳಲ್ಲಿ ಕೊಳಚೆ ನೀರು ಆವೃತ್ತವಾಗಿದ್ದು, ದುರ್ವಾಸನೆಯಿಂದಾಗಿ ಉಸಿರಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಂಜೆ ವೇಳೆ ಸೊಳ್ಳೆ ಕಾಟ ಹೆಚ್ಚಾಗಿದ್ದು, ಸಾಂಕ್ರಾಮಿಕ ಕಾಯಿಲೆಗಳಿಗೆ ತುತ್ತಾಗುವ ಭಯ ಎದುರಾಗಿದೆ ಎಂದು ಇಲ್ಲಿನ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡಿದ್ದಾರೆ.





ಹತ್ತಾರು ಬಾರಿ ಅರ್ಜಿ: ಮ್ಯಾನ್‌ಹೋಲ್‌ಗಳಲ್ಲಿ ಕೊಳಚೆ ನೀರು ತುಂಬಿ ಹರಿಯುತ್ತಿದೆ. ಕೂಡಲೇ ದುರಸ್ತಿಗೊಳಿಸಿ ಎಂದು ಹತ್ತಾರು ಬಾರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಮುಖೇನ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ನಾಳೆ ಬರುತ್ತೇವೆ, ನಾಡಿದ್ದು ಬರುತ್ತೇವೆ ಎಂದೇಳುತ್ತಲೇ ಕಾಲಹರಣ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕರುಣೆ ಇಲ್ಲದ ಮುಡಾ ಅಧಿಕಾರಿ–ಸಿಬ್ಬಂದಿ: ನರಹಂತಕ ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದೇವೆ ಎಂದು ಇಲ್ಲಿ ನಮಗೆ ನಿವೇಶ ನೀಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಅಗತ್ಯ ಮೂಲ ಸೌಕರ್ಯಗಳನ್ನು ನೀಡದೆ ವಂಚಿಸಿರುವುದಲ್ಲದೆ, ದುರ್ವಾಸನೆಯಿಂದ ಸಾಯುವಂತೆ ಮಾಡಿದ್ದಾರೆ. ಕಿಂಚಿತ್ತೂ ಕರುಣೆ ಇಲ್ಲದ ಮುಡಾ ಅಧಿಕಾರಿ–ಸಿಬ್ಬಂದಿಗಳು ವರ್ತನೆಯಿಂದಾಗಿ ದಿನನಿತ್ಯ ನರಳುತ್ತಿದ್ದೇವೆ ಎಂದು ನಿವೃತ್ತ ಪೊಲೀಸ್ ಅಧಿಕಾರಿ ಡಿ.ಆರ್.ಜಯಸ್ವಾಮಿ ಅತೀವ ಬೇಸರ ವ್ಯಕ್ತಪಡಿಸಿದರು.

ನೀರಿನ ಸಂಪ್‌ಗೆ ತೆಗೆದಿದ್ದ ಗುಂಡಿಯಲ್ಲಿ ವ್ಯಕ್ತಿ ಮೃತದೇಹ ಪತ್ತೆ



ಮೈಸೂರು, ಮೇ 28(ಆರ್‌ಕೆ)–ಆಸ್ಪತ್ರೆ ನಿರ್ಮಿಸಲುದ್ದೇಶಿಸಿದ್ದ ಜಾಗದಲ್ಲಿ ನೀರಿನ ಸಂಪ್‌ಗೆ ತೆಗೆದಿದ್ದ ಗುಂಡಿಯಲ್ಲಿ ವ್ಯಕ್ತಿಯೋರ್ವನ ಮೃತದೇಹ ಪತ್ತೆಯಾಗಿದೆ.

ಮೈಸೂರಿನ ವಿಜಯನಗರ ಮೊದಲ ಹಂತದ ನಿವಾಸಿ ಸೆಸ್ ಇಂಜಿನಿಯರಿಂಗ್ ವರ್ಕ್ಸ್ ಮಾಲೀಕ ಕೆ.ಎಂ.ಚೆರಿಯನ್ ಅವರ ಮಗ ಕ್ರಿಸ್ಟೋ ಚೆರಿಯನ್(35) ಸಾವನ್ನಪ್ಪಿರುವವರು. ಶನಿವಾರ ರಾತ್ರಿ 7 ಗಂಟೆ ವೇಳೆ ಮೊಬೈಲ್ ಮನೆಯಲ್ಲೇ ಬಿಟ್ಟು ಹೊರಗೆ ಹೋಗಿದ್ದ ಕ್ರಿಸ್ಟೋ ಚೆರಿಯನ್ ಹಿಂದಿರುಗಿರಲಿಲ್ಲ.

ಇಂದು ಬೆಳಗ್ಗೆ ಅವರ ಮನೆ ಸಮೀಪವೇ ಆಸ್ಪತ್ರೆ ನಿರ್ಮಾಣಕ್ಕೆಂದು ನೀರಿನ ಸಂಪ್‌ಗೆ ತೆಗೆದಿದ್ದ ಗುಂಡಿಯಲ್ಲಿ ಆತನ ಮೃತದೇಹ ಪತ್ತೆಯಾಗಿದೆ. ರಸ್ತೆ ಬದಿಯಲ್ಲೇ ಇದ್ದ ಗುಂಡಿಗೆ ಆಯತಪ್ಪಿ ಬಿದ್ದು ಕ್ರಿಸ್ಟೋ ಚೆರಿಯನ್ ತಲೆಯಲ್ಲಿ ಆಂತರಿಕ ಗಾಯಗಳಾಗಿ ಸಾವನ್ನಪ್ಪಿರಬಹುದು ಎಂದು ಹೇಳಲಾಗಿದೆ.


ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ಪ್ರದೀಪ್ ಹಾಗೂ ಸಿಬ್ಬಂದಿ ಮಹಜರು ನಡೆಸಿದರು. ಡಾ. ಶರತ್‌ಚಂದ್ರ ಎಂಬುವರು ಆಸ್ಪತ್ರೆ ನಿರ್ಮಿಸಲೆಂದು ನೀರಿಗಾಗಿ ಸಂಪ್ ಮಾಡಲು ಗುಂಡಿ ತೆಗೆಸಿದ್ದರು ಎಂಬುದು ಈ ವೇಳೆ ತಿಳಿದು ಬಂದಿದೆ. ಯುಡಿಆರ್ ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ.

ಪಾಲಾಕ್ಷಯ್ಯ ನಿಧನ



ರಾಮನಗರ, ಮೇ 28– ಜಿಲ್ಲೆಯ ಮಾಗಡಿ ತಾಲೂಕು, ಸೋಲೂರು ಗ್ರಾಮದ ನಿವಾಸಿ ಪಾಲಾಕ್ಷಯ್ಯ(87) ಅವರು ಭಾನುವಾರ ರಾತ್ರಿ ನಿಧನರಾದರು.

ಮೃತರು 'ಮೈಸೂರು ಮಿತ್ರ' ವರದಿಗಾರ ಎಸ್.ಪಿ.ನಂಜಪ್ಪ ಸೇರಿ ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ನೂತನ ಸಂಸತ್ ಭವನ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾನುವಾರ ಭಾಗವಹಿಸಿದ್ದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರನ್ನು ಭೇಟಿ ಮಾಡಿದ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಅವರು ಗೌಡರಿಂದ ಆಶೀರ್ವಾದ ಪಡೆದರು.

ಸತೀಶ್ ಜಾರಕಿಹೊಳಿ ಮುಖ್ಯಮಂತ್ರಿ ಆಗಿಯೇ ಆಗ್ತಾರೆ: ಲಕ್ಷ್ಮಿ ಹೆಬ್ಬಾಳ್ಕರ್

ಬೆಳಗಾವಿ, ಮೇ 28– ಸಚಿವ ಸತೀಶ್ ಜಾರಕಿಹೊಳಿಯವರಿಗೆ ಸಿಎಂ ಆಗುವ ಸಾಮರ್ಥ್ಯ ಇದೆ. ಅವರು ಮುಂದೆ ಸಿಎಂ ಆಗಿಯೇ ಆಗುತ್ತಾರೆ ಎಂದು ನೂತನ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದ್ದಾರೆ.

ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಸತೀಶ್ ಜಾರಕಿಹೊಳಿಯವರಿಗೆ ಡಿಸಿಎಂ ಸ್ಥಾನ ಕೈತಪ್ಪಿದ್ದರ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು. ಈ ವೇಳೆ ಸತೀಶ್ ಅವರಿಗೆ ಡಿಸಿಎಂ ಅಲ್ಲ, ರಾಜ್ಯದ ಮುಖ್ಯಮಂತ್ರಿಯಾಗುವ ಸಾಮರ್ಥ್ಯವಿದೆ. ಮುಂದೆ ಖಂಡಿತಾ ಸಿಎಂ ಆಗುತ್ತಾರೆ ಎಂದಿದ್ದಾರೆ.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಈ ಹಿಂದೆ ನಡೆದ ಭ್ರಷ್ಟಾಚಾರದ ತನಿಖೆ ನಡೆಸುತ್ತೀರಾ? ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಇನ್ನೂ ಸಚಿವರಿಗೆ ಅಧಿಕೃತವಾಗಿ ಇಲಾಖೆಗಳ ಹಂಚಿಕೆ ಆಗಿಲ್ಲ. ನಾನು ಸಚಿವೆ ಆಗಿ ಪ್ರಮಾಣವಚನ ಸ್ವೀಕರಿಸಿ ಇನ್ನೂ 24 ಗಂಟೆಯಾಗಿಲ್ಲ. ರಾಜ್ಯದ ಜನರು, ಮುಖ್ಯಮಂತ್ರಿ ಹಾಗೂ ಡಿಸಿಎಂ ಮೆಚ್ಚುವಂತಹ ಆಡಳಿತ ನೀಡುತ್ತೇನೆ. ಯಾವುದೇ ಇಲಾಖೆ ನೀಡಿದರೂ ಭ್ರಷ್ಟಾಚಾರ ರಹಿತ ಆಡಳಿತ ನೀಡುತ್ತೇನೆ ಎಂದಿದ್ದಾರೆ. ರಾಜ್ಯದಲ್ಲಿ 70 ಸಾವಿರ ಅಂಗನವಾಡಿ ಕೇಂದ್ರಗಳಿವೆ. ಬಹಳಷ್ಟು ಕಡೆ ಸ್ವಂತ ಕಟ್ಟಡಗಳಿಲ್ಲ. ಅಂಗನವಾಡಿ ಶಿಕ್ಷಣದಲ್ಲಿ ಗಣನೀಯ ಬದಲಾವಣೆ ತರುವ ಆಸೆ ಇದೆ. ಇಲಾಖೆಯನ್ನು ಅರಿಯಲು ಸ್ವಲ್ಪ ಸಮಯಬೇಕು. ಒಂದೇ ದಿನದಲ್ಲಿ ಎಲ್ಲ ಬದಲಾವಣೆ ಅಸಾಧ್ಯ. ಹಂತ ಹಂತವಾಗಿ ಅಗತ್ಯ ಬದಲಾವಣೆಗಳನ್ನು ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದಿದ್ದಾರೆ.



ಮೈಸೂರಿನ ಇಲವಾಲ ಗ್ರಾಮದ ಮುಖಂಡರಾದ ಸುಧಾಕರ್, ಶಿವಲಿಂಗೇಗೌಡ, ನಂಜುಂಡೇಗೌಡ, ಸ್ವಾಮಿ ಮತ್ತಿತರರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಅವರ ಶ್ರೀಮತಿ ಲಲಿತ ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು.

ಭಾರೀ ಮಳೆ: ಐಪಿಎಲ್ ಫೈನಲ್ ಇಂದಿಗೆ ಮುಂದೂಡಿಕೆ

ಅಹಮದಾಬಾದ್: ನಿರಂತರವಾಗಿ ಸುರಿದ ಭಾರೀ ಮಳೆಯಿಂದಾಗಿ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಗುಜರಾತ್ ಟೈಟಾನ್ಸ್ ನಡುವಿನ ಐಪಿಎಲ್ ಫೈನಲ್ ಪಂದ್ಯವನ್ನು ನಾಳೆ (ಸೋಮವಾರ)ಗೆ ಮುಂದೂಡಿಕೆ ಮಾಡಲಾಗಿದೆ.

ನಾಳೆ ಎಂದಿನ ಸಮಯದಲ್ಲಿಯೇ ಫೈನಲ್ ಪಂದ್ಯ ನಡೆಯಲಿದೆ. ಭಾನುವಾರ ಕನಿಷ್ಠ ಟಾಸ್ ಪ್ರಕ್ರಿಯೆಗೂ ಮಳೆ ಅವಕಾಶ ನೀಡಲಿಲ್ಲ. ಈಗಿರುವ ಮಾಹಿತಿಯ ಪ್ರಕಾರ ಸೋಮವಾರ ಅಹಮದಾಬಾದ್‌ನಲ್ಲಿ ಮಳೆಯ ಮುನ್ಸೂಚನೆ ಇಲ್ಲ. ಪೂರ್ಣ ಪಂದ್ಯ ನಡೆಯುವ ಸಾಧ್ಯತೆ ಅಧಿಕವಾಗಿದೆ ಎಂದು ಹೇಳಲಾಗಿದೆ.

ಇಂದು ಸಂಜೆಯಿಂದಲೇ ಭಾರೀ ಮಳೆ ಸುರಿದ ಕಾರಣ ಸ್ಟೇಡಿಯಂನಲ್ಲಿ ನೆರೆದಿದ್ದ ಅಪಾರ ಪ್ರೇಕ್ಷಕರಿಗೆ ನಿರಾಸೆ ಕಾಡಿತ್ತು. ಅಂತಿಮವಾಗಿ ಅಂಪೈರ್‌ಗಳು ಫೈನಲ್ ಪಂದ್ಯವನ್ನು ಮುಂದೂಡಿಕೆ ಮಾಡುವ ನಿರ್ಧಾರ ಮಾಡಿದರು. ಸೋಮವಾರ ಸಂಜೆ 7.30ಕ್ಕೆ ಪಂದ್ಯ ಆರಂಭವಾಗಲಿದೆ.

ಡಿ. ಶಿವಪ್ಪ ಸ್ಮಾರಕ ರಾಜ್ಯಮಟ್ಟದ ಗೋಲ್ಡ್‌ಕಪ್ ಫುಟ್ಬಾಲ್ ಪಂದ್ಯ

ಕೇರಳ ಚಾಂಪಿಯನ್, ಸುಂಟಿಕೊಪ್ಪ ರನ್ನರ್ಸ್

ಸುಂಟಿಕೊಪ್ಪ, ಮೇ 28– ಸುಂಟಿಕೊಪ್ಪದಲ್ಲಿ ನಡೆದ 25ನೇ ವರ್ಷದ ಡಿ.ಶಿವಪ್ಪ ಸ್ಮಾರಕ ರಾಜ್ಯ ಮಟ್ಟದ ಗೋಲ್ಡ್ ಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಕೇರಳದ ಅಮ್ಮಿಗೋಸ್ ಮಲ್ಲಪುರಂ ತಂಡ ಮಿಡ್ ಸಿಟಿ ಸುಂಟಿಕೊಪ್ಪ ತಂಡವನ್ನು ಟ್ರೈಬ್ರೇಕರ್‌ನಲ್ಲಿ 4–1 ಗೋಲುಗಳಿಂದ ಮಣಿಸುವ ಮೂಲಕ ಚಾಂಪಿಯನ್ ತಂಡವಾಗಿ ಹೊರ ಹೊಮ್ಮಿದೆ.

ಸುಂಟಿಕೊಪ್ಪದಲ್ಲಿ ಭಾನುವಾರ ನಡೆದ ಅಂತಿಮ ಪಂದ್ಯದಲ್ಲಿ ಅಮ್ಮಿಗೋಸ್ ಮಲ್ಲಪುರಂ ಮತ್ತು ಮಿಡ್ ಸಿಟಿ ಸುಂಟಿಕೊಪ್ಪ ತಂಡಗಳ ನಡುವಿನ ಪಂದ್ಯ ಅತ್ಯಂತ ರೋಮಾಂಚನಕಾರಿಯಾಗಿ ವೀಕ್ಷಕರ ಗಮನ ಸೆಳೆಯಿತು. ಪಂದ್ಯ ಆರಂಭವಾಗುತ್ತಿದ್ದಂತೆ ಎರಡು ತಂಡಗಳು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿದ್ದವು. ಸ್ಥಳೀಯ ತಂಡವಾದ ಮಿಡ್ ಸಿಟಿ ಸುಂಟಿಕೊಪ್ಪ ಪರ ಪ್ರೇಕ್ಷಕರ ಬೆಂಬಲ ಕಂಡು ಬಂತು. ಮಲ್ಲಪುರಂ ಅಮ್ಮಿಗೋಸ್ ತಂಡದ ಕುಟ್ಟಾಪ್ಪಿ ಅವರು ಅತ್ಯುತ್ತಮ ವೇಗದ ಓಟ ಹಾಗೂ ಚೆಂಡಿನ ಮೇಲಿನ ನಿಯಂತ್ರಣ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.



ಚಾಂಪಿಯನ್ ಪ್ರಶಸ್ತಿಯೊಂದಿಗೆ ಕೇರಳದ ಅಮ್ಮಿಗೋಸ್ ಮಲ್ಲಪುರಂ ತಂಡ.

ಪಂದ್ಯದ ಮೊದಲಾರ್ಧದ 20ನೇ ನಿಮಿಷದಲ್ಲಿ ಅಮ್ಮಿಗೋಸ್ ಮಲ್ಲಪುರಂ ತಂಡದ ಅಹ್ಮದಾದ್ ಅತ್ಯುತ್ತಮ ಅವಕಾಶವನ್ನು ಗೋಲಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದರು. ಆ ಮೂಲಕ ಮೊದಲು ಗೋಲು ಗಳಿಸಿದವರಿಗೆ ಜಿ.ಪಂ.ಮಾಜಿ ಸದಸ್ಯ ಲತೀಫ್ ಅವರು ಘೋಷಣೆ ಮಾಡಿದ ರೂ.5 ಸಾವಿರ ನಗದು ಮತ್ತು ಪುನೀತ್ ಅಭಿಮಾನಿಗಳ ಸಂಘ ನೀಡಿದ್ದ ಟ್ರೋಫಿಯನ್ನು ತಮ್ಮದಾಗಿಸಿಕೊಂಡರು.

ದ್ವಿತಿಯಾರ್ಧದಲ್ಲಿ ಮಿಡ್ ಸಿಟಿ ತಂಡದ ಆಟಗಾರರು ಆಕ್ರಮಣಕಾರಿ ಆಟಕ್ಕೆ ಇಳಿದು 10ನೇ ನಿಮಿಷದಲ್ಲಿ ತನ್ವಿರ್ (ಚಿನ್ನು) ಅವರು ಗೋಲು ಬಾರಿಸುವ ಮೂಲಕ ತಂಡವನ್ನು 1–1 ಗೋಲುಗಳಿಂದ ಸಮಬಲಗೊಳಿಸಿದರು.

ಟೈಬ್ರೇಕರ್ ಅಳವಡಿಕೆ: ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ಸಮಬಲ ಸಾಧಿಸಿದ್ದ ಹಿನ್ನೆಲೆಯಲ್ಲಿ ಪಂದ್ಯದಲ್ಲಿ ಟೈ ಬ್ರೇಕರ್ ಅಳವಡಿಸಲಾಯಿತು. ಈ ವೇಳೆ ಕೇರಳದ ಅಮ್ಮಿಗೋಸ್ ಮಲ್ಲಪುರಂ ತಂಡ ಒಟ್ಟು 4 ಗೋಲು ದಾಖಲಿಸಿದರೆ, ಮಿಡ್ ಸಿಟಿ ಸುಂಟಿಕೊಪ್ಪ ತಂಡ ಕೇವಲ 1 ಗೋಲು ಗಳಿಸಿ ರನ್ನರ್ಸ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಚಾಂಪಿಯನ್ ತಂಡ ಡಿ.ಶಿವಪ್ಪ ಗೋಲ್ಡ್ ಕಪ್ ಸಹಿತ 1 ಲಕ್ಷ ರೂ. ನಗದು ಹಾಗೂ ರನ್ನರ್ಸ್ ತಂಡಕ್ಕೆ ಟ್ರೋಫಿ ಮತ್ತು 50 ಸಾವಿರ ನಗದು ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

ಮೆರವಣಿಗೆ: ಪಂದ್ಯ ಆರಂಭಕ್ಕೂ ಮುನ್ನ ರಾಜವಂಶಸ್ಥ ಯದುವೀರ್ ಒಡೆಯರ್, ವಿಶಾಲ್ ಶಿವಪ್ಪ, ಶುಭ್ರ ಅಯ್ಯಪ್ಪ, ಹರಪಳ್ಳಿ ರವೀಂದ್ರ ಅವರನ್ನು ತೆರೆದ ಜೀಪಿನಲ್ಲಿ ಸುಂಟಿಕೊಪ್ಪ ಬಸ್ ನಿಲ್ದಾಣದಿಂದ ಆಟದ ಮೈದಾನದವರೆಗೆ ವಿವಿಧ ಕಲಾ ತಂಡಗಳೊಂದಿಗೆ ಅತ್ಯಾಕರ್ಷಕ ಮೆರವಣಿಗೆಯಲ್ಲಿ ಕರೆತರಲಾಯಿತು.


ಮೆರವಣಿಗೆಯಲ್ಲಿ ಯದುವೀರ್, ವಿಶಾಲ್, ಶುಭ್ರ ಅಯ್ಯಪ್ಪ.

ಆಟಗಾರರನ್ನು ಪರಿಚಯಿಸಿಕೊಂಡು ಚೆಂಡನ್ನು ಒದೆಯುವ ಮೂಲಕ ರಾಜವಂಶಸ್ಥ ಯದುವೀರ್ ಫೈನಲ್ ಪಂದ್ಯಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭ ರಾಜವಂಶಸ್ಥ ಯದುವೀರ್ ಮತ್ತು ಡಿ.ವಿನೋದ್ ಶಿವಪ್ಪ ಅವರನ್ನು ಬ್ಲೂಬಾಯ್ಸ್ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭ ವಿನೋದ್ ಶಿವಪ್ಪ, ಯದುವೀರ್ ಒಡೆಯರ್, ಚಲನಚಿತ್ರ ತಾರೆ ಶುಭ್ರ ಅಯ್ಯಪ್ಪ, ವಿಶಾಲ್ ಶಿವಪ್ಪ, ಹೆಚ್.ಎಸ್. ಚಂದ್ರಮೌಳಿ, ಜಿಪಂ ಮಾಜಿ ಸದಸ್ಯೆ ಕೆ.ಪಿ.ಚಂದ್ರಕಲಾ ಮತ್ತಿತರ ಪ್ರಮುಖರು ಹಾಜರಿದ್ದರು.



ರನ್ನರ್ಸ್ ಅಪ್ ಪ್ರಶಸ್ತಿಯೊಂದಿಗೆ ಸಿಟಿ ಸುಂಟಿಕೊಪ್ಪ ತಂಡ.

ಗೌಡಕಪ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ

ಟೀಂ ಎಲೈಟ್ ಚಾಂಪಿಯನ್, ಕಾಫಿ ಕ್ರಿಕೆಟರ್ಸ್ ರನ್ನರ್ ಅಪ್




ಮಡಿಕೇರಿ, ಮೇ 28– ನಗರದ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಗೌಡ ಯುವ ವೇದಿಕೆ ವತಿಯಿಂದ ಏರ್ಪಡಿಸಲಾಗಿದ್ದ ಗೌಡ ಕಪ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ರೋಚಕ ತೆರೆ ಬಿದ್ದಿದೆ. ಟೀಂ ಎಲೈಟ್ ತಂಡ ಕಾಫಿ ಕ್ರಿಕೆಟರ್ಸ್ ತಂಡವನ್ನು ಮಣಿಸುವ ಮೂಲಕ ಚಾಂಪಿಯನ್ ತಂಡವಾಗಿ ಹೊರ ಹೊಮ್ಮಿದೆ.

ಫೈನಲ್ಸ್ ಪಂದ್ಯದಲ್ಲಿ ಟಾಸ್ ಗೆದ್ದ ಕಾಫಿ ಕ್ರಿಕೆಟರ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ಮಾಡಿದ ಎಲೈಟ್ ತಂಡ ನಿಗದಿತ 10 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 94 ರನ್ ಗಳಿಸಿತು. ತಂಡದ ಪರವಾಗಿ ತಳೂರು ವಿಕ್ಕಿ ಮೂರು ಸಿಕ್ಸರ್ ಮತ್ತು 2 ಬೌಂಡರಿ ಬಾರಿಸುವ ಮೂಲಕ ಅತ್ಯಧಿಕ ರನ್ ಗಳಿಸಿದರು. ಕಾಫಿ ಕ್ರಿಕೆಟರ್ಸ್ ತಂಡದ ಮಿಥುನ್ ಕುದುಕುಳಿ ಮತ್ತು ಅನಿಲ್ ಕುಡೆಕಲ್ಲು ತಲಾ 2 ವಿಕೆಟ್ ಪಡೆದರೆ, ಪೊನ್ನಚನ ಮೌರ್ಯ 1 ವಿಕೆಟ್ ಗಳಿಸಿದರು.

ನಂತರ ಬ್ಯಾಟಿಂಗ್ ಆರಂಭಿಸಿದ ಕಾಫಿ ಕ್ರಿಕೆಟರ್ಸ್ ತಂಡ ನಿಗದಿತ 10 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ ಕೇವಲ 68 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಸ್ಟಾರ್ ಐಕನ್ ಆಟಗಾರ ಅನಿಲ್ ಕುಡೆಕಲ್ಲು ವಿಕೆಟ್ ಕಳೆದುಕೊಂಡ ನಂತರ ತಂಡ ಸಂಕಷ್ಟಕ್ಕೆ ಸಿಲುಕಿಕೊಂಡಿತು. ಆದರೂ ತಂಡದ ಪರ ರೋಹನ್ 17 ರನ್ ಗಳಿಸಿ ಏಕಾಂಗಿ ಹೋರಾಟ ನಡೆಸಿದರು. ಎಲೈಟ್ ತಂಡದ ಪರ ಲೋಕೇಶ್ ಮತ್ತು ವಿಕ್ಕಿ ತಳೂರು 2 ವಿಕೆಟ್ ಪಡೆದರೆ, ಅವಿನ್ ಮತ್ತು ಗಣಿತ್ ತಲಾ ಒಂದು ವಿಕೆಟ್ ಪಡೆದುಕೊಂಡರು.

ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ

ಮಡಿಕೇರಿ, ಮೇ 28– ನಗರದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.





ಎಂ.ಬಾಡಗ ಗ್ರಾಮದ ಎಂ.ಬಿ. ಹತೀಕ್(34) ಮತ್ತು ಬಿ.ಎಂ. ರಶೀದ್ ಎಂಬವರೇ ಬಂಧಿತ ಆರೋಪಿಗಳಾಗಿದ್ದು, ಅವರುಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ನಗರದ ಸ್ಟುವರ್ಟ್ ಹಿಲ್ ಬಳಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಸಂದರ್ಭ ಆರೋಪಿಗಳು ಸೆರೆ ಸಿಕ್ಕಿದ್ದಾರೆ. ಆರೋಪಿಗಳ ಬಳಿಯಿದ್ದ 683 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ಮಡಿಕೇರಿ ಡಿವೈಎಸ್‌ಪಿ ಎಂ.ಜಗದೀಶ್, ವೃತ್ತ ನಿರೀಕ್ಷಕ ಉಮೇಶ್ ಉಪ್ಪಳಿಕೆ, ಉಪ ನಿರೀಕ್ಷಕ ಶ್ರೀನಿವಾಸ್ ಸೇರಿದಂತೆ ಡಿಸಿಆರ್‌ಬಿ ಸಿಬ್ಬಂದಿಗಳ ಒಂದು ತಂಡವನ್ನು ಮಾದಕ ವಸ್ತು ತಡೆಗಟ್ಟುವ ನಿಟ್ಟಿನಲ್ಲಿ ರಚಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾಹಿತಿ ನೀಡಿದ್ದಾರೆ. ಮಾದಕ ವಸ್ತು ಸೇವನೆ ಮತ್ತು ಮಾರಾಟ ಪ್ರಕರಣಗಳು ಕಂಡು ಬಂದಲ್ಲಿ ಸಾರ್ವಜನಿಕರು ಪೊಲೀಸ್ ಠಾಣೆ ಅಥವಾ ಕೆ.ಪಿ.ಎಸ್. ತಂತ್ರಾಂಶದ ಮೂಲಕ ಮಾಹಿತಿ ನೀಡಲು ಪೊಲೀಸ್ ಇಲಾಖೆ ಮನವಿ ಮಾಡಿದೆ.

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ಕಿರುಕುಳ ಆರೋಪ

ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ

ಸಿದ್ದಾಪುರ, ಮೇ 28– ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ಸಂಸದ ಮತ್ತು ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್‌ರನ್ನು ಬಂಧಿಸಬೇಕೆಂದು ಒತ್ತಾಯಿಸಿ ಸಿದ್ದಾಪುರದಲ್ಲಿ ಸಿಐಟಿಯು ನೇತೃತ್ವದಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಕೇಂದ್ರ ಸರಕಾರದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್. ಭರತ್ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರದಲ್ಲಿ ಹೆಣ್ಣು ಮಕ್ಕಳಿಗೆ ಸುರಕ್ಷತೆ ಇಲ್ಲದಂತಾಗಿದೆ. ನಿರಂತರ ದೌರ್ಜನ್ಯ ಪ್ರಕರಣಗಳು ನಡೆಯುತ್ತಿದ್ದರೂ ಗಂಭೀರವಾಗಿ ಪರಿಗಣಿಸದ ಕೇಂದ್ರ ಸರ್ಕಾರ ಆರೋಪ ಎದುರಿಸುತ್ತಿರುವ ತಮ್ಮ ಸಂಸದರ ರಕ್ಷಣೆ ಮಾಡಲು ಮುಂದಾಗಿರುವುದು ನಾಚಿಕೆಗೇಡಿನ ವಿಷಯವಾಗಿದೆ.

ಕಳೆದ 35 ದಿನಗಳಿಂದ ನ್ಯಾಯಕ್ಕಾಗಿ ಆಗ್ರಹಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಮಹಿಳಾ ಕುಸ್ತಿಪಟುಗಳ ಪ್ರತಿಭಟನೆಯನ್ನು ಹತ್ತಿಕ್ಕಲು ಮುಂದಾಗಿರುವ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ಸಂಸದ ಮತ್ತು ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್‌ರನ್ನು ಬಂಧಿಸಬೇಕೆಂದು ಒತ್ತಾಯಿಸಿದರು

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ ಸಾಬು, ಉಪಾಧ್ಯಕ್ಷ ರಮೇಶ್ ಖಜಾಂಚಿ ಕುಟ್ಟಪ್ಪ, ಉಪ ಕಾರ್ಯದರ್ಶಿ ರಾಚಪ್ಪಾಜಿ, ಸಾಜಿ ರಮೇಶ್ ಸೇರಿದಂತೆ ಮತ್ತಿತರರು ಇದ್ದರು

ಸೀತಾರಾಮ ಮಂದಿರದಲ್ಲಿ ವಿಜೃಂಭಣೆಯ ಶ್ರೀರಾಮ ಪಟ್ಟಾಭಿಷೇಕ

ಚಾಮರಾಜನಗರ, ಮೇ 28– ನಗರದ ಚಿಕ್ಕ ಅಂಗಡಿ ಬೀದಿಯ ಶ್ರೀ ಸೀತಾರಾಮ ಮಂದಿರದಲ್ಲಿ ಶ್ರೀ ರಾಮ ಪಟ್ಟಾಭಿಷೇಕ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಮಹೋತ್ಸವದ ಅಂಗವಾಗಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ, ಅಭಿಷೇಕ, ಅನ್ನಸಂತರ್ಪಣೆ ನಡೆಸಲಾಯಿತು.

ಸಂಜೆ ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾದ ಹೂವಿನ ಪಲ್ಲಕ್ಕಿಯಲ್ಲಿ ಶ್ರೀ ಸೀತಾ ರಾಮರ ಭಾವಚಿತ್ರವನ್ನಿಟ್ಟು ಮೆರವಣಿಗೆ ಮಾಡಲಾಯಿತು. ಸೀತಾರಾಮಮಂದಿರದ ಮುಂಭಾಗದಿಂದ ಹೊರಟ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ತೆರಳಿ ನಂತರ ಸ್ವಸ್ಥಾನಕ್ಕೆ ಬಂದು ಸೇರಿತು.

ಮೆರವಣಿಗೆಯಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದ್ದ ಯುವಕರು, ಯುವತಿಯರು, ಮಹಿಳೆಯರು ನೃತ್ಯ ಮಾಡುವ ಮೂಲಕ ಗಮನ ಸೆಳೆದರು. ಮೆರವಣಿಗೆ ತೆರಳಿದ ಮಾರ್ಗದಲ್ಲಿ ಮಹಿಳೆಯರು ಚಿತ್ತಾಕರ್ಷಕ ರಂಗೋಲಿ ಬಿಟ್ಟು ಸ್ವಾಗತ ಕೋರಿದರು. ಅಲ್ಲಲ್ಲಿ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸಲಾಯಿತು.




ಪಟ್ಟಾಭಿಷೇಕದ ವಾರನೇ ದಿನ ಭಾನುವಾರ ಹನುಮಂತೋತ್ಸವ ಅಂಗವಾಗಿ ನಡೆದ ಹನುಮಮೂರ್ತಿಯ ಉತ್ಸವದಲ್ಲಿ ಭಾಗವಹಿಸಿದ್ದ ಭಕ್ತಾದಿಗಳು ಪರಸ್ಪರ ಮೈ ಮೇಲೆ ನೀರು ಮತ್ತು ಬಣ್ಣಹಾಕಿ ಸಂಭ್ರಮಿಸುವ ಮೂಲಕ ವಿಶಿಷ್ಟವಾಗಿ ಆಚರಿಸಿದರು. ಮೆರವಣಿಗೆ ಮಾರ್ಗದಲ್ಲಿ ಮನೆಗಳ ಮುಂಭಾಗ ನೀರು ತುಂಬಿದ ಬಿಂದಿಗೆಗಳನ್ನಿಡಲಾಗಿತ್ತು. ಹನುಮೋತ್ಸವದಲ್ಲಿ ಓಕುಳಿ ಎರಚುವ ಮೂಲಕ ಮೂರು ದಿನಗಳ ಕಾಲ ನಡೆದ ವಿವಿಧ ಕಾರ್ಯಕ್ರಮಗಳಿಗೆ ತೆರೆಬಿತ್ತು.

ದಾಸಬಣಜಿಗರ ಸಂಘದ ಅಧ್ಯಕ್ಷ ಸಿ.ಎನ್.ಶ್ರೀನಿವಾಸ ಶೆಟ್ಟಿ ಸೇರಿದಂತೆ ಸಂಘದ ಪದಾಧಿಕಾರಿಗಳು, ಯುವಕರ ಸಂಘ ಮತ್ತು ಮಹಿಳಾ ಸದಸ್ಯರು, ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಉಪಸಭಾಪತಿ ಸ್ಥಾನ ತಿರಸ್ಕರಿಸಿದ ಪುಟ್ಟರಂಗಶೆಟ್ಟಿ

ಪುಟ್ಟರಂಗಶೆಟ್ಟಿ ಅವರ ಮುಂದಿರುವ ಆಯ್ಕೆ

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸತತ ನಾಲ್ಕನೇ ಬಾರಿ ಗೆಲುವಿನ ಮೂಲಕ ರಾಜಕೀಯ ಕ್ಷೇತ್ರದಲ್ಲಿ ದಾಖಲಿಸಿರುವ ಪುಟ್ಟರಂಗಶೆಟ್ಟಿ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಡೆಪ್ಯೂಟಿ ಸ್ಪೀಕರ್ ಹುದ್ದೆ ನೀಡಿದೆ. ಆದರೆ, ಹುದ್ದೆಯಲ್ಲಿ ಮುಂದುವರಿಯಬೇಕೋ ಅಥವಾ ಬೇಡವೋ ಎಂಬ ಗೊಂದಲದಲ್ಲಿದ್ದಾರೆ. ಸದ್ಯ ಪುಟ್ಟರಂಗಶೆಟ್ಟಿ ಅವರು ಡೆಪ್ಯೂಟಿ ಸ್ಪೀಕರ್ ಹುದ್ದೆಯಲ್ಲಿ ಮುಂದುವರಿಯಬೇಕು. ಇಲ್ಲವೇ ಹುದ್ದೆಯನ್ನು ನಿರಾಕರಿಸಿ, ಕ್ಷೇತ್ರದಲ್ಲಿ ಶಾಸಕರಾಗಿ ಕೆಲಸ ಮಾಡಿಕೊಂಡು ಹೋಗಬೇಕು. ಮುಂದೆ ಸರ್ಕಾರದ ಸಚಿವ ಸಂಪುಟ ಪುನರ್‌ರಚನೆ ಮಾಡಿದರೆ, ಆ ವೇಳೆ ತಮ್ಮ ಪ್ರಭಾವ ಬಳಸಿಕೊಂಡು ಸಚಿವರಾಗಿ ಆಯ್ಕೆಯಾಗುವುದು ಪುಟ್ಟರಂಗಶೆಟ್ಟಿ ಅವರ ಮುಂದಿರುವ ಆಯ್ಕೆಗಳು.



ವರ್ಷದ ನಂತರ ಸಚಿವ ಸ್ಥಾನದ ಭರವಸೆ!

ಉಪ್ಪಾರ ಸಮಾಜದ ಏಕೈಕ ಶಾಸಕರಾಗಿರುವ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಉಪ್ಪಾರ ಸಮುದಾಯದ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಮುದಾಯದ ಮುಖಂಡರ ನಿಯೋಗ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಒತ್ತಾಯಿಸಿದ್ದಾರೆ ಎನ್ನಲಾಗಿದೆ. ಈ ವೇಳೆ ಸಿದ್ದರಾಮಯ್ಯ ಮಾತನಾಡಿ, ಕೊನೆಯ ಕ್ಷಣದಲ್ಲಿ ಕೆಲವೊಂದು ಒತ್ತಡದಿಂದ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ಕೈ ತಪ್ಪಿದೆ. ನಾನು ಅವರೊಂದಿಗೆ ಮಾತನಾಡಿದ್ದೇನೆ. ಸದ್ಯ ಸಚಿವ ಸಂಪುಟ ಪೂರ್ಣವಾಗಿದೆ. ಇನ್ನೊಂದು ವರ್ಷ ನಂತರ ಸಚಿವ ಸ್ಥಾನ ನೀಡುತ್ತೇನೆ ಎಂದು ಭರವಸೆ ನೀಡಿದ್ದಾರೆ ಎಂದು ಶಾಸಕರ ಆಪ್ತ ಮೂಲದಿಂದ ತಿಳಿದು ಬಂದಿದೆ.

ಚಾಮರಾಜನಗರ, ಮೇ 28– ರಾಜ್ಯ ವಿಧಾನ ಸಭೆಯ ಉಪ ಸಭಾಪತಿ ಸ್ಥಾನವನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿರಸ್ಕರಿಸಿದ್ದಾರೆ.

ಈ ಕುರಿತು ಯಳಂದೂರು ತಾಲೂಕಿನ ಉಪ್ಪಿನ ಮೋಳೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ಭಾನುವಾರ ಬೆಳಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಉಪಸಭಾಪತಿ ಸ್ಥಾನ ಬೇಡ, ನಾನು ಶಾಸಕನಾಗಿಯೇ ಮುಂದುವರಿಯುತ್ತೇನೆ. ಕ್ಷೇತ್ರದ ಜನರೊಂದಿಗೆ ಬೆರೆತು ಕೆಲಸ ಮಾಡಲು ಇಚ್ಛಿಸುತ್ತೇನೆ ಎಂದು ತಿಳಿಸಿದರು.

ರಾಜ್ಯದಲ್ಲಿ ನಾನು ಉಪ್ಪಾರ ಸಮಾಜದ ಏಕೈಕ ಶಾಸಕ. ನನಗೆ ಸಚಿವ ಸ್ಥಾನ ದೊರೆಯುತ್ತದೆ ಎಂಬ ಪೂರ್ಣ ವಿಶ್ವಾಸವಿತ್ತು ಕಾಂಗ್ರೆಸ್‌ನ ವರಿಷ್ಠರು, ಹೈಕಮಾಂಡ್ ಕೂಡ ಸಚಿವ ಸ್ಥಾನ ನೀಡುವ ಭರವಸೆ ನೀಡಿದ್ದರು. ಆದರೆ, ಕೊನೆಯ ಕ್ಷಣದಲ್ಲಿ ಸಚಿವ ಸ್ಥಾನ ಕೈ ತಪ್ಪಿದೆ. ಇದಕ್ಕೆ ನಿಖರವಾದ ಕಾರಣ ನನಗೆ ತಿಳಿದಿಲ್ಲ. ಉಪಸಭಾಪತಿ ಸ್ಥಾನ ಒಪ್ಪಿಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಜಮೀರ್ ಅಹಮದ್ ಒತ್ತಾಯಿಸಿದ್ದರು. ಆದರೆ, ನನಗೆ ಈ ಸ್ಥಾನ ಬೇಡ ಎಂದರು.

ಉಪಸಭಾಪತಿ ಸ್ಥಾನದಲ್ಲಿದ್ದರೆ ನಾನು ಕ್ಷೇತ್ರದ ಜನರೊಂದಿಗೆ ಹೆಚ್ಚು ಸಂಪರ್ಕದಲ್ಲಿ ಇರಲು ಸಾಧ್ಯವಾಗುವುದಿಲ್ಲ. ಜೊತೆಗೆ ಈ ಹುದ್ದೆಯ ಕಾರ್ಯಭಾರದ ಒತ್ತಡದಿಂದ ಕ್ಷೇತ್ರದ ಕೆಲಸ ಮಾಡಲು ಕಷ್ಟವಾಗುತ್ತದೆ. ಹೀಗಾಗಿ, ನನ್ನ ಬೆಂಬಲಿಗರು ಹಾಗೂ ಕ್ಷೇತ್ರದ ಮತದಾರರು ಈ ಸ್ಥಾನ ಬೇಡ ಎಂದು ಒತ್ತಾಯಿಸಿದ್ದಾರೆ ಎಂದು ತಿಳಿಸಿದರು.

ಕಾರಣವೇನು?: ರಾಜ್ಯ ವಿಧಾನಸಭೆಯ ಉಪಸಭಾಪತಿ ಸರ್ಕಾರದ ಕೆಲವೊಂದು ಸಮಿತಿಗಳಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಬೇಕಾಗುತ್ತದೆ. ಈ ಸಮಿತಿಯು ವಾರದಲ್ಲಿ ಒಂದೆರಡು ಸಭೆಗಳು ಉಪಸಭಾಪತಿಯ ನೇತೃತ್ವದಲ್ಲಿ ನಡೆಯುವುದರಿಂದ ಅವರು ಕನಿಷ್ಠ ವಾರದಲ್ಲಿ ಮೂರು ದಿನವಾದರೂ ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಬೇಕು. ಇದರಿಂದ ಕ್ಷೇತ್ರದ ಸಂಪರ್ಕ ಕಡಿಮೆಯಾಗುತ್ತದೆ ಎಂದು ಪುಟ್ಟರಂಗಶೆಟ್ಟಿ ಹುದ್ದೆಯಿಂದ ಹಿಂಜರಿಯುತ್ತಿದ್ದಾರೆ ಎನ್ನಲಾಗಿದೆ.

ಮಧ್ಯರಾತ್ರಿ ನಡೆಯಿತು ಹೈಡ್ರಾಮ: ರಾಜ್ಯ ಸಚಿವ ಸಂಪುಟ ರಚನೆ ಮಾಡುವ ಹಿಂದಿನ ದಿನದ ರಾತ್ರಿ ಶಾಸಕ ಪುಟ್ಟರಂಗಶೆಟ್ಟಿ ಅವರು ದೆಹಲಿಗೆ ತೆರಳಿ ತಮ್ಮದೇ ಪ್ರಭಾವ ಬಳಸಿ, ಸಚಿವ ಸ್ಥಾನ ಖಾತ್ರಿಪಡಿಸಿಕೊಂಡು ಬೆಂಗಳೂರಿಗೆ ವಾಪಸ್ ಆಗಿದ್ದರು. ಆದರೆ, ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಸಚಿವರ ಪಟ್ಟಿಯಲ್ಲಿ ತಮ್ಮ ಹೆಸರು ಇಲ್ಲದಿರುವುದು ತಿಳಿದು, ಕೂಡಲೇ ಸಿಎಂ ಸಿದ್ದರಾಮಯ್ಯ ಅವರ ಮನೆಗೆ ತೆರಳಿ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಈ ವೇಳೆ ಸಿದ್ದರಾಮಯ್ಯ ಕೊನೆಯ ಕ್ಷಣದಲ್ಲಿ ನಿಮ್ಮ ಹೆಸರು ತೆಗೆಯಲಾಗಿದೆ. ಮುಂದೆ ಅವಕಾಶ ನೀಡುತ್ತೇನೆ ಎಂದು ಮನವೊಲಿಸಿದ್ದಾರೆ ಎಂದು ತಿಳಿದು ಬಂದಿದೆ.

ರೋಗಿಗಳ ಪಾಲಿನ ಸಂಜೀವಿನಿ ದಾದಿಯರು



ಚಾಮರಾಜನಗರ, ಮೇ 28– ನರ್ಸಿಂಗ್ ವ್ಯವಸ್ಥೆಯ ಸಂಸ್ಥಾಪನೆಯ ರೂವಾರಿ ಫ್ಲಾರೆನ್ಸ್ ನೈಟಿಂಗೇಲ್ ಅವರು ಮನುಕುಲದ ಸೇವೆಗೆ ಎಲ್ಲವನ್ನು ತ್ಯಾಗ ಮಾಡಿದ ಮಾನವತಾವಾದಿಯಾಗಿದ್ದು, ಶುಶ್ರೂಷಕ ಕ್ಷೇತ್ರದಲ್ಲಿ ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ರೋಗಿಗಳ ಪಾಲಿನ ಸಂಜೀವಿನಿ ದಾದಿಯರು ಎಂದು ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಪ್ರಾಂಶುಪಾಲ ವಿನಯ್‌ಕುಮಾರ್ ಹೇಳಿದರು.

ನಗರದ ಸತ್ತಿ ರಸ್ತೆಯಲ್ಲಿರುವ ಮಾಯಾ ಗಾರ್ಡನ್ ರೆಸ್ಟೋರೆಂಟ್ ಸಭಾಂಗಣದಲ್ಲಿ ರೋಟರಿ ಸಂಸ್ಥೆಯಿಂದ ನಡೆದ ವಿಶ್ವ ದಾದಿಯರ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. 1853ರಲ್ಲಿ ರಷ್ಯಾ ಹಾಗೂ ಬ್ರಿಟನ್ ನಡುವೆ ನಡೆದಿದ್ದ ಯುದ್ಧದಲ್ಲಿ ಗಾಯಗೊಂಡಿದ್ದ ಸೈನಿಕರಿಗೆ ಕೈಯಲ್ಲಿ ದೀಪ ಹಿಡಿದುಕೊಂಡು ಇಡೀ ರಾತ್ರಿ ಉಪಚರಿಸುತ್ತಿದ್ದರಿಂದ ಫ್ಲಾರೆನ್ಸ್ ನೈಟಿಂಗೇಲ್ ಅವರನ್ನು ದೀಪಧಾರಿಣಿ ದೇವತೆ ಎಂದು ಸೈನಿಕರು ಕರೆದಿದ್ದರು ಎಂದರು.

ಫ್ಲಾರೆನ್ಸ್ ನೈಟಿಂಗೇಲ್ ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರೂ ಮನುಕುಲದ ಸೇವೆಗೆ ಎಲ್ಲವನ್ನು ತ್ಯಾಗ ಮಾಡಿದ ಮಾನವತಾವಾದಿಯಾಗಿದ್ದರು. ಅವರನ್ನೇ ದಾದಿಯರು ಈಗಲೂ ಆದರ್ಶವಾಗಿಟ್ಟುಕೊಂಡು ಸೇವೆ ಮಾಡುತ್ತಿದ್ದಾರೆ ಎಂದು ತಿಳಿಸಿದರು. ನಂತರ ರೋಟರಿ ಸಂಸ್ಥೆ ಅಧ್ಯಕ್ಷ ಕೆ.ಎಂ. ಮಹದೇವಸ್ವಾಮಿ ಮಾತನಾಡಿ, ವೈದ್ಯರು, ದಾದಿಯರು ಮಾಡುವ ಸೇವೆಗೆ ವಿಶೇಷವಾದ ಪ್ರಾಮುಖ್ಯತೆ ಇದೆ. ಜನರ ಜೀವ ರಕ್ಷಣೆ ಮಾಡುವ ಕೆಲಸವನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡುವ ಮೂಲಕ ವೈದ್ಯರು, ದಾದಿಯರು ಜನರ ಪಾಲಿಗೆ ದೇವರಾಗಿದ್ದಾರೆ ಎಂದರು.

ಇದೇ ವೇಳೆ ಜಿಲ್ಲಾಸ್ಪತ್ರೆಯಲ್ಲಿ ಸ್ಟಾಫ್‌ನರ್ಸ್ ಕೆಲಸ ನಿರ್ವಹಿಸುತ್ತಿರುವ ಸರಸ್ವತಿ, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಪ್ರಾಂಶುಪಾಲ ವಿನಯ್‌ಕುಮಾರ್, ಮಹೇಂದ್ರ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರೋಟರಿ ಕಾರ್ಯದರ್ಶಿ ಕಾಗಲವಾಡಿ ಚಂದ್ರು, ಉಪಾಧ್ಯಕ್ಷ ಎಲ್.ನಾಗರಾಜು, ಚಂದ್ರಪ್ರಭಜೈನ್, ಕಾರ್ಯದರ್ಶಿ ದೀನಾ, ಸಿದ್ದಮಲ್ಲಪ್ಪ, ಕೆಂಪನಪುರ ಸಿದ್ದರಾಜು, ಅಂಕಶೆಟ್ಟಿ, ಪ್ರಭಾಕರ್, ಗುರುಸ್ವಾಮಿ, ಡಾ.ಗೋವಿಂದಶೆಟ್ಟಿ, ಕಮಲ್‌ರಾಜ್, ರಮೇಶ್, ಸಂಜಯ್ ಕುಮಾರ್ ಜೈನ್, ಅಶ್ವಥ್‌ನಾರಾಯಣ್, ಯೋಗರಾಜು, ಹರೀಶ್, ಪ್ರಕಾಶ್, ಸುಭಾಷ್ ಹಾಜರಿದ್ದರು.

ಗಡಿಜಿಲ್ಲೆಗೆ ಸಚಿವ ಸ್ಥಾನ ನೀಡಲು ಕಾಂಗ್ರೆಸ್ ಕಡೆಗಣನೆ

ಅಂಬೇಡ್ಕರ್ ಸೇನೆ ಆರೋಪ

ಚಾಮರಾಜನಗರ, ಮೇ 28– ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಗಡಿಜಿಲ್ಲೆಗೆ ಸಚಿವ ಸ್ಥಾನ ನೀಡಲು ಕಡೆಗಣಿಸಿದೆ ಎಂದು ಅಂಬೇಡ್ಕರ್ ಸೇನೆಯ ಜಿಲ್ಲಾಧ್ಯಕ್ಷ ಗಣೇಶ್‌ಪ್ರಸಾದ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯದಲ್ಲಿ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ನಡೆದು ಕಾಂಗ್ರೆಸ್ ಸ್ಪಷ್ಟಬಹುಮತದೊಂದಿಗೆ ಸರ್ಕಾರ ರಚನೆ ಮಾಡಿದೆ. ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳಾದ ಸಿ.ಪುಟ್ಟರಂಗಶೆಟ್ಟರು, ಎ.ಆರ್. ಕೃಷ್ಣಮೂರ್ತಿ, ಗಣೇಶ್ ಪ್ರಸಾದ್ ಹೆಚ್ಚಿನ ಮತಗಳ ಅಂತರದಲ್ಲಿ ಜಯಭೇರಿ ಬಾರಿಸಿದ್ದಾರೆ. ಇದನ್ನು ಕಾಂಗ್ರೆಸ್ ವರಿಷ್ಠರು ಪರಿಗಣಿಸಿ ಗಡಿಜಿಲ್ಲೆಗೆ ಒಂದು ಸಚಿವಸ್ಥಾನ ನೀಡಬೇಕಿತ್ತು. ಜಿಲ್ಲಾವಾರು ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಕೊಡಬಹುದಿತ್ತು ಅದನ್ನು ಬಿಟ್ಟು ಕೆಲವರಿಗೆ ಎರಡು ಎರಡು ಸಚಿವ ಸ್ಥಾನ ನೀಡುವ ಮೂಲಕ ಚಾಮರಾಜನಗರ ಜಿಲ್ಲೆಯನ್ನು ಕಾಂಗ್ರೆಸ್ ಕಡೆಗಣಿಸಿದೆ ಎಂದು ದೂರಿದರು.

ಹೊರಗಡೆಯವರಿಗೆ ಉಸ್ತುವಾರಿ ಖಂಡನೀಯ : ಜಿಲ್ಲೆಯಲ್ಲಿ ಅನುಭವ, ಹಿರಿಯ, ಹೆಚ್ಚಿನ ಮತಗಳ ಅಂತರದಲ್ಲಿ ಜಯಭೇರಿ ಬಾರಿಸಿರುವ ಕಾಂಗ್ರೆಸ್‌ನ ಮೂವರು ಶಾಸಕರಿದ್ದು, ಜಿಲ್ಲೆಗೆ ಹೊರಗಡೆಯವರನ್ನು ಜಿಲ್ಲಾ ಉಸ್ತುವಾರಿ ಕಾಂಗ್ರೆಸ್ ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾಡುವುದು ಅತ್ಯಂತ ಖಂಡನೀಯವಾಗಿದೆ ಎಂದರು.

ಸಂಸತ್ ಭವನ ಜ್ಞಾನ, ಕರ್ಮ, ಶಕ್ತಿ, ಭಕ್ತಿ, ಮಾನವೀಯತೆಯ ಸಂಕೇತ: ಸುರೇಶ ಋಗ್ವೇದಿ



ಚಾಮರಾಜನಗರ, ಮೇ 28– ಸ್ವತಂತ್ರ ಭಾರತದ ನಂತರ ಸಂಸತ್ ಭವನ ನಿರ್ಮಾಣವಾಗಿರುವುದು ವಿಶ್ವಕ್ಕೆ ಭಾರತೀಯರು ನೀಡುವ ಮಹಾನ್ ಪ್ರಜಾಪ್ರಭುತ್ವದ ಶಕ್ತಿ ಕೇಂದ್ರವಾಗಿದೆ. ಇದು ಭಾರತೀಯರ ಭವಿಷ್ಯದ ದಿವ್ಯ ಶಕ್ತಿಯಾಗಿ ಮಹಾನ್ ಚೇತನವಾಗಿ ವಿಶ್ವಕ್ಕೆ ಜಗದ್ಗುರುವಾಗುವ ಜ್ಞಾನ, ಕರ್ಮ, ಭಕ್ತಿ, ಶಕ್ತಿ ದಿವ್ಯತೆಯ ಮಾನವೀಯತೆಯ ಸಂಕೇತವಾಗಿ ಹೊರಹೊಮ್ಮಲಿದೆ ಎಂದು ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತ ಜೈ ಹಿಂದ್ ಪ್ರತಿಷ್ಠಾನದ ಅಧ್ಯಕ್ಷರಾದ ಸುರೇಶ ಋಗ್ವೇದಿ ತಿಳಿಸಿದರು.

ಋಗ್ವೇದಿ ಯೂತ್ ಕ್ಲಬ್, ಜೈ ಹಿಂದ್ ಪ್ರತಿಷ್ಠಾನ, ಶಂಕರಪುರ ಬಡಾವಣೆಯಲ್ಲಿ ನಮ್ಮ ಸಂಸತ್ತು ನಮ್ಮ ಹೆಮ್ಮೆ ನೆನಪಿಗಾಗಿ ಗಿಡ ನೆಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಭಾರತ ಸ್ವತಂತ್ರ ನಂತರ ದೂರದೃಷ್ಟಿ ಹಿನ್ನೆಲೆಯ ಸಂಸತ್ ಭವನ ನಿರ್ಮಾಣವಾಗಿದೆ. ಸಂಸತ್ ಭವನ ನಿರ್ಮಾಣಕ್ಕೆ ಸಹಕರಿಸಿದ ಸರ್ವರಿಗೂ ದೇಶದ ಜನತೆ ಸದಾ ಕಾಲ ಅಭಿನಂದನೆಗಳನ್ನು ಸಲ್ಲಿಸಲೇಬೇಕು. ಭಾರತದ ಸಂಸತ್ತು ಭಾರತೀಯರ ಆತ್ಮಶಕ್ತಿಯಾಗಿದೆ ಎಂದರು.

ಸ್ವಾತಂತ್ರ್ಯ, ಸಮಾನತೆ, ಸಹೋದರತೆಯ ದಿವ್ಯ ಮಂತ್ರದ ಶ್ರದ್ಧಾ ಕೇಂದ್ರವಾಗಿದೆ ಎಂದು ತಿಳಿಸಿದ ಋಗ್ವೇದಿ, ವಿಶೇಷ ಕಾರ್ಯಕ್ರಮಗಳ ಮೂಲಕ ಭಾರತದ ಸಂಸತ್ ಭವನ ಇಂದು ಉದ್ಘಾಟನೆ ಆಗಿರುವುದು ಭಾರತೀಯರು ಗೌರವ ಪಡುವಂತಾಗಿದೆ. ತಮ್ಮ ದಿವ್ಯ ಬುದ್ಧಿಶಕ್ತಿ, ಜ್ಞಾನಶಕ್ತಿ, ಕರ್ಮಶಕ್ತಿ, ಆಧ್ಯಾತ್ಮಿಕ ಭಕ್ತಿ, ಮಾನವೀಯ ಗುಣಗಳ ಮೂಲಕ ಪ್ರೀತಿ, ವಿಶ್ವಾಸ, ಕರುಣೆ ಅಂತಹ ಕರಣಗಳ ಗುಣಗಳನ್ನು ಬೆಳೆಸಿಕೊಂಡಿರುವ ಭಾರತೀಯರು ಇಡೀ ವಿಶ್ವದಲ್ಲಿ ಶ್ರೇಷ್ಠ ಗುಣ ಹೊಂದಿರುವವರಾಗಿದ್ದಾರೆ. ಭಾರತ ತಮ್ಮ ಎಲ್ಲಾ ಶಕ್ತಿಯ ಮೂಲಕ ಇಡೀ ವಿಶ್ವಕ್ಕೆ ಮಾದರಿಯಾಗಬೇಕು. ಆ ದಿಕ್ಕಿನಲ್ಲಿ ಸಂಸತ್ ಭವನವು ಮಹತ್ವದ ಕಾರ್ಯವನ್ನು ಸದಾ ಕಾಲ ನಿರ್ವಹಿಸುತ್ತದೆ ಎಂದು ತಿಳಿಸಿದರು.

ಶಂಕರಪುರ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ರವಿ ಮಾತನಾಡಿ, ಭಾರತದ ಪ್ರಧಾನಿಗಳಾದ ನರೇಂದ್ರ ಮೋದಿಯವರು ವಿಶ್ವಕ್ಕೆ ಮಹಾನ್ ಕಟ್ಟಡವನ್ನು ಸಂಸತ್ ಭವನದ ನಿರ್ಮಾಣದ ಮೂಲಕ ನೀಡಿದ್ದಾರೆ. ಸಂಸತ್ ಭವನ ನಿರ್ಮಾಣ ಮಾಡಿದ ಕೇಂದ್ರ ಸರ್ಕಾರದ ಮತ್ತು ಎಲ್ಲಾ ಭಾರತೀಯರಿಗೆ ನಮನಗಳನ್ನು ಸಲ್ಲಿಸಬೇಕು ಎಂದರು. ಋಗ್ವೇದೀ ಯೂತ್ ಕ್ಲಬ್ ನ ಶ್ರಾವ್ಯ ಋಗ್ವೇದಿ, ಕುಸುಮ, ಜಾಲಹಳ್ಳಿ ಹುಂಡಿ ಮಹಾದೇವ ಇದ್ದರು.

ಶಾಸಕ ಗಣೇಶ್‌ಪ್ರಸಾದ್ ಅವರ ಕಚೇರಿ ಆರಂಭ



ಗುಂಡ್ಲುಪೇಟೆ, ಮೇ 28– ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶಾಸಕ ಎಚ್.ಎಂ.ಗಣೇಶಪ್ರಸಾದ್ ಕಚೇರಿ ಆರಂಭಿಸಿದರು. ನಂತರ ಮಾತನಾಡಿ, ನನ್ನ ಕಚೇರಿಯು ಕ್ಷೇತ್ರದ ಜನತೆಗೆ ಸದಾ ತೆರೆದ ಬಾಗಿಲು. ಕ್ಷೇತ್ರದಲ್ಲಿ ಇರುವ ಸಂದರ್ಭದಲ್ಲಿ ತಾವು ಕಚೇರಿಯಲ್ಲಿಯೇ ಇದ್ದು ಸಾರ್ವಜನಿಕರನ್ನು ಭೇಟಿ ಮಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಪುರಸಭೆ ಮಾಜಿ ಅಧ್ಯಕ್ಷ ವೆಂಕಟಾಚಲ, ಮಾಜಿ ಸದಸ್ಯರಾದ ಸುರೇಶ್, ಸುರೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಬಿ.ರಾಜಶೇಖರ್, ಬಿ.ಎಂ. ಮುನಿರಾಜು, ಕಸಾಪ ಮಾಜಿ ಅಧ್ಯಕ್ಷ ವಿ.ನಾ. ಚಿದಾನಂದಸ್ವಾಮಿ ಹಾಗೂ ಇತರರು ಇದ್ದರು.

ಮೈಸೂರು ಮಿತ್ರ ಸೋಮವಾರ 29 ಮೇ 2023

ಶೀಘ್ರದಲ್ಲೇ ಎಲ್ಲಾ ಖಾಲಿ ಹುದ್ದೆಗಳ ಭರ್ತಿ



ಬೆಂಗಳೂರು, ಮೇ 28– ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಮ್ಮ ಸರ್ಕಾರ ಪರಿಹರಿಸಲಿದೆ. ಶೀಘ್ರದಲ್ಲೇ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ. ಅವರ ನಿವಾಸದಲ್ಲಿ ತಮ್ಮನ್ನು ಭೇಟಿ ಮಾಡಿದ ಉದ್ಯೋಗಾಕಾಂಕ್ಷಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಇದು ನಮ್ಮ ಕರ್ತವ್ಯ ಮತ್ತು ಸರ್ಕಾರದ ಮೊದಲ ಆದ್ಯತೆಯಾಗಿದೆ. ಆದರೆ ಇದನ್ನು 1 ಅಥವಾ 2 ದಿನದಲ್ಲಿ ಮಾಡಲಾಗುತ್ತದೆ ಎಂದು ನಾನು ಹೇಳಲಾರೆ ಎಂದರು. ಕರ್ನಾಟಕ ಪವರ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಲಿಮಿಟೆಡ್‌ಗೆ ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ಒತ್ತಾಯಿಸಿ 1,500ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಒತ್ತಾಯಿಸಿದರು.

ಜಿಲ್ಲಾ ಕಸಾಪ ಭವನದ ಆವರಣದಲ್ಲಿ ಶ್ರಮದಾನ



ಮೈಸೂರು, ಮೇ 28– ಅದಮ್ಯ ರಂಗಶಾಲೆಯ ಸಹಭಾಗಿತ್ವದಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ವಿಜಯನಗರದ ಮೊದಲ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣವನ್ನು ಸ್ವಚ್ಛಗೊಳಿಸುವ ಮುಖಾಂತರ ಶ್ರಮದಾನ ಮಾಡಿದರು.

ಮಳೆಯ ಕಾರಣದಿಂದ ಸಾಹಿತ್ಯ ಭವನದ ಆವರಣದಲ್ಲಿ ಕಳೆಯು ಬೆಳೆದಿತ್ತಲ್ಲದೇ, ಹಲವು ರೀತಿಯ ತ್ಯಾಜ್ಯಗಳು ಚೆಲ್ಲಾಡಿದ್ದವು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮನವಿ ಮೇರೆಗೆ ಕಾಲೇಜಿನ ಎನ್‌ಎಸ್‌ಎಸ್ ತಂಡ ಸ್ವಚ್ಛತಾ ಕಾರ್ಯ ಕೈಗೊಂಡಿತು. ದಿನವಿಡೀ ಶ್ರಮದಾನ ಮಾಡಿದ ವಿದ್ಯಾರ್ಥಿಗಳು ಸ್ವಚ್ಛತೆಯ ಕಾರ್ಯದ ಜೊತೆಗೆ, ಸಾರ್ವಜನಿಕರಿಗೆ ನೈರ್ಮಲ್ಯದ ಅರಿವು ಮೂಡಿಸುವ ಜೊತೆಗೆ ತಮ್ಮ ಕನ್ನಡ ಪ್ರೇಮವನ್ನು ಮೆರೆದರು. ಕಾಲೇಜಿನ ರಾಷ್ಟ್ರೀಯ ಸ್ವಯಂಸೇವಾ ಅಧಿಕಾರಿ ಸಂತೋಷ್‌ಕುಮಾರ್ ನೇತೃತ್ವದಲ್ಲಿ ಸುಮಾರು 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಸಾಪ ಆವರಣವನ್ನು ಸ್ವಚ್ಛ ಮಾಡಿದರು. ಕಾರ್ಯಕ್ರಮದ ಆಯೋಜಕರು ಮತ್ತು ಭಾಗಿಯಾಗಿದ್ದ ಸಾಹಿತ್ಯ ಪ್ರಿಯರಿಗೂ ಸ್ವಚ್ಛತೆ ಅರಿವು ಮೂಡಿಸಿದರು. ಈ ವೇಳೆ ಚಂದ್ರು ಮಂಡ್ಯ ಭಾಗವಹಿಸಿದ್ದರು.

ಒಂದನೇ ಪುಟದಿಂದ

ನೂತನ ಸಂಸತ್ ಭವನ ಲೋಕಾರ್ಪಣೆ

ವಿವಿಧ ಅಧೀನಂಗಳಿಂದ ಪ್ರಧಾನಿ ಮೋದಿ ಅವರಿಗೆ ಹಸ್ತಾಂತರ ಮಾಡಲಾಯಿತು. ಪೂಜ್ಯರ ಆಶೀರ್ವಾದ ಪಡೆದು, ಅದರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿದರು.

ಬಳಿಕ ಪವಿತ್ರ ರಾಜದಂಡದೊಂದಿಗೆ ಮೋದಿ ಅವರು ನಾದಸ್ವರ ಮತ್ತು ವೇದ ಮಂತ್ರಗಳ ಪಠಣಗಳ ನಡುವೆ ಮೆರವಣಿಗೆಯಲ್ಲಿ ಹೊಸ ಸಂಸತ್ ಭವನಕ್ಕೆ ಸೆಂಗೋಲ್ ಅನ್ನು ಕೊಂಡೊಯ್ದರು. ಲೋಕಸಭೆಯ ಸಭಾಂಗಣದಲ್ಲಿ ಸ್ಪೀಕರ್ ಕುರ್ಚಿಯ ಬಲಭಾಗದಲ್ಲಿ ನಿಗದಿಪಡಿಸಲಾಗಿದ್ದ ವಿಶೇಷ ಆವರಣದಲ್ಲಿ ರಾಜದಂಡವನ್ನು ಸ್ಪೀಕರ್ ಓಂ ಬಿರ್ಲಾ ಅವರ ಸಮೇತ ತೆರಳಿ ಅಲ್ಲಿ ಪ್ರತಿಷ್ಠಾಪಿಸಿದರು. ಅಲ್ಲಿ ಇಡಲಾಗಿದ್ದ ಜ್ಯೋತಿಯನ್ನು ಬೆಳಗಿಸುವ ಮೂಲಕ ನೂತನ ಸಂಸತ್ ಭವನದ ಉದ್ಘಾಟನೆಗೆ ಅಧಿಕೃತ ಚಾಲನೆ ನೀಡಿದರು.

ಸೆಂಗೋಲ್ ಸ್ಥಾಪನೆಯ ಬಳಿಕ ಅಲ್ಲಿಂದ ಹೊರಬಂದ ಪ್ರಧಾನಿ ಮೋದಿ ಅವರು, ನೂತನ ಸಂಸತ್ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಿದ್ದ ಕೆಲ ಕಾರ್ಮಿಕರಿಗೆ ಗೌರವ ಸಲ್ಲಿಸಿದರು. ಶಾಲು ಮತ್ತು ಸ್ಮರಣಿಗೆ ನೀಡಿ ಅವರನ್ನು ಸನ್ಮಾನಿಸಿದರು. ಬಳಿಕ ನೂತನ ಸಂಸತ್ ಭವನದ ಉದ್ಘಾಟನೆಯನ್ನು ಗುರುತಿಸಲು ಫಲಕವೊಂದನ್ನು ಮೋದಿ ಅನಾವರಣಗೊಳಿಸಿದರು. ಇದಾದ ಬಳಿಕ ಸಂಸತ್‌ನ ಲಾಬಿಯಲ್ಲಿ ಏರ್ಪಡಿಸಲಾಗಿದ್ದ ಸರ್ವಧರ್ಮ ಸಮ್ಮಿಲನ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಭಾಗವಹಿಸಿದರು.

ಹಿಂದೂ, ಮುಸ್ಲಿಂ, ಜೈನ, ಬೌದ್ಧ, ಕ್ರೈಸ್ತ ಧರ್ಮ ಸೇರಿದಂತೆ ಎಲ್ಲ ಧರ್ಮಗಳ ಮುಖಂಡರು ಪ್ರಾರ್ಥನೆ ಸಲ್ಲಿಸಿದರು. ನೂತನ ಸಂಸತ್ ಕಟ್ಟಡವು ಐತಿಹಾಸಿಕ ರಾಜಕೀಯ ವಿದ್ಯಮಾನಗಳಿಗೆ ಸಾಕ್ಷಿಯಾಗಲಿ ಎಂದು ಹರಸಿದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಎಸ್ ಜೈಶಂಕರ್ ಮತ್ತು ಜಿತೇಂದ್ರ ಸಿಂಗ್, ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಎರಡನೇ ಹಂತದ ಕಾರ್ಯಕ್ರಮ ಮಧ್ಯಾಹ್ನ 12 ಗಂಟೆ ನಂತರ ಆರಂಭ ನೂತನ ಸಂಸತ್ ಭವನ ಉದ್ಘಾಟನಾ ಕಾರ್ಯಕ್ರಮ ಆರಂಭವಾಗಿದ್ದು ಬೆಳಗಿನ ಜಾವ ಪೂಜಾ ಕೈಂಕರ್ಯಗಳು ಮತ್ತು ಸೆಂಗೋಲ್ ಪ್ರತಿಷ್ಠಾಪನೆ ನೆರವೇರಿದ್ದು, 2ನೇ ಹಂತದ ಕಾರ್ಯಕ್ರಮಗಳು ಮಧ್ಯಾಹ್ನ 12 ಗಂಟೆ ನಂತರ ಆರಂಭವಾಗಲಿದೆ ಎಂದು ತಿಳಿದುಬಂದಿದೆ.

ಎರಡನೇ ಹಂತದ ಕಾರ್ಯಕ್ರಮದಲ್ಲಿ ದೇಶದ ಹಲವು ಗಣ್ಯರು, ವಿವಿಧ ಪಕ್ಷಗಳ ನಾಯಕರು ಭಾಗಿಯಾಗಲಿದ್ದಾರೆ. ಎರಡನೇ ಹಂತದ ಕಾರ್ಯಕ್ರಮವು ರಾಷ್ಟ್ರಗೀತೆಯೊಂದಿಗೆ ಅಧಿಕೃತ ಆರಂಭವಾಗಲಿದೆ. ಈ ಸಂದರ್ಭದಲ್ಲಿ ಎರಡು ಕಿರುಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಇದಾದ ಬಳಿಕ ಉಪರಾಷ್ಟ್ರಪತಿ ಮತ್ತು ರಾಷ್ಟ್ರಪತಿಗಳ ಸಂದೇಶವನ್ನು ರಾಜ್ಯಸಭೆ ಉಪಾಧ್ಯಕ್ಷರು ಓದಲಿದ್ದಾರೆ. ನಂತರ ಲೋಕಸಭೆ ಸ್ಪೀಕರ್ ಭಾಷಣ ಮಾಡಲಿದ್ದಾರೆ.

ಇದೇ ಸಂದರ್ಭದಲ್ಲಿ 75ರೂ ಮುಖಬೆಲೆಯ ನಾಣ್ಯ ಮತ್ತು ಅಂಚೆಚೀಟಿ ಬಿಡುಗಡೆ ಮಾಡಲಾಗುತ್ತದೆ. ಕೊನೆಯಲ್ಲಿ ಪ್ರಧಾನಿ ಮೋದಿ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮವು ಮಧ್ಯಾಹ್ನ 2:30ರ ಸುಮಾರಿಗೆ ಸಂಪನ್ನವಾಗುತ್ತದೆ.

ಜನರ ಆಕಾಂಕ್ಷೆಯ ಸಂಕೇತ: ಮೋದಿ

ಸಂಸತ್‌ನಲ್ಲಿ ಸ್ಥಾಪನೆ ಮಾಡಲಾಗಿದೆ. ಸೆಂಗೋಲ್‌ನ ಗತಕಾಲದ ವೈಭವ ಮರುಕಳಿಸಿದೆ. ಇಂದು ಭಾರತದ ಪ್ರತಿಷ್ಠೆ, ಭಾರತೀಯರ ಗೌರವ ಮತ್ತಷ್ಟು ಹೆಚ್ಚಲಿದೆ. ಬ್ರಿಟೀಷರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ನೀಡಿದರು. ಅಧಿಕಾರ ಹಸ್ತಾಂತರಕ್ಕೆ ಸಾಕ್ಷಿಯಾಗಿ ಸೆಂಗೋಲ್ ನೀಡಿದ್ದರು. ಸೆಂಗೋಲ್ ನಾವು ಮಾಡಬೇಕಾದ ಕರ್ತವ್ಯವನ್ನು ನೆನಪಿಸುತ್ತೆ. ಸೆಂಗೋಲ್ ನಮ್ಮೆಲ್ಲರಿಗೂ ಪ್ರೇರಣೆ ಆಗಲಿದೆ ಎಂದು ತಿಳಿಸಿದರು.

ಆತ್ಮ ನಿರ್ಭರ್ ಭಾರತ್ ಯೋಜನೆಗೆ ನೂತನ ಸಂಸತ್ ಭವನ ಸಾಕ್ಷಿಯಾಗಿದೆ. ಭಾರತೀಯರ ಸಂಕಲ್ಪದಿಂದ ಸಂಸತ್ ಭವನ ನಿರ್ಮಾಣವಾಗಿದೆ. ಭಾರತ ಲೋಕತಂತ್ರದ ಜನಕ. ನಮ್ಮ ವೇದಗಳು ಪ್ರಜಾಪ್ರಭುತ್ವದ ಬಗ್ಗೆ ಹೇಳುತ್ತವೆ. ಮಹಾಭಾರತದಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಹೇಳಲಾಗಿದೆ. ಬಸವೇಶ್ವರರ ಅನುಭವ ಮಂಟಪ ಪ್ರಜಾಪ್ರಭುತ್ವದ ಪರಿಕಲ್ಪನೆ ನೀಡಿತು. ನವ ಭಾರತ ನಿರ್ಮಾಣಕ್ಕಾಗಿ ನಾವೆಲ್ಲರೂ ಶ್ರಮಿಸುತ್ತಿದ್ದೇವೆ. ಇಡೀ ವಿಶ್ವಕ್ಕೆ ಭಾರತ ದೇಶದ ಶಕ್ತಿ ಏನೆಂಬುದು ಗೊತ್ತಾಗಿದೆ. ಸಂವಿಧಾನ ನಮಗೆ ಪ್ರೇರಣೆಯಾಗಿದೆ. ರಾಜದಂಡವನ್ನು ಸಂಸತ್ ಭವನದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ರಾಜದಂಡ ಪ್ರಜಾಪ್ರಭುತ್ವಕ್ಕೆ ಮಾದರಿಯಾಗಿದೆ. ಈ ಸಂಸತ್ ಭವನ ಕಂಡು ಭಾರತೀಯರಿಗೆ ಹೆಮ್ಮೆಯಾಗಿದೆ. ಇದರಲ್ಲಿ ಸಂವಿಧಾನದ ಸ್ವರ, ಕಲಾ, ಸಂಸ್ಕೃತಿ ಇದೆ ಎಂದರು.

ನಮ್ಮ ದೇಶ ವಿವಿಧತೆಯಿಂದ ಕೂಡಿದೆ. ಈ ಸಂಸತ್ ಭವನ ವಿವಿಧತೆಯಲ್ಲಿ ಏಕತೆಯ ಪ್ರತೀಕವಾಗಿದೆ. ಸಂಸತ್‌ನ ಕಣ ಕಣದಲ್ಲಿ ಏಕ ಭಾರತ ಶ್ರೇಷ್ಠ ಭಾರತದ ದರ್ಶನವಾಗಲಿದೆ. ಸಂಸತ್‌ನಲ್ಲಿ ಡಿಜಿಟಲ್ ಗ್ಯಾಲರಿ ಇದೆ. ಸಂಸತ್‌ನಲ್ಲಿ ಸಾಕಷ್ಟು ಕಾರ್ಮಿಕರ ಪರಿಶ್ರಮವಿದೆ. 9 ವರ್ಷಗಳಲ್ಲಿ 9 ಹೊಸ ನಿರ್ಮಾಣದ ಕಲ್ಯಾಣವಾಗಿದೆ. 9 ವರ್ಷಗಳಲ್ಲಿ ಬಡವರಿಗಾಗಿ 4 ಕೋಟಿ ಮನೆಗಳನ್ನು ನಿರ್ಮಾಣವಾಗಿವೆ. 13 ಕೋಟಿ ಶೌಚಾಲಯ ನಿರ್ಮಾಣವಾಗಿದೆ. ಈ ನೂತನ ಸಂಸತ ಭವನದಲ್ಲಿ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿದ್ದೇವೆ. ನೀರು ಸಂರಕ್ಷಣೆಗಾಗಿ 50 ಸಾವಿರಕ್ಕಿಂತ ಹೆಚ್ಚು ಅಮೃತ ಸರೋವರ ನಿರ್ಮಾಣ ಮಾಡಿದ್ದೇವೆಯ ಇದು ನನಗೆ ಬಹಳ ಸಂಸತ ತಂದಿದೆ. ದೇಶದ ಅಭಿವೃದ್ಧಿ ದೇಶದ ಜನರ ಅಭಿವೃದ್ಧಿಯಾಗಿದೆ.

ಸ್ವಾತಂತ್ರ್ಯದ ಪೂರ್ವದಲ್ಲಿ ಒಂದು ಸಮಯದಲ್ಲಿ ಮಹಾತ್ಮಾ ಗಾಂಧಿಯವರ ಸಯೋಗ ಆಂದೋಲನವು ಪ್ರತಿಯೊಬ್ಬ ಭಾರತಿಯನನ್ನೂ ಒಗ್ಗೂಡಿಸಿತ್ತು. ಇದರ ಪ್ರತಿಫಲ ನಮಗೆ 1947ರಲ್ಲಿ ದೊರೆಯಿತು. ಮುಂದಿನ ದಿನಗಳಲ್ಲಿ ಭಾರತ ಹೊಸ ಮಾರ್ಗದಲ್ಲಿ ಸಾಗಲಿದೆ. ಭಾರತದ ವಿಶ್ವಾಸ ಬೇರೆ ದೇಶದ ವಿಶ್ವಾಸಕ್ಕೆ ಉತ್ತೇಜನ ನೀಡಿತು. ಭಾರತದಂತ ವಿವಿಧತೆಯಿಂದ ಕೂಡಿದ ದೇಶ ವಿಶ್ವಾಸದಿಂದ ಮುನ್ನಡೆಯುತ್ತದೆ. ಇದು ಬೇರೆ ದೇಶಗಳಿಗೆ ಪ್ರೇರಣೆಯಾಗಿದೆ. ಭಾರತ ಜಗತ್ತಿನ ಅನೇಕ ದೇಶಗಳಿಗೆ ಪ್ರೇರಣೆಯಾಗಿದೆ.

ಈ ಸಂಸತ್ ಭವನ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವನ್ನು ಜಾಗೃತಗೊಳಿಸುತ್ತದೆ. ಇಲ್ಲಿ ಕುಳಿತ ಪ್ರತಿಯೊಬ್ಬ ಜನನಾಯಕನಲ್ಲೂ ಕರ್ತವ್ಯ ಜಾಗೃತ ಮಾಡುತ್ತದೆ. ನಮಗೆ ದೇಶ ಮೊದಲು. ನಾವು ನಿರಂತರವಾಗಿ ನಮ್ಮನ್ನು ನಾವು ಸುಧಾರಣೆಯಾಗುವಂತೆ ಮಾಡಬೇಕು. ನಾವು ಹೊಸ ಮಾರ್ಗವನ್ನು ಹುಡುಕುತ್ತಿರಬೇಕು. ಲೋಕ ಕಲ್ಯಾಣ ನಮ್ಮ ಜೀವನದ ಮಂತ್ರವಾಗಿರಬೇಕು ಎಂದು ಸಂಸ್ಕೃತ ಮಂತ್ರಗಳನ್ನು ಹೇಳುವ ಮೂಲಕ ನಾಯಕರಿಗೆ ಕಿವಿಮಾತು ಹೇಳಿದರು. ನೂತನ ಸಂಸತ್ ಭವನದಲ್ಲಿ ತೆಗೆದುಕೊಳ್ಳುವ ಪ್ರತಿಯೊಂದು ನಿರ್ಣಯ ಬರುವ ದಿನಗಳಲ್ಲಿ ಬಹಳಷ್ಟು ಮಹತ್ವವಾಗುತ್ತದೆ. ಇಲ್ಲಿ ತೆಗೆದುಕೊಳ್ಳುವ ಪ್ರತಿಯೊಂದು ನಿರ್ಣಯ ಭಾರತದ ಉಜ್ವಲ ಭವಿಷ್ಯದ ಆಧಾರವಾಗಲಿದೆ. ಇಲ್ಲಿ ತೆಗೆದುಕೊಳ್ಳುವ ಪ್ರತಿಯೊಂದು ನಿರ್ಣಯ ಬಡವರ ಪಾಲಿನ ಆಶಾಕಿರಣವಾಗಲಿವೆ. ಈ ಸಂಸತ್ ಬಡವರ ಕಲ್ಯಾಣಕ್ಕಾಗಿ ಸಮರ್ಪಿತವಾಗಿದೆ. ಇಲ್ಲಿ ನಿರ್ಮಿಸಲಿರುವ ಕಾನೂನುಗಳು ಬಡವರ, ಯುವಕರ ಏಳಿಗೆಗೆ ಅನುಕೂಲವಾಗಲಿವೆ. ನಾನು ದೇಶದ ಜನರಿಗೆ ನೂತನ ಸಂಸತ್ ನಿರ್ಮಾಣದ ಶುಭಾಶಯ ತಿಳಿಸುತ್ತೇನೆ ಎಂದು ತಮ್ಮ ಭಾಷಣವನ್ನು ಪೂರ್ಣಗೊಳಿಸಿದರು.

'ಶ್ರೀ ಶಂಕರಾಚಾರ್ಯ ಸೇವಾರತ್ನ' ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭ

ಅಸ್ಪೃಶ್ಯತೆ ತೊಡೆಯಲು ಶ್ರಮಿಸಿದ ಶ್ರೀ ಶಂಕರಾಚಾರ್ಯರು

ಶಾಸಕ ಟಿ.ಎಸ್.ಶ್ರೀವತ್ಸ ಸ್ಮರಣೆ

ಮೈಸೂರು,ಮೇ 28(ಪಿಎಂ)– ಅಸ್ಪೃಶ್ಯತೆ ನಮ್ಮ ದೇಶಕ್ಕೆ ಮಹಾ ಮಾರಕ. ಅಂತಹ ಅಸ್ಪೃಶ್ಯತೆ ತೊಡೆಯುವ ನಿಟ್ಟಿನಲ್ಲಿ ತಮ್ಮ ಕಾಲಘಟ್ಟವಾದ 8ನೇ ಶತಮಾನದಲ್ಲೇ ಮಹತ್ಕಾರ್ಯ ಮಾಡಿದವರು ಶ್ರೀ ಶಂಕರಾಚಾರ್ಯರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಸ್ಮರಿಸಿದರು.

ಮೈಸೂರಿನ ಗನ್‌ಹೌಸ್ ಬಳಿಯ ಶ್ರೀ ಶೃಂಗೇರಿ ಶಂಕರಮಠದ ಆವರಣದಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ 'ಶ್ರೀ ಶಂಕರ ಜಯಂತಿ–ತತ್ವ ಜ್ಞಾನಿಗಳ ದಿನಾಚರಣೆ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಹಾಗೂ ಶ್ರೀ ಶಂಕರಾಚಾರ್ಯ ಸೇವಾರತ್ನ ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಅಸ್ಪೃಶ್ಯತೆ ನಮ್ಮ ದೇಶಕ್ಕೆ ಅಂಟಿರುವ ಮಹಾ ಮಾರಕ. ಅದನ್ನು ತೊಡೆದು ಹಾಕುವ ನಿಟ್ಟಿನಲ್ಲಿ ನಾವು ಗಂಭೀರ ಪ್ರಯತ್ನ ಮಾಡಬೇಕು. ಅಸ್ಪೃಶ್ಯತೆಯನ್ನು ನಮ್ಮ ಸಮಾಜದಿಂದ ಕಿತ್ತೊಗೆಯಲು ಶಂಕರಾಚಾರ್ಯರು ಶ್ರಮಿಸಿದರು. ಶಂಕರಾಚಾರ್ಯರು ತಮ್ಮ ತಾಯಿಗೆ ಇಷ್ಟವಿಲ್ಲವಾದರೂ ಅವರನ್ನು ಒಪ್ಪಿಸಿ ಸನ್ಯಾಸತ್ವ ಸ್ವೀಕರಿಸಿದರು. ತಮ್ಮ ಜೀವಿತಾವಧಿಯ 32 ವರ್ಷಗಳ ಅಲ್ಪಾವಧಿಯಲ್ಲಿಯೇ ಎರಡು ಬಾರಿ ಇಡೀ ದೇಶ ಸಂಚರಿಸಿ, ಪರಮಾತ್ಮನ ಸಂದೇಶ ಸಾರಿದರು ಎಂದು ಹೇಳಿದರು.

ಎಲ್ಲರಲ್ಲೂ ಪರಮಾತ್ಮನನ್ನು ಕಂಡವರು ಶಂಕರಾಚಾರ್ಯರು. ನಾವು ಅವರ ವಿಚಾರಗಳನ್ನು ಸ್ವಲ್ಪವಾದರೂ ಪಾಲನೆ ಮಾಡಬೇಕು. ಅವರು ನಡೆದ ಹಾದಿ, ಬೋಧನೆಯನ್ನು ನಾವು ಸ್ವಲ್ಪವಾದರೂ ಅಳವಡಿಸಿಕೊಳ್ಳಬೇಕು. ಅದೇ ನಾವು ಅವರಿಗೆ ಸಲ್ಲಿಸುವ ಕೃತಜ್ಞತೆಯಾಗಲಿದೆ ಎಂದು ನುಡಿದರು.



ಮೈಸೂರಿನ ಗನ್‌ಹೌಸ್ ಬಳಿಯ ಶ್ರೀ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀ ಶಂಕರಾಚಾರ್ಯರ ಜಯಂತಿಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಶ್ರೀ ಶಂಕರಾಚಾರ್ಯ ಸೇವಾರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಯುಪಿಎಸ್‌ಸಿಯ ನಾಗರಿಕ ಸೇವಾ ಪರೀಕ್ಷೆಯಲ್ಲಿ 390ನೇ ರ್‍ಯಾಂಕ್ ಗಳಿಸಿರುವ ಮೈಸೂರಿನ ಪೂಜಾ ಮುಕುಂದ್ ಮಾತನಾಡಿ, ವಿಶ್ವದ ಪ್ರಮುಖ ತತ್ವಜ್ಞಾನಿಗಳಲ್ಲಿ ಶಂಕರಾಚಾರ್ಯರೂ ಮುಂಚೂಣಿಯಲ್ಲಿದ್ದಾರೆ. ಶಂಕರಾಚಾರ್ಯರು ಕಾಶಿಯಿಂದ ಕನ್ಯಾಕುಮಾರಿವರೆಗೆ ಕಾಲ್ನಡಿಗೆಯಲ್ಲಿ ಸಂಚರಿಸಿ, ನಾಲ್ಕು ದಿಕ್ಕಿನಲ್ಲಿ ತಮ್ಮ ತತ್ವಜ್ಞಾನ ಹರಡಿದರು ಎಂದು ಸ್ಮರಿಸಿದರು.

ಕನಸು–ನನಸಾಗಿಸಿ: ಭವ್ಯ ಭಾರತದ ಪ್ರಜೆಗಳಾದ ವಿದ್ಯಾರ್ಥಿಗಳು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದೀರಿ. ನಿಮ್ಮಲ್ಲಿ ಎಷ್ಟೋ ಮಂದಿ ಐಎಎಸ್, ಐಪಿಎಸ್, ಡಾಕ್ಟರ್ ಆಗಬೇಕೆಂಬ ಕನಸು ಹೊಂದಿರಬಹುದು. ಕನಸು ಕಟ್ಟಿಕೊಳ್ಳುವುದು ಬಹಳ ಮುಖ್ಯ. ಅದರ ಜೊತೆಗೆ ಅದನ್ನು ನನಸಾಗಿಸಲು ನಾವು ಶ್ರಮ ವಹಿಸಬೇಕು. ಪರಿಶ್ರಮ ಇಲ್ಲದೇ ಕೇವಲ ಕನಸು ಕಂಡರೆ ಪ್ರಯೋಜನವಿಲ್ಲ ಎಂದು ಪೂಜಾ ಮುಕುಂದ್ ಹೇಳಿದರು.

ಕವಿ ಕೆ.ಸಿ.ಶಿವಪ್ಪ ಅವರ 'ಮುದ್ದು ರಾಮನ ಮನಸು' ಕವಿತೆ ವಾಚಿಸಿ, ಕನಸನ್ನು ನನಸಾಗಿಸುವ ಬಗೆಯನ್ನು ಒತ್ತಿ ಹೇಳಿದರು. 'ಕಂಡ ಕನಸುಗಳನ್ನೆಲ್ಲಾ ನನಸಾಗಿಸುವುದು ಒಳಿತು. ರೂಪ ತಾಳಲಿ ನಿನ್ನ ಕಾಗದದ ನಕ್ಷೆ, ಚಂದ ಚಿತ್ರದ ಸೇಬು ಹೊಟ್ಟೆ ತುಂಬುವುದೇನೂ?' ಎಂದು ಕವಿತೆಯ ಸಾಲು ಉಲ್ಲೇಖಿಸಿದ ಅವರು, ನಾವು ಕನಸು ಕಾಣಬೇಕು. ಜೊತೆಗೆ ಆ ಕನಸು ನನಸು ಮಾಡಿಕೊಳ್ಳಬೇಕು. ಅದಕ್ಕಾಗಿ ಒಂದು ನಕ್ಷೆ ಸಿದ್ಧಪಡಿಸಿಕೊಳ್ಳುವುದು ಮುಖ್ಯ. ಕೇವಲ ಕನಸುಗಳಲ್ಲಿ ಕಾಲ ಕಳೆಯಬಾರದು. ಕಂಡ 'ಸಾಧನೆಯ ಕನಸು' ನನಸು ಮಾಡಿಕೊಳ್ಳಬೇಕು. ಯಾವುದಕ್ಕೂ ಕುಗ್ಗದೇ ಪರಿಶ್ರಮದಿಂದ ಸಾಧಿಸಬೇಕು ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಇದಕ್ಕೂ ಮುನ್ನ ಪೂಜಾ ಮುಕುಂದ್, ಸೆಸ್ಕ್ ಎನ್‌ಆರ್ ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಆರ್. ಪೂರ್ಣಚಂದ್ರ ತೇಜಸ್ವಿ, ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಪ್ರಾಧ್ಯಾಪಕ ಡಾ.ಪಿ.ಶ್ರೀನಿವಾಸ್, ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳ ನೌಕರರ ಸಂಘದ ಅಧ್ಯಕ್ಷ ಎನ್.ಶ್ರೀಧರ್ ದೀಕ್ಷಿತ್, ವಿಜಯ ವಿಠ್ಠಲ ಕಾಲೇಜಿನ ಉಪನ್ಯಾಸಕ ರಾಜೇಶ್ ಈಶ್ವರ್, ಐಕ್ಯೂ ಪ್ಲಸ್ ಅಬಾಕಸ್ ಬ್ರೈನ್ ಜಿಮ್ ಅಕಾಡೆಮಿಯ ಶ್ರೀಕಾಂತ್ ಭಟ್, ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಅರ್ಚಕ ರಾಮಕೃಷ್ಣ ಭಾರಧ್ವಾಜ್ ಅವರಿಗೆ 'ಶ್ರೀ ಶಂಕರಾಚಾರ್ಯ ಸೇವಾರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಅಲ್ಲದೆ, ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸುಮಾರು 50 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಡಾ.ಬಿ.ಆರ್.ನಟರಾಜ್ ಜೋಯಿಸ್ ಶ್ರೀ ಶಂಕರಾಚಾರ್ಯರ ಚಿತ್ರಪಟಕ್ಕೆ ಪುಷ್ಪ ನಮನ ಸಲ್ಲಿಸಿದರು. ಶ್ರೀ ಶಂಕರಾಚಾರ್ಯರ ಕುರಿತು ಸಾಹಿತಿ ಡಾ.ಲೀಲಾ ಕೆ.ಪ್ರಕಾಶ್ ಮುಖ್ಯ ಭಾಷಣ ಮಾಡಿದರು. ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಹಿರಿಯ ಸಾಹಿತಿ ಡಾ.ಪುಷ್ಪಾ ಎ.ಅಯ್ಯಂಗಾರ್, ಕರ್ನಾಟಕ ಸೇನಾಪಡೆ ರಾಜ್ಯಾಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಮತ್ತಿತರರು ಹಾಜರಿದ್ದರು.

ಯತೀಂದ್ರ ಸಿದ್ದರಾಮಯ್ಯಗೆ ಡಿಮ್ಯಾಂಡಪ್ಪೋ ಡಿಮ್ಯಾಂಡ್...!

ಉದ್ಯೋಗ, ವರ್ಗಾವಣೆ, ಬೋರ್ಡ್ ಚೇರ್ಮನ್‌ಗಾಗಿ ದುಂಬಾಲು...



ಮೈಸೂರು, ಮೇ 28(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯನವರಿಗೆ ಈಗ ಭಾರೀ ಡಿಮ್ಯಾಂಡ್ ಹೆಚ್ಚಾಗಿದೆ. ಉದ್ಯೋಗ, ವರ್ಗಾವಣೆ, ಬೋರ್ಡ್ ಚೇರ್ಮನ್ ಮಾಡಿ ಎಂದು ನೂರಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಅವರ ಹಿಂದೆ ದುಂಬಾಲು ಬೀಳುತ್ತಿರುವ ದೃಶ್ಯ ಕಂಡುಬಂದಿದೆ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಮೊದಲ ಬಾರಿಗೆ ಮೈಸೂರಿನ ಜಲದರ್ಶಿನಿಗೆ ಆಗಮಿಸಿದ ಯತೀಂದ್ರ ಸಿದ್ದರಾಮಯ್ಯ ಅವರನ್ನು ಕಾಣಲು ಅರ್ಜಿ ಹಿಡಿದು ಬಂದು ನೂರಾರು ಮಂದಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿದರು.

ಜಲದರ್ಶಿನಿ ಹೊಸ ಕಟ್ಟಡದಲ್ಲಿ (ಶಾಸಕ ಜಿ.ಟಿ.ದೇವೇಗೌಡರ ಹಳೇ ಕಚೇರಿ)ನ ಕೊಠಡಿಯೊಂದರಲ್ಲಿ ಹತ್ತಾರು ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲಿಸಿದ ಯತೀಂದ್ರ ಸಿದ್ದರಾಮಯ್ಯ, ಸಂಬಂಧಪಟ್ಟವರೊಂದಿಗೆ ಮಾತನಾಡುವುದಾಗಿ ಭರವಸೆ ನೀಡಿದರು.

ದೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರನ್ನು ಸೋಲಿಸಲು ಕಾಂಗ್ರೆಸ್ ಪಕ್ಷದಲ್ಲಿದ್ದವರೇ ಬಿಜೆಪಿಗೆ ಮತಹಾಕಿ ಎಂದು ಕೆಲಸ ಮಾಡಿದ್ದಲ್ಲದೆ ದುಡ್ಡನ್ನು ಖರ್ಚು ಮಾಡಿದ್ದಾರೆ. ಇದೆಲ್ಲವನ್ನೂ ತಾವು ಪರಿಶೀಲನೆ ನಡೆಸಬೇಕು. ಚುನಾವಣೆ ವೇಳೆ ಗಂಟು ಮಾಡಿಕೊಂಡರು. ಈಗ ಪಂಚಾಯಿತಿ, ಬೋರ್ಡ್ ಚೇರ್ಮನ್ ಮಾಡಿ ಎಂದು ನಿಮ್ಮ ಹಿಂದೆ ಬಿದ್ದಿದ್ದಾರೆ. ಆದ್ದರಿಂದ ಇದೆಲ್ಲವನ್ನೂ ಪರಿಶೀಲಿಸಿ ನಿಜವಾಗಿ ಕೆಲಸಮಾಡಿದವರಿಗೆ ಅವಕಾಶ ಮಾಡಿಕೊಡಿ ಎಂದು ಕೆಲವರು ದೂರು ಹೇಳಿದರು.

ನೂಕುನುಗ್ಗಲು: ಈ ವೇಳೆ ಭಾರೀ ನೂಕುನುಗ್ಗಲು ಉಂಟಾಗಿ ಹಲವರು ತಮ್ಮ ಮನವಿ ಅರ್ಜಿ ನೀಡಲು ಪರದಾಡುವಂತಾಯಿತು. ಹೂಗುಚ್ಛ ನೀಡಿ ಅಭಿನಂದಿಸುವುದರ ಜೊತೆಗೆ ತಮ್ಮ ಬೇಡಿಕೆಗಳನ್ನು ಹೇಳಿಕೊಳ್ಳಲು ಬಂದಿದ್ದವರು ಜನಜಂಗುಳಿಯಿಂದಾಗಿ ವಾಪಸ್ಸಾದರು.

ಜನರ ಭೇಟಿಗೆ ಬಂದೆ: ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಸ್ಥಳೀಯ ಮುಖಂಡರು, ಕಾರ್ಯಕರ್ತರನ್ನು ಭೇಟಿ ಮಾಡಲು ಬಂದಿದ್ದೇನೆ. ಇದು ಸಾಮಾನ್ಯ ಭೇಟಿಯಷ್ಟೇ ಎಂದು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕ್ಯಾಂಟರ್‌ಗೆ ಬೈಕ್ ಡಿಕ್ಕಿ: ಇಬ್ಬರು ಕೇರಳ ಯುವಕರು ಸಾವು

ಕಳಸ್ತವಾಡಿ ಬಳಿ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಭಾನುವಾರ ಬೆಳಗ್ಗೆ ಘಟನೆ

ಮೈಸೂರು, ಮೇ 28(ಆರ್‌ಕೆ)– ಬೈಕ್‌ವೊಂದು ಕ್ಯಾಂಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಕೇರಳ ಮೂಲದ ಯುವಕರಿಬ್ಬರು ಸಾವನ್ನಪ್ಪಿರುವ ಘಟನೆ ಮೈಸೂರು –ಬೆಂಗಳೂರು ಹೆದ್ದಾರಿಯ ಕಳಸ್ತವಾಡಿ ಗ್ರಾಮದ ಬಳಿ ಇಂದು ಬೆಳಗ್ಗೆ ಸಂಭವಿಸಿದೆ.

ಕೇರಳದ ಮಲಪ್ಪುರಂ ಜಿಲ್ಲೆಯ ಚುಂಗತಾರದ ಎಡಕ್ಕರ ಗ್ರಾಮದ ನಿವಾಸಿ ಪಿ.ಕೆ.ಶಾಜಿ ಅವರ ಮಗ ಪಿ.ಎಸ್.ನಿತಿನ್(21) ಹಾಗೂ ತಿರುವನಂತಪುರಂನ ಹೆಚ್.ಶೌಜಾಸ್ ಅವರ ಮಗ ಬಿಎಸ್ಸಿ ನರ್ಸಿಂಗ್ ವ್ಯಾಸಂಗ ಮಾಡುತ್ತಿದ್ದ ಶಾಹಿನ್ ಶಾಜನ್ (21) ಸಾವನ್ನಪ್ಪಿದವರು.

ಶ್ರೀರಂಗಪಟ್ಟಣ ಕಡೆಯಿಂದ ಕೆಟಿಎಂ ಡ್ಯೂಕ್ (ಕೆಎಲ್ 02, ಬಿಎಫ್0209) ಬೈಕ್‌ನಲ್ಲಿ ಬರುತ್ತಿದ್ದ ಅವರು, ಕಳಸ್ತವಾಡಿ ಬಳಿ ಮುಂದೆ ಹೋಗುತ್ತಿದ್ದ ಕ್ಯಾಂಟರ್ (ಕೆಎ 02 ಡಿ 7530)ಗೆ ಬೆಳಗ್ಗೆ 8.20 ಗಂಟೆ ವೇಳೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ. ಅಪ್ಪಳಿಸಿದ ರಭಸಕ್ಕೆ ಬೈಕ್ ಸವಾರರಿಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಎನ್.ಆರ್. ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸಂಚಾರ ಎಸಿಪಿ ಪರಶುರಾಮಪ್ಪ ಹಾಗೂ ಸಿಬ್ಬಂದಿಗಳು, ಮಹಜರು ನಡೆಸಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಮೃತದೇಹ ಒಪ್ಪಿಸಿದರು.

ಗ್ರಾಮೀಣ ಸೊಗಡಿನ ಗೆಜ್ಜಲಟ್ಟಿ ನಾಟಕ ಪ್ರದರ್ಶನ



ಮೈಸೂರು, ಮೇ 28(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರು ರಂಗ ಮಿತ್ರರು ತಂಡದಿಂದ 'ಗೆಜ್ಜಲಟ್ಟಿ' ನಾಟಕದ ಮೊದಲ ಪ್ರದರ್ಶನ ನಡೆಯಿತು.

ಲೇಖಕ ಹೊರೆಯಾಲ ದೊರೆಸ್ವಾಮಿ ಅವರ ರಚನೆ, ಕೃಷ್ಣನ್ ನಿರ್ದೇಶನ ಹಾಗೂ ರವೀಂದ್ರ ಮತ್ತು ಸಂಗಡಿಗರ ಸಂಗೀತ ಹಾಗೂ ಕೊಳ್ಳೆಗಾಲದ ಭಾಷಾ ಶೈಲಿಯೊಂದಿಗೆ ಮೂಡಿಬಂದ ನಾಟಕ ರಂಗಾಸಕ್ತರ ಮನಗೆದ್ದಿತು. ನಾಟಕ ಪ್ರದರ್ಶನಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ನಾಟಕ ನಿರ್ದೇಶಕ ಕೃಷ್ಣನ್, ಸುಮಾರು 70 ದಿನಗಳ ನಿರಂತರ ಅಭ್ಯಾಸ ನಡೆಸಿ ಮೊದಲ ಪ್ರದರ್ಶನ ನೀಡುತ್ತಿದ್ದೇವೆ. ಕೊಳ್ಳೇಗಾಲದ ಜನರ ಭಾಷಾ ಶೈಲಿಯಲ್ಲಿರುವುದರಿಂದ ಅಭ್ಯಾಸ ದೀರ್ಘಕಾಲ ತೆಗೆದುಕೊಂಡಿತು ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಆದ್ಯ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಜೆ.ಜಿ.ವಿಶ್ವನಾಥಯ್ಯ, ಕಲಾಪ್ರೇಕ್ಷಕರಿಗೆ ರಸಸ್ವಾದ ನೀಡುವ ರಂಗಭೂಮಿಯಲ್ಲಿ ನಾಟಕಗಳ ಪ್ರದರ್ಶನ ನಿರಂತರವಾಗಿರಬೇಕು ಎಂದರು. ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಅಧ್ಯಕ್ಷ ಟಿ.ಸುರೇಶ್ ಮತ್ತಿತರರಿದ್ದರು.



ಯುಪಿಎಸ್‌ಸಿ ಪರೀಕ್ಷೆಯಲ್ಲಿ 390ನೇ ರ್‍ಯಾಂಕ್ ಪಡೆದಿರುವ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿ ಎಂ.ಪೂಜಾ ಅವರನ್ನು ಕಾಲೇಜು ಆಡಳಿತ ಮಂಡಳಿ ವತಿಯಿಂದ ಅಭಿನಂದಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀ ಶೈಲ ರಾಮಣ್ಣವರ್, ಪ್ರಾಂಶುಪಾಲರಾದ ಡಾ.ಬಿ.ಸದಾಶಿವೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಗ್ಯಾರಂಟಿ ಪಡೆಯಲು ಬಿಪಿಎಲ್ ಕಾರ್ಡ್‌ಗಾಗಿ ಮುಗಿಬಿದ್ದ ಜನ

ಮೈಸೂರು, ಮೇ 28(ಎಸ್‌ಪಿಎನ್)– ಕಾಂಗ್ರೆಸ್ ಪಕ್ಷ ಚುನಾವಣೆಗೂ ಮುನ್ನ ಘೋಷಣೆ ಮಾಡಿದ್ದ ಐದು ಗ್ಯಾರಂಟಿಗಳನ್ನು ಪಡೆಯಲು ಬಿಪಿಎಲ್ ಕಾರ್ಡ್ ಮಾನದಂಡವಾಗಲಿದೆ ಎಂಬ ವದಂತಿ ಹಬ್ಬಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಬಿಪಿಎಲ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಲು ಬ್ರೌಸಿಂಗ್ ಸೆಂಟರ್‌ಗಳತ್ತ ಮುಗಿಬೀಳುತ್ತಿದ್ದಾರೆ.

ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ಉಚಿತ ವಿದ್ಯುತ್, ರಾಜ್ಯದ ಪ್ರತಿ ಮನೆ ಒಡತಿಗೆ 2 ಸಾವಿರ ರೂ., ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ, ನಿರುದ್ಯೋಗಿ ಪದವೀಧರರಿಗೆ ಎರಡು ವರ್ಷದವರೆಗೆ 3 ಸಾವಿರ ರೂಪಾಯಿ ಹಾಗೂ ಡಿಪ್ಲೊಮಾ ಪಾಸಾದವರಿಗೆ 1,500 ರೂ.ಗಳನ್ನು ಯುವನಿಧಿ ಯೋಜನೆಯಡಿ ಘೋಷಣೆ ಮಾಡಲಾಗಿತ್ತು. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆಗಳನ್ನು ಘೋಷಿಸಿತ್ತು. ಇದರ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಆಯಾ ಇಲಾಖೆಗಳಿಗೆ ಸೂಚಿಸಿದೆ.

ಈ ಸೌಲಭ್ಯಗಳನ್ನು ಪಡೆಯಲು ಬಿಪಿಎಲ್ ಕಾರ್ಡ್ ಮಾನದಂಡವಾಗಬಹುದು ಎಂಬ ವದಂತಿ ದಟ್ಟವಾಗಿ ಹಬ್ಬಿದೆ. ಹೀಗಾಗಿ ಸಾರ್ವಜನಿಕರು ಬ್ರೌಸಿಂಗ್ ಸೆಂಟರ್‌ಗಳಿಗೆ ತೆರಳಿ ಬಿಪಿಎಲ್ ಕಾರ್ಡ್‌ಗೆ ದುಪ್ಪಟ್ಟು ಹಣ ನೀಡಿ ಅರ್ಜಿ ಸಲ್ಲಿಸಲು ಮುಂದಾಗುತ್ತಿದ್ದಾರೆ.



ಈ ಹಿಂದಿನ ಬಿಜೆಪಿ ಸರ್ಕಾರ 2022ರ ಜನವರಿಯಿಂದಲೇ ಹೊಸ ಪಡಿತರ ಚೀಟಿ ವಿತರಿಸಲು ಹಾಗೂ ತಿದ್ದುಪಡಿಗೆ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಿತ್ತು. ಈ ಅವಕಾಶವನ್ನು ಬಳಸಿಕೊಂಡ ಅನೇಕರು ಅರ್ಜಿ ಸಲ್ಲಿಸಿ, ಬಿಪಿಎಲ್ ಕಾರ್ಡ್ ಪಡೆದುಕೊಂಡು ಸರ್ಕಾರದ ಸವಲತ್ತುಗಳನ್ನು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.

ಪ್ರಸ್ತುತ ಮೈಸೂರು ಜಿಲ್ಲೆಯಲ್ಲಿ 6,60,875 ಪಡಿತರ ಚೀಟಿಗಳಿದ್ದವು. 20,82,804 ಫಲಾನುಭವಿಗಳನ್ನು ಗುರುತಿಸಲಾಗಿದೆ. 50,410 ಅಂತ್ಯೋದಯ ಪಡಿತರ ಚೀಟಿಗಳಿದ್ದು, ಇದರಲ್ಲಿ 2,17,152 ಫಲಾನುಭವಿಗಳನ್ನು ಗುರುತಿಸಲಾಗಿದೆ. 1,09,478 (ಎಪಿಎಲ್) ಆದ್ಯತೇತರ ಪಡಿತರ ಚೀಟಿಗಳಿದ್ದು, 20,82,804 ಫಲಾನುಭವಿಗಳನ್ನು ಗುರುತಿಸಲಾಗಿದೆ ಎಂದು ಆಹಾರ ಇಲಾಖೆ ಸಿಬ್ಬಂದಿಯೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಬಿಜೆಪಿ ಸರ್ಕಾರದಲ್ಲಿ ಪಡಿತರ ಚೀಟಿಗೆ ಆಧಾರ್ ಸೀಡಿಂಗ್ ಮಾಡಿಸಲು ಸೂಚಿಸಿತ್ತು. ಅದರಂತೆ ಮೈಸೂರು ಜಿಲ್ಲೆಯ 7,11,287 ಪಡಿತರ ಚೀಟಿಗಳ ಪೈಕಿ 7,11,266 ಪಡಿತರ ಚೀಟಿಗಳ ಸೀಡಿಂಗ್ ಕಾರ್ಯ ಮುಗಿದ್ದು, ಮೈಸೂರು ಜಿಲ್ಲೆಯಲ್ಲಿ ಆಧಾರ್ ಜೋಡಣೆಯು ಶೇ.99 ರಷ್ಟು ಮುಗಿದಿದೆ. ಸದ್ಯ ಹೊಸ ಪಡಿತರ ಚೀಟಿಗೆ ಅರ್ಜಿ ಸಲ್ಲಿಸುವ ಹಾಗೂ ಪಡಿತರ ಚೀಟಿ ತಿದ್ದುಪಡಿ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ ತಾಲೂಕುವಾರು ಇರುವ ಪಡಿತರ ಚೀಟಿಗಳ ವಿವರ

ತಾಲೂಕುಗಳು	ಆದ್ಯತಾ ಪಡಿತರ ಚೀಟಿಗಳು	ಫಲಾನುಭವಿಗಳ ಸಂಖ್ಯೆ
ಮೈಸೂರು	2,174,64	7,42,473
ನಂಜನಗೂಡು	1,03,788	3,12,512
ಕೆ.ಆರ್.ನಗರ	31,618	91,250
ಹುಣಸೂರು	70,934	2,18,264
ಹೆಚ್.ಡಿ.ಕೋಟೆ	46,499	1,41,211
ಪಿರಿಯಾಪಟ್ಟಣ	58,563	1,75,709
ತಿ.ನರಸೀಪುರ	76,967	2,38,526
ಸರಗೂರು	23,323	69,419
ಸಾಲಿಗ್ರಾಮ	31,719	93,440

ಹೊಸ ಪಡಿತರ ಚೀಟಿ ಪಡೆಯಲು ಆನ್‌ಲೈನ್‌ನಲ್ಲಿ ಪ್ರಸ್ತುತ 13,326 ಮಂದಿ ಅರ್ಜಿ ಸಲ್ಲಿಸಿದ್ದು, ಈ ಪೈಕಿ 711 ಮಂದಿ ಅರ್ಜಿ ಹಿಂಪಡೆದಿದ್ದಾರೆ. ಅಧಿಕಾರಿಗಳು ಪರಿಶೀಲನೆ ನಡೆಸಿ 7,178 ಹೊಸ ರೇಷನ್ ಕಾರ್ಡ್‌ಗಳಿಗೆ ಅನುಮೋದನೆ ನೀಡಿದ್ದಾರೆ. ಬೇರೆಬೇರೆ ಕಾರಣಗಳಿಗಾಗಿ 5,437 ಅರ್ಜಿಗಳನ್ನು ತಿರಸ್ಕರಿಸಿದ್ದಾರೆ. 5,520 ಪಡಿತರ ಚೀಟಿಗಳನ್ನು ಮುದ್ರಣಕ್ಕೆ ಕಳುಹಿಸಲಾಗಿದೆ ಎಂದು ವಿವರಿಸಿದರು.

ಇನ್ನು ಇವೆ ಅಕ್ರಮ ಪಡಿತರ (ಬಿಪಿಎಲ್) ಚೀಟಿಗಳು: ಪ್ರಸ್ತುತ ಚಾಲ್ತಿಯಲ್ಲಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಪರಿಶೀಲಿಸಿದರೆ, ಮತ್ತಷ್ಟು ಪಡಿತರ ಚೀಟಿಗಳು ರದ್ದಾಗುವ ಸಂಭವವಿದೆ. ಆದರೆ, ರಾಜಕೀಯ ವ್ಯಕ್ತಿಗಳ ಮಧ್ಯ ಪ್ರವೇಶದಿಂದ ಅಕ್ರಮ ಪಡಿತರ ಚೀಟಿದಾರರು ತಪ್ಪಿಸಿಕೊಳ್ಳುತ್ತಿದ್ದಾರೆ. ಇದರಿಂದ ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಸರ್ಕಾರಿ ನ್ಯಾಯಬೆಲೆ ಅಂಗಡಿ ಮಾಲೀಕರೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ರಾಜ್ಯ, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ

ತಿ.ನರಸೀಪುರ, ಮೇ 28– ರಾಜ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ನೂತನ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಬೆಂಗಳೂರಿನಲ್ಲಿ ತಿ.ನರಸೀಪುರದ ಕಾಂಗ್ರೆಸ್ ಮುಖಂಡರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ದುರಾಡಳಿತದಿಂದ ಬೇಸತ್ತ ರಾಜ್ಯದ ಜನತೆ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ನೀಡುವ ಮೂಲಕ ಬಡವರ ಹಾಗೂ ಅಭಿವೃದ್ಧಿ ಪರ ಸರ್ಕಾರ ರಚನೆಗೆ ಕಾರಣರಾಗಿದ್ದಾರೆ. ಹೀಗಾಗಿ ರಾಜ್ಯದ ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ನಮ್ಮ ಸರ್ಕಾರ ಕಾರ್ಯ ನಿರ್ವಹಿಸಲಿದೆ ಎಂದರು.

ಕಾಂಗ್ರೆಸ್ ಪಕ್ಷ ಚುನಾವಣೆಗೂ ಮುನ್ನಾ ನೀಡಿದ್ದ 5 ಗ್ಯಾರಂಟಿಗಳಿಗೆ ಸಚಿವ ಸಂಪುಟದಲ್ಲಿ ಈಗಾಗಲೇ ಒಪ್ಪಿಗೆ ದೊರೆತಿದೆ ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಎಲ್ಲಾ ಗ್ಯಾರಂಟಿಗಳು ಹಾಗೂ ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಎಲ್ಲಾ ಭರವಸೆಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದ ಸರ್ಕಾರ ಎಂಬುದನ್ನು ಸಾಬೀತು ಪಡಿಸಲಾಗುವುದು ಎಂದರು.

ಈ ಹಿಂದೆ ನಾನು ಸಚಿವನಾಗಿದ್ದ ವೇಳೆ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ ಈ ಬಾರಿಯೂ ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸಿದ್ದೇನೆ. ಅವುಗಳನ್ನು ಹಂತ ಹಂತವಾಗಿ



ಕಾರ್ಯ ರೂಪಕ್ಕೆ ತರುವ ಮೂಲಕ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದ ಮತದಾರರು ನನಗೆ ಅತ್ಯಧಿಕ ಮತ ನೀಡಿ ಜಯಶೀಲರನ್ನಾಗಿಸಿದ್ದೀರಿ. ಹೀಗಾಗಿ ನಿಮ್ಮ ಪ್ರೀತಿ, ವಿಶ್ವಾಸಕ್ಕೆ ಧಕ್ಕೆ ಬಾರದ ಹಾಗೇ ಕಾರ್ಯ ನಿರ್ವಹಿಸುತ್ತೇನೆ. ಈ ಹಿಂದೆ ಸಚಿವನಾಗಿದ್ದ ವೇಳೆ ಜವಾಬ್ದಾರಿ ಹೆಚ್ಚಾಗಿದ್ದರಿಂದ ಒತ್ತಡಕ್ಕೊಳಗಾಗಿ ಕ್ಷೇತ್ರದ ಜನತೆಯ ಕಷ್ಟ ಸುಖಗಳಿಗೆ ಸ್ಪಂದಿಸಲು ಸಾಧ್ಯವಾಗಿರಲಿಲ್ಲ. ಇದನ್ನೇ ಕೆಲವರು ತಪ್ಪಾಗಿ ಅರ್ಥೈಸಿದ್ದರು. ಹೀಗಾಗಿ ಈ ಬಾರಿ ತಿ.ನರಸೀಪುರ ಜನತೆಯ ಕಷ್ಟ ಸುಖಗಳಿಗೆ ಸ್ಪಂದಿಸುವ ಮೂಲಕ ಸರ್ಕಾರದ ಸೌಲಭ್ಯಗಳನ್ನು ತಲುಪಿಸುತ್ತೇನೆ. ಇದಕ್ಕೆ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ಕ್ಷೇತ್ರದ ಎಲ್ಲಾ ಸಮುದಾಯದವರು ಕಾಂಗ್ರೆಸ್ ಬೆಂಬಲಿಸುವ ಮೂಲಕ ಡಾ.ಹೆಚ್.ಸಿ. ಮಹದೇವಪ್ಪನವರ ಗೆಲುವಿಗೆ ಕಾರಣರಾಗಿದ್ದೀರಿ. ಹೀಗಾಗಿ ಮತದಾರರು ಸೇರಿದಂತೆ ಪಕ್ಷಕ್ಕಾಗಿ ದುಡಿದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

> ಮುಂಬರುವ ಜಿಪಂ, ತಾಪಂ ಹಾಗೂ ಲೋಕಸಭಾ ಚುನಾವಣೆಗೆ ಪಕ್ಷವನ್ನು ಮತ್ತಷ್ಟು ಬಲಗೊಳಿಸುವ ಮೂಲಕ ಚುನಾವಣೆ ಗೆಲ್ಲಲು ಕಾರ್ಯಕರ್ತರು ಶ್ರಮಿಸಬೇಕು. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು ಮುಂದಾಗಬೇಕು.
> –ಡಾ.ಹೆಚ್.ಸಿ.ಮಹದೇವಪ್ಪ, ಸಚಿವ.

ಈ ಹಿಂದೆ ಮಹದೇವಪ್ಪನವರು ಲೋಕೋಪಯೋಗಿ ಸಚಿವರಾಗಿದ್ದ ವೇಳೆ ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿಗೊಳಿಸಿದ್ದರು. ಈ ಬಾರಿ ಅವರು ಮತ್ತಷ್ಟು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೂಲಕ ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿಯಾಗಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥ್‌ಗೌಡ, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜಿ.ವೆಂಕಟೇಶ್, ಪಾರುಪತ್ತೇಗಾರ್ ಎಂ.ಬಿ. ಸಾಗರ್, ಯುವ ಮುಖಂಡ ಸಂದೇಶ್ ಸ್ವಾಮಿನಾಥ್, ಡೈರಿ ಕಾರ್ಯದರ್ಶಿ ನಾಗೇಂದ್ರ, ಮೂಗೂರು ಕುಮಾರಸ್ವಾಮಿ, ಅಂದಾನಿಗೌಡ, ಸುಂದರನಾಯಕ, ಮಹದೇವಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಹಜ್ ಯಾತ್ರಿಗಳಿಗೆ ತರಬೇತಿ

ಹುಣಸೂರು, ಮೇ 28– ಹಜ್ ಯಾತ್ರೆಗೆ ತೆರಳುವ ಯಾತ್ರಿಗಳಿಗೆ ಮೇ 31ರಂದು ಬೆಳಗ್ಗೆ 10ರಿಂದ 5 ಗಂಟೆವರೆಗೆ ನಗರದ ಶಬ್ಬೀರ್ ಬಡಾವಣೆಯಲ್ಲಿರುವ ಶಾದಿ ಮಹಲ್‌ನಲ್ಲಿ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ವೇಳೆ ಮುಖ್ಯ ಭಾಷಣಕಾರರಾಗಿ ಅಲ್ಹಜ್ ಸೈಯದ್, ಅಬ್ದುಲ್ ಘನಿ ಅತ್ತಾರಿ, ಶಾಆಲಂ ಭಾಗವಹಿಸಲಿದ್ದಾರೆ. ತರಬೇತಿಯಲ್ಲಿ ಭಾಗವಹಿಸುವವರಿಗೆ ಊಟದ ವ್ಯವಸ್ಥೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ನೂತನ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು, ಸದಸ್ಯ ಎಲ್.ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ, ಕಿರಗಸೂರು ಗ್ರಾಪಂ ಉಪಾಧ್ಯಕ್ಷ ನಾಗರಾಜು, ಮಾಜಿ ಸದಸ್ಯ ಕುಮಾರ್ ಅಭಿನಂದಿಸಿದರು.



ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆ.ವೆಂಕಟೇಶ್ ಅವರನ್ನು ಪಿರಿಯಾಪಟ್ಟಣ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಹೆಚ್.ಡಿ.ಗಣೇಶ್, ಹಿರಿಯ ವಕೀಲ ಬಿ.ವಿ.ಜವರೇಗೌಡ, ಆವರ್ತಿ ಗ್ರಾಪಂ ಸದಸ್ಯ ಎಂ.ಬಿ.ಶಿವಕುಮಾರ್ ಅಭಿನಂದಿಸಿದರು.



ನೂತನ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ತಿ.ನರಸೀಪುರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೂಗೂರು ಎಂ.ಡಿ.ಬಸವರಾಜು ಅಭಿನಂದಿಸಿದರು. ಈ ವೇಳೆ ಮುಖಂಡರಾದ ಸ್ವಾಮಿನಾಥ್, ಸಾಗರ್, ಕುಮಾರಸ್ವಾಮಿ, ಡೇರಿ ನಾಗೇಂದ್ರ, ವೆಂಕಟೇಶ್ ಇತರರಿದ್ದರು.

ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನಕ್ಕೆ ಒತ್ತಾಯಿಸಿ ಪ್ರತಿಭಟನೆ



ನಂಜನಗೂಡು, ಮೇ 28– ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ತಾಲೂಕಿನ ಗೋಳೂರು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಮುಖಂಡ ಮಹದೇವಸ್ವಾಮಿ ಮಾತನಾಡಿ, ರಾಜ್ಯದಲ್ಲಿ 40 ಲಕ್ಷ ಉಪ್ಪಾರ ಜನಾಂಗದವರಿದ್ದು, ಚುನಾವಣೆಯಲ್ಲಿ ಒಮ್ಮತದಿಂದ ಬೆಂಬಲಿಸಿದ್ದರಿಂದ ಕಾಂಗ್ರೆಸ್ ಬಹುಮತ ಪಡೆಯಲು ಸಾಧ್ಯವಾಗಿದೆ. ಶಾಸಕ ಪುಟ್ಟರಂಗಶೆಟ್ಟಿ ಉಪ್ಪಾರ ಸಮುದಾಯದ ರಾಜ್ಯಾಧ್ಯಕ್ಷರಾಗಿ ಸಮಾಜವನ್ನು ಒಗ್ಗೂಡಿಸಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕಿಸುವಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಈ ಬಾರಿ ಅವರು ಸಚಿವರಾಗುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಕೊನೆ ಗಳಿಗೆಯಲ್ಲಿ ಅವರಿಗೆ ಸಚಿವ ಸ್ಥಾನ ನೀಡದೆ ವಂಚಿಸುತ್ತಿರುವುದು ಖಂಡನೀಯ. ಮುಂಬರುವ ತಾಪಂ ಮತ್ತು ಜಿಪಂ, ಲೋಕಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು, ಸಮುದಾಯದ ನಾಯಕರಾದ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸುತ್ತೇನೆ ಎಂದರು.

ಉಪ್ಪಾರ ಸಮಯುದಾಯದ ಮಾಜಿ ಅಧ್ಯಕ್ಷ ಕೃಷ್ಣ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದುಳಿದ ವರ್ಗದ ನಾಯಕರೆಂದು ಭಾವಿಸಿದ್ದೆವು. ಆದರೆ ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷ ಬೆಂಬಲಿಸಿರುವ ಉಪ್ಪಾರ ಜನಾಂಗಕ್ಕೆ ಈ ಬಾರಿ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡದಿರುವುದು ಖಂಡನೀಯ. ಕೂಡಲೇ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿಕೆ.ಶಿವಕುಮಾರ್ ಕ್ರಮವಹಿಸಿ ಪುಟ್ಟರಂಗಶೆಟ್ಟಿಯವರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸುತ್ತೇವೆ ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ಮುದ್ದುಮಾದಶೆಟ್ಟಿ, ಚಿನ್ನುಕೃಷ್ಣ, ಮಣಿಕಂಠ, ನಂಜಪ್ಪ, ಚಿಕ್ಕಣ್ಣ, ರಮೇಶ್, ರವಿ, ಮಂಜುನಾಥ್, ಕುಮಾರ್, ರಾಮು, ನಂಜುಂಡಸ್ವಾಮಿ, ಗಣೇಶ್, ಅರುಣ್ ಸೇರಿದಂತೆ ಇತರರಿದ್ದರು.

ಕಾಂಗ್ರೆಸ್‌ನಿಂದ ಸಂವಿಧಾನದ ಆಶಯಗಳಿಗೆ ತಕ್ಕ ಆಡಳಿತ

ಅರಣ್ಯ ಸಚಿವ ಈಶ್ವರ್ ಖಂಡ್ರೆ



ವರುಣ, ಮೇ 28– ರಾಜ್ಯದ ಕಾಂಗ್ರೆಸ್ ಸರ್ಕಾರ ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಆಶಯಗಳಿಗೆ ತಕ್ಕ ಆಡಳಿತ ನೀಡಲಿದೆ ಎಂದು ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಹಾಗೂ ಇತರ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ನೀಡುವ ಮೂಲಕ ಜನರು ರಾಜ್ಯದಲ್ಲಿ ಬಿಜೆಪಿ ದುರಾಡಳಿತ ಕೊನೆಗಾಣಿಸಿದ್ದಾರೆ. ಆ ಮೂಲಕ ರಾಜ್ಯದಲ್ಲಿ ಬಡವರು ಹಾಗೂ ರೈತಪರ ಸರ್ಕಾರ ಅಧಿಕಾರಕ್ಕೆ ತಂದು ಮುಖ್ಯಮಂತ್ರಿ ಸಿದ್ದ ರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ನೀಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದ ಅವರು, ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸಲಿದೆ ಎಂದರು.

ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಮಾತನಾಡಿ, ಮುಂಬರುವ ಜಿಪಂ ಮತ್ತು ತಾಪಂ ಹಾಗೂ ಲೋಕಸಭೆ ಚುನಾವಣೆಗೆ ಕಾರ್ಯಕರ್ತರು ಈಗಿನಿಂದಲೇ ಸಜ್ಜಾಗಬೇಕು. ಚುನಾವಣೆ ಪೂರ್ವ ಘೋಷಿಸಿದ್ದ 5 ಗ್ಯಾರಂಟಿಗಳಿಗೆ ಮುಖ್ಯಮಂತ್ರಿಯಾಗುತ್ತಿದ್ದಂತೆ ಸಿದ್ದರಾಮಯ್ಯ ಅವರು ಒಪ್ಪಿಗೆ ನೀಡುವ ಮೂಲಕ ನಮ್ಮದು ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ. ರಾಜ್ಯದ ಹಣಕಾಸಿನ ಸತ್ಯಾಸತ್ಯತೆ ಜನರ ಮುಂದೆ ಇಟ್ಟಿದ್ದಾರೆ. ಮುಂದಿನ 5 ವರ್ಷಗಳ ಕಾಲ ರಾಜ್ಯದ ಜನರು ಭ್ರಷ್ಟಾಚಾರ ಮುಕ್ತ ಸರ್ಕಾರ ನೋಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಮತ್ತು ಆಡಳಿತದಲ್ಲಿ ದಕ್ಷತೆ ಕಾಯ್ದುಕೊಳ್ಳುವುದು ಖಚಿತ ಎಂದರು. ಈ ವೇಳೆ ವರುಣ ಕ್ಷೇತ್ರದ ಮುಖಂಡರಾದ ಶಿವಕುಮಾರ್, ಮಧುಕುಮಾರ್, ಪೃಥ್ವಿ ಇತರರಿದ್ದರು.

ಬಸವರಾಜುರನ್ನು ಎಂಎಲ್‌ಸಿ ಮಾಡಲು ಆಗ್ರಹ



ನಂಜನಗೂಡು, ಮೇ 28– ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡುವಂತೆ ಅವರ ಅಭಿಮಾನಿಗಳು ಆಗ್ರಹಿಸಿದರು.

ನಗರದ ಗೌರಿಘಟ್ಟದ ಬೀದಿಯ ನಾಯಕರ ಭವನದಲ್ಲಿ ನಡೆದ ಎಸ್.ಸಿ.ಬಸವರಾಜು ಅಭಿಮಾನಿ ಬಳಗದ ಸಭೆಯಲ್ಲಿ ನಾಯಕ ಸಮಾಜದ ಮುಖಂಡ ನಾಗರಾಜು ಮಾತನಾಡಿ, ಎಸ್.ಸಿ.ಬಸವರಾಜು ಅವರು ಕಳೆದ 30 ವರ್ಷಗಳಿಂದ ಜಿಪಂ ಅಧ್ಯಕ್ಷರಾಗಿ, ವಾಲ್ಮೀಕಿ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಜೊತೆಗೆ ಕೆಪಿಸಿಸಿ ಕಾರ್ಯದರ್ಶಿಯಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಪರಿಶ್ರಮದಿಂದಾಗಿ ಈ ಭಾಗದಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲು ಸಾಧ್ಯವಾಗಿದೆ. ಡಿ.ಟಿ.ಜಯಕುಮಾರ್ ಬಳಿಕ ನಾಯಕ ಜನಾಂಗಕ್ಕೆ ಯಾವುದೇ ರಾಜಕೀಯ ಸ್ಥಾನಮಾನ ಸಿಕ್ಕಿಲ್ಲ. ಆದ್ದರಿಂದ ಎಸ್.ಸಿ. ಬಸವರಾಜು ಅವರನ್ನು ಕಾಂಗ್ರೆಸ್ ಪಕ್ಷ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಬೇಕು ಎಂದು ಆಗ್ರಹಿಸಿದರು.

ಮುಖಂಡ ರವಿಕುಮಾರ್ ಮಾತನಾಡಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡುವಂತೆ ಆಗ್ರಹಿಸಿ ನಾಯಕ ಜನಾಂಗದ ಸಾವಿರಾರು ಮುಖಂಡರು ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಒತ್ತಾಯಿಸಲಾಗುವುದು ಎಂದರು.

ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿ

ಎನ್‌ಎಸ್‌ಎಸ್ ಶಿಬಿರದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸಲಹೆ

ಹುಣಸೂರು, ಮೇ 28– ವಿದ್ಯಾರ್ಥಿಗಳು ಉತ್ತಮ ಸಮಾಜ ನಿರ್ಮಾಣದ ಜೊತೆಗೆ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವುದು ಅವಶ್ಯಕ. ಈ ನಿಟ್ಟಿನಲ್ಲಿ ಎನ್‌ಎಸ್‌ಎಸ್ ಸ್ವಯಂ ಸೇವಕರು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸಲಹೆ ನೀಡಿದರು.

ತಾಲೂಕಿನ ನಲ್ಲೂರುಪಾಲದಲ್ಲಿ ಹುಣಸೂರು ಮಹಿಳಾ ಸರ್ಕಾರಿ ಪದವಿ ಕಾಲೇಜು ವತಿಯಿಂದ ಒಂದು ವಾರಗಳ ಕಾಲ ಆಯೋಜಿಸಿರುವ ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರದಲ್ಲಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಧ್ಯೇಯವಾದ ಪರಿಸರ ಸಂರಕ್ಷಣೆಗಾಗಿ ಯುವ ಜನತೆ ಎಂಬುದು ಪ್ರಸ್ತುತವಾಗಿದೆ. ವಿದ್ಯಾರ್ಥಿಗಳಿಗೆ ಪರಿಸರ ಪ್ರೇಮಿಗಳಾದ ಸಾಲುಮರದ ತಿಮ್ಮಕ್ಕ, ತುಳಸೀಗೌಡ, ಬೊಮ್ಮನಗೌಡ, ಚಾಮರಾಜನಗರದ ವೆಂಕಟೇಶ್, ಕರಿಘಟ್ಟದ ರಮೇಶ್, ಮೈಸೂರಿನ ಗುರುರಾಜ್ ಅವರುಗಳು ಆದರ್ಶವಾಗಬೇಕು. ಶ್ರಮದಾನ, ಸಾಂಸ್ಕೃತಿಕ ಕಾರ್ಯಕ್ರಮದ ಜೊತೆಗೆ ಸಸಿ ಬೆಳೆಸುವುದು ಎಷ್ಟು ಮುಖ್ಯ ಎಂಬುದು ತಿಳಿಯಿರಿ. ನಾಗರಹೊಳೆ, ಬಂಡೀಪುರ ಉದ್ಯಾನವನ, ಬ್ರಹ್ಮಗಿರಿ ಬೆಟ್ಟ, ಪಶ್ಚಿಮಘಟ್ಟ ಪರಿಸರ ಸಂರಕ್ಷಣೆಗೆ ಪೂರಕವಾಗಿದ್ದು, ಇವುಗಳ ಬಗ್ಗೆ ತಿಳಿದುಕೊಳ್ಳುವಂತೆ ತಿಳಿಸಿದರು.

ವ್ಯಕ್ತಿತ್ವ ವಿಕಸನ, ನಾಯಕತ್ವ: ಎನ್‌ಎಸ್‌ಎಸ್, ವಿದ್ಯಾರ್ಥಿಗಳಲ್ಲಿ ಜಾತ್ಯತೀತ ಮನೋಭಾವ ಬೆಳೆಸಲಿದೆ. ಭ್ರಾತೃತ್ವ ಏಕತೆ, ಸಮಗ್ರತೆ, ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಿದ್ದು, ನಾಯಕತ್ವ ಗುಣ ಬೆಳೆಸಲಿದೆ. ವೈಜ್ಞಾನಿಕತೆ–ವೈಚಾರಿಕತೆ ಬೆಳೆಸಿಕೊಳ್ಳಲು ಹಾಗೂ



ಸರ್ಕಾರದ ಯೋಜನೆ, ಸವಲತ್ತುಗಳನ್ನು ಜನರಿಗೆ ತಿಳಿಸಲು ಸಹಕಾರಿಯಾಗಿದೆ ಎಂದರು. ಇದು ಸ್ಪರ್ಧಾತ್ಮಕ ಯುಗ. ವಿದ್ಯೆ ಮುಂದೆ ಯಾವುದು ಇಲ್ಲ. ರಾಜ್ಯದಲ್ಲಿ ಈ ಬಾರಿ ಅನೇಕರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ಅವರಲ್ಲಿ ಬಹುತೇಕರು ಬಡತನದ ಹಿನ್ನೆಲೆಯುಳ್ಳವರು. ಇದನ್ನರಿತು ಕಡ್ಡಾಯವಾಗಿ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಿ, ದೊಡ್ಡ ದೊಡ್ಡ ಕನಸುಗಳನ್ನು ಕಟ್ಟಿಕೊಳ್ಳಿ. ನಮಗೆ ಅಂಬೇಡ್ಕರ್ ಅವರ ಸಂವಿಧಾನ ಧಾರ್ಮಿಕ, ಶೈಕ್ಷಣಿಕ ಸ್ವಾತಂತ್ರ್ಯ ನೀಡಿದೆ. ಇದನ್ನು ಬಳಸಿಕೊಂಡು ಮುನ್ನಡೆಯಿರಿ. ದೇಶದ ಪ್ರಗತಿಗೆ ಕಾರಣರಾಗಿ ಎಂದರು.

ಶಿಬಿರ ಉದ್ಘಾಟಿಸಿ ಮಾತನಾಡಿದ ಉಮ್ಮತ್ತೂರು ಗ್ರಾಪಂ ಅಧ್ಯಕ್ಷ ರಾಮಕೃಷ್ಣ, ಗ್ರಾಮದಲ್ಲಿ ಅರಿವು ಮೂಡಿಸುವ ಮೂಲಕ ಸ್ವಚ್ಛತೆ ಹಾಗೂ ಸರ್ಕಾರದ ಯೋಜನೆಗಳ ಬಗ್ಗೆ ಗ್ರಾಮಸ್ಥರಿಗೆ ತಿಳಿಸಿಕೊಡಿ ಎಂದು ಮನವಿ ಮಾಡಿದ ಅವರು, ಶಿಬಿರಕ್ಕೆ ಬೇಕಾದ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದರು.

ಪತ್ರಕರ್ತ ಧರ್ಮಾಪುರ ನಾರಾಯಣ್ ಮಾತನಾಡಿ, ವಿದ್ಯಾರ್ಥಿಗಳಿಗೆ ಸ್ವಾವಲಂಬಿ ಬದುಕನ್ನು ಕಟ್ಟಿ ಕೊಡುವ, ಸೇವಾ ಮನೋಭಾವ ಬೆಳೆಸುವ ಎನ್‌ಎಸ್‌ಎಸ್ ಶೈಕ್ಷಣಿಕ ಪ್ರಗತಿಗೂ ಪೂರಕವಾಗಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಪುಟ್ಟಶೆಟ್ಟಿ ಶಿಬಿರದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಎನ್‌ಎಸ್‌ಎಸ್ ಸಲಹಾ ಸಮಿತಿ ಸದಸ್ಯ ಹನಗೋಡು ನಟರಾಜ್, ಶಿಬಿರಾಧಿಕಾರಿ ಡಾ.ಹೆಚ್.ಆರ್.ವಿಶ್ವನಾಥ್, ಸಹ ಶಿಬಿರಾಧಿಕಾರಿ ಡಾ.ಹೆಚ್.ಎಲ್.ಶೋಭಾ ಮಾತನಾಡಿದರು. ಉಮ್ಮತ್ತೂರು ಸೊಸೈಟಿ ಅಧ್ಯಕ್ಷ ಯ.ಭಾಸ್ಕರ್, ನಿರ್ದೇಶಕ ಮಂಜುನಾಥ್, ಗ್ರಾಪಂ ಸದಸ್ಯರಾದ ಶೇಖರ್, ನಂಜುಂಡಸ್ವಾಮಿ, ಸೋನಿ, ರೈತ ಸಂಘದ ಅಧ್ಯಕ್ಷ ವಾಸು ಸೇರಿದಂತೆ ಅನೇಕರಿದ್ದರು.

ಹಾವು ಕಚ್ಚಿ ವ್ಯಕ್ತಿ ಸಾವು



ಮಲ್ಕುಂಡಿ, ಮೇ 28– ಹಾವು ಕಚ್ಚಿ ವ್ಯಕ್ತಿ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕಿನ ತರಗನಹಳ್ಳಿ ನಡೆದಿದೆ.

ಗ್ರಾಮದ ನಿವಾಸಿ ಮಹೇಶ್(35) ಸಾವನ್ನಪ್ಪಿದವರು. ಈತ ಶನಿವಾರ ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹಾವು ಕಚ್ಚಿದೆ. ತಕ್ಷಣ ಮಹೇಶ್ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು.

ಇಂದು ವಾರ್ಷಿಕೋತ್ಸವ

ಬೆಟ್ಟದಪುರ, ಮೇ 28– ಇಲ್ಲಿಗೆ ಸಮೀಪದ ಅತ್ತಿಗೋಡು ಗ್ರಾಮದಲ್ಲಿ ಮೇ 29ರಂದು ಈಶ್ವರ ದೇವಾಲಯದ ಮೊದಲ ವಾರ್ಷಿಕೋತ್ಸವ ನಡೆಯಲಿದೆ. ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ ಮುಂಜಾನೆಯೇ ದೇವರಿಗೆ ಅಭಿಷೇಕ, ವಿಶೇಷ ಪೂಜೆ ನೆರವೇರಿಸಿ ಹೋಮ ನಡೆಸಲಾಗುವುದು ಎಂದು ಅರ್ಚಕ ಅಮರಯ್ಯ ಶಾಸ್ತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾದಕ ವಸ್ತುಗಳ ಕಡಿವಾಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ

ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್

ಹೆಚ್.ಡಿ.ಕೋಟೆ, ಮೇ 28– ತಾಲೂಕಿನಲ್ಲಿ ಮಾದಕ ವಸ್ತುಗಳ ಕಡಿವಾಣಕ್ಕೆ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಭಾನುವಾರ ನಡೆದ ಪರಿಶಿಷ್ಟ ಜಾತಿ ಮತ್ತು ವರ್ಗದ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೊರತುಪಡಿಸಿ ಕಳೆದ 3 ತಿಂಗಳಿಂದ ಯಾವುದೇ ಅಟ್ರಾಸಿಟಿ ಪ್ರಕರಣ ದಾಖಲಾಗಿಲ್ಲ. ಬಹುತೇಕ ಜಮೀನಿಗೆ ಸಂಬಂಧಿಸಿದ ದೂರುಗಳು ದಾಖಲಾಗುತ್ತಿದ್ದು, ಬಗೆಹರಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಇದು ಸಿವಿಲ್ ಪ್ರಕರಣ ಆದ ಕಾರಣ ನಾವು ಮಧ್ಯ ಪ್ರವೇಶಿಸಲು ಸಾಧ್ಯವಾಗುವುದಿಲ್ಲ ಬದಲಿಗೆ ಗಲಾಟೆ ಮಾಡಿಕೊಳ್ಳಬೇಡಿ ಎಂದಷ್ಟೇ ಹೇಳಬಹುದು. ನಮಗೆ ಸ್ವತಂತ್ರವಾಗಿ ತೀರ್ಮಾನ ಕೈಗೊಳ್ಳಲು ಅವಕಾಶ ನೀಡಿದರೆ ನಿಜವಾಗಿ ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ಕೊಡಿಸಲು ಸಾಧ್ಯ ಎಂದು ತಿಳಿಸಿದರು.



ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ ಮಾತನಾಡಿ, ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಅತೀ ಹೆಚ್ಚು ಗಾಂಜಾ ಸೇವನೆ ಹಾಗೂ ಮಾರಾಟ ಪ್ರಕರಣ ಪ್ರಕರಣ ಕಂಡು ಬಂದಿದ್ದು, ಇದಕ್ಕೆ ಕಡಿವಾಣ ಹಾಕಬೇಕು. ಪಟ್ಟಣದ ಕ್ರೀಡಾಂಗಣದಲ್ಲಿ ಗಾಂಜಾ ಸೇದುವವರ ಸಂಖ್ಯೆ ಜಾಸ್ತಿಯಾಗಿದೆ. ಇದರಿಂದ ಹೆಣ್ಣು ಮಕ್ಕಳು ಹಾಗೂ ಸಾರ್ವಜನಿಕರು ತಿರುಗಾಡಲು ಕಷ್ಟವಾಗಿದೆ ಹ್ಯಾಂಡ್‌ಪೋಸ್ಟ್‌ನ ವಸತಿ ಗೃಹಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದೆ. ಈ ಬಗ್ಗೆ ಮಾಹಿತಿ ನೀಡಿದವರ ಹೆಸರನ್ನು ಗುಪ್ತವಾಗಿಟ್ಟು ಅಕ್ರಮ ಚಟುವಟಿಕೆಗಳಿಗೆ ಪೊಲೀಸ್ ಅಧಿಕಾರಿಗಳು ಕಡಿವಾಣ ಹಾಕಬೇಕು ಎಂದು ಮನವಿ ಮಾಡಿದರು.

ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆ ಚಟಕ್ಕೆ ಬಲಿಯಾಗುತ್ತಿದ್ದಾರೆ. ಹೀಗಾಗಿ ಪೊಲೀಸ್ ಇಲಾಖೆಯಿಂದ ಕಾಲೇಜುಗಳಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಮಾತನಾಡಿ, ಅಬಕಾರಿ ಇಲಾಖೆ ಸಹಕಾರದೊಂದಿಗೆ ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಸಭೆಯಲ್ಲಿದ್ದ ಬಹುತೇಕ ಮುಖಂಡರು ಇದುವರೆಗೆ ಎಷ್ಟು ಮದ್ಯದ ಅಂಗಡಿ ಮಾಲೀಕರ ಮೇಲೆ ಪ್ರಕರಣ ದಾಖಲಿಸಿದ್ದೀರಾ, ಎಂದು ಪ್ರಶ್ನಿಸಿದರಲ್ಲದೇ ವಾಹನಗಳಲ್ಲಿ ಹಳ್ಳಿ ಹಳ್ಳಿಗೆ ಮದ್ಯ ಸರಬರಾಜು ಆಗುತ್ತಿದೆ. ಹೀಗಾಗಿ ಅವರ ಮೇಲೆ ಪ್ರಕರಣ ದಾಖಲಿಸಿದರೇ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಸಾಧ್ಯವಾಗುತ್ತದೆ ಎಂದರು.

ಸಭೆಯಲ್ಲಿ ಎಸ್‌ಐ ರಸುಲಾ ಪಾಗವಾಲೆ, ಪ್ರೇಮ್, ಸೋಮೇಶ್, ಪರಶಿವಮೂರ್ತಿ, ಶಿವಯ್ಯ, ಮುದ್ದಮಲ್ಲಯ್ಯ, ಬಸವರಾಜು, ಕೃಷ್ಣ, ಕುಮಾರ, ರಾಜ ನಾಯಕ, ಶಿವರಾಜು, ಮಹದೇವು ಇದ್ದರು.

'ಮೈಸೂರು ಮಿತ್ರ' ವರದಿಯ ಫಲಶೃತಿ

ಹೊಗೆ ಸೂಸುತ್ತಿದ್ದ ವಿದ್ಯುತ್ ಕೇಬಲ್ ತೆರವು ; ಆತಂಕ ದೂರ

ಮೈಸೂರು, ಮೇ 28(ಪಿಎಂ)– ಮೈಸೂರಿನ ದೇವರಾಜ ಅರಸು ರಸ್ತೆಯ ಫುಟ್‌ಪಾತ್‌ನಲ್ಲಿ ಹಾನಿಗೊಳಗಾಗಿ ಹೊಗೆ ಸೂಸುವ ಮೂಲಕ ಭಯಭೀತಿ ಸೃಷ್ಟಿಸಿದ್ದ ವಿದ್ಯುತ್ ಕೇಬಲ್ ಅನ್ನು ಸೆಸ್ಕ್ ವತಿಯಿಂದ ಭಾನುವಾರ ಬೆಳಗ್ಗೆಯೇ ತೆರವುಗೊಳಿಸಲಾಗಿದ್ದು, ಸ್ಥಳೀಯ ಮಳಿಗೆಗಳ ಮಾಲೀಕರು ಹಾಗೂ ಕಾರ್ಮಿಕರ ಆತಂಕ ದೂರವಾಗಿದೆ.

ಈ ಸಮಸ್ಯೆ ಸಂಬಂಧ 'ಸದಾ ಜನ ದಟ್ಟಣೆಯ, ಪ್ರಮುಖ ವಾಣಿಜ್ಯ ಕೇಂದ್ರ ದೇವರಾಜ ಅರಸು ರಸ್ತೆಯಲ್ಲಿ ಕಾಡುತ್ತಿದೆ ಕರೆಂಟ್ ಭೂತ!' ಶೀರ್ಷಿಕೆಯಡಿ 'ಮೈಸೂರು ಮಿತ್ರ'ನ ಮೇ 28ರ ಸಂಚಿಕೆಯ 3ನೇ ಪುಟದಲ್ಲಿ ವರದಿ ಪ್ರಕಟಿಸಲಾಗಿತ್ತು. ಇದರಿಂದ ಎಚ್ಚೆತ್ತುಕೊಂಡ ಸೆಸ್ಕ್ ತಕ್ಷಣ ಕ್ರಮ ವಹಿಸಿದೆ. ಸೆಸ್ಕ್ ಅಧಿಕಾರಿ ಮತ್ತು ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಧಾವಿಸಿ ಸಮಸ್ಯೆ ಪರಿಹರಿಸಿದ್ದಾರೆ.

ದೇವರಾಜ ಅರಸು ರಸ್ತೆಯ ಟಾರ್ಪಾಲಿನ್ ಮಳಿಗೆಯೊಂದರ ಮುಂಭಾಗದಲ್ಲಿ ತಲೆದೋರಿದ್ದ ಈ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ಮಳೆ ಬಂದ ಸಂದರ್ಭದಲ್ಲಿ ಫುಟ್‌ಪಾತ್‌ನ ಇಂಟರ್‌ಲಾಕ್ ಟೈಲ್ಸ್ ಒಳಗಿನಿಂದ ಹೊಗೆ ಸೂಸುತ್ತಿದ್ದದನ್ನು ಕಂಡ ಇಲ್ಲಿನ ಮಳಿಗೆ ಮಾಲೀಕರು, ಕಾರ್ಮಿಕರು ಭಯಭೀತಿಗೊಂಡಿದ್ದರು. ಒಳಗೆ ವಿದ್ಯುತ್ ಕೇಬಲ್ ಇರುವುದನ್ನು ಊಹಿಸಿದ್ದ ಇವರು, ಯಾವುದೇ ಸಂದರ್ಭದಲ್ಲಿ ಭಾರೀ ಅನಾಹುತ ಆಗಬಹುದೆಂದು ಆತಂಕಕ್ಕೆ ಒಳಗಾಗಿದ್ದರು.

ದೇವರಾಜ ಅರಸು ರಸ್ತೆ ವ್ಯಾಪಾರಿಗಳೀಗ ನಿರಾಳ



ಸೆಸ್ಕ್ ಎನ್‌ಆರ್ ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಆರ್.ಪೂರ್ಣಚಂದ್ರ ತೇಜಸ್ವಿ ನೇತೃತ್ವದಲ್ಲಿ ಸಿಬ್ಬಂದಿ ಇಂದು ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಸಮಸ್ಯೆ ಇದ್ದ ಕೇಬಲ್ ಅನ್ನು ಗುರುತಿಸಿ ತೆರವುಗೊಳಿಸುವ ಮೂಲಕ ಆತಂಕ ನಿವಾರಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಆರ್.ಪೂರ್ಣಚಂದ್ರ ತೇಜಸ್ವಿ, ವಿದ್ಯುತ್ ಕೇಬಲ್‌ನ ಮೇಲ್ಮೈಗೆ ಹಾನಿಯಾಗಿದ್ದ ಹಿನ್ನೆಲೆಯಲ್ಲಿ ಶಾಖ ಉಂಟಾಗಿ ಮಳೆ ಬಂದಾಗ ತೇವಾಂಶದಿಂದ ಹೊಗೆ ಬರುತ್ತಿತ್ತು. ಇದು ಅಂತಹ ಅಪಾಯಕಾರಿ ಆಗಿರಲಿಲ್ಲ. ಇದೀಗ ಕೇಬಲ್ ತೆರವುಗೊಳಿಸಿ, ಸಮಸ್ಯೆ ಬಗೆಹರಿಸಲಾಗಿದೆ ಎಂದು ಹೇಳಿದರು.

ಸಮಸ್ಯೆ ಉಂಟಾಗಿದ್ದ ಕೇಬಲ್ ಸೆಸ್ಕ್‌ನದ್ದಲ್ಲ. ಇಲ್ಲಿನ ಮಳಿಗೆಗಳಿಗೆ ಸಂಪರ್ಕ ಪಡೆದಿದ್ದ ಸರ್ವೀಸ್ ಕೇಬಲ್ ಇದಾಗಿತ್ತು. ಈ ಹಿಂದೆ ಇಲ್ಲಿನ ಯಾರೋ ಸಂಪರ್ಕ ಪಡೆದಿದ್ದ ಕೇಬಲ್ ಇದು. ಅವರು ಈ ಲೈನ್ ಅನ್ನು ಬಿಟ್ಟು ಬೇರೆ ಲೈನ್ ಮೂಲಕ ಸಂಪರ್ಕ ಪಡೆದ ಸಂದರ್ಭದಲ್ಲಿ ಇದರ ತೆರವಿಗೆ ಗಮನ ನೀಡಬೇಕಿತ್ತು. ಈ ಕೇಬಲ್ ಲೈನ್‌ನಿಂದ ಇಲ್ಲಿನ ಯಾವುದೇ ಮಳಿಗೆಗೆ ಸಂಪರ್ಕ ಇರಲಿಲ್ಲ ಆದರೆ ಸೆಸ್ಕ್ ಲೈನ್‌ಗೆ ಇದು ಸಂಪರ್ಕ ಹೊಂದಿತ್ತು. ಹಾಗಾಗಿ ಟೈಲ್ಸ್ ಕೆಲಸ ಮಾಡಿದ ಸಂದರ್ಭದಲ್ಲಿ ಹೆಚ್ಚು ಹಾನಿಗೊಳಗಾಗಿ ಸಮಸ್ಯೆ ಉಂಟಾಗಿತ್ತು ಎಂದು ತಿಳಿಸಿದರು.

ಸಮಸ್ಯೆ ಇದ್ದ ಸರ್ವೀಸ್ ಲೈನ್ ಕೇಬಲ್ ಅನ್ನು ನಿಷ್ಕ್ರಿಯ ಮಾಡಲಾಗಿದೆ. ಹೀಗಾಗಿ ಮುಂದೆ ತೊಂದರೆ ಇಲ್ಲ. ಈ ಹಿಂದೆ ಸದರಿ ಲೈನ್‌ನಲ್ಲಿ ವಿದ್ಯುತ್ ಸಂಪರ್ಕ ಪಡೆದವರು ಕೇಬಲ್ ಅನ್ನು ಲೋಹದ ಪೈಪ್ ಒಳಗೆ ಸೇರಿಸಿ ಸಂಪರ್ಕ ಪಡೆಯಬೇಕಿತ್ತು. ಆದರೆ ಇಲ್ಲಿ ಕೇವಲ ಕೇಬಲ್ ಅನ್ನೇ ಹಾಕಿಸಿದ್ದರು. ಲೋಹದ ಪೈಪ್ ಬಳಸಿದ್ದರೆ ಈ ರೀತಿ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಜೊತೆಗೆ ಭೂಮಿಯಿಂದ 3 ಅಡಿ ಒಳಗೆ ಕೇಬಲ್ ಲೈನ್ ಹೋಗಬೇಕು. ಆದರೆ ಇಲ್ಲಿ ಕೆಳಗೆ ಮೋರಿ ಇದ್ದ ಕಾರಣ ಹಾಗೆ ಮಾಡಿರಲಿಲ್ಲ ಎಂದು ಹೇಳಿದರು.

ಸ್ಪಂದನೆ ಇಲ್ಲದ ಸೆಸ್ಕ್ ಸಹಾಯವಾಣಿ...

'ಸೆಸ್ಕ್‌ನ ಗ್ರಾಹಕರ ಸಹಾಯವಾಣಿ 1912' ಸುಧಾರಣೆ ಆಗಬೇಕೆಂಬ ಒತ್ತಾಯ ಕೇಳಿಬಂದಿದೆ. ಎಷ್ಟೇ ಕರೆ ಮಾಡಿದರೂ ಸ್ಪಂದನೆ ಇಲ್ಲ ಎಂಬ ದೂರು ಹೇಳಿಬಂದಿದೆ. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ದೇವರಾಜ ಅರಸು ರಸ್ತೆಯ ಮಳಿಗೆಯೊಂದರ ಮಾಲೀಕ ಪ್ರದೀಪ್‌ಸಿಂಗ್, ಇದಕ್ಕೆ ಕರೆ ಮಾಡಿದರೆ ಸ್ವೀಕರಿಸಲ್ಲ. ಒಂದು ವೇಳೆ ಸ್ವೀಕರಿಸಿದರೂ ಮಾತೇ ಆಡುವುದಿಲ್ಲ. ನಮ್ಮ ಮಳಿಗೆ ಎದುರಿನ ಫುಟ್‌ಪಾತ್‌ನಲ್ಲಿ ವಿದ್ಯುತ್ ಕೇಬಲ್‌ನಿಂದ ಹೊಗೆ ಬರುತ್ತಿದ್ದ ಬಗ್ಗೆ ದೂರು ಹೇಳಲು ಹಲವು ಬಾರಿ ಕರೆ ಮಾಡಿದ್ದೂ ಪ್ರಯೋಜನವಾಗಲಿಲ್ಲ. ನನಗೆ ತಿಳಿದಂತೆ ಸಾಕಷ್ಟು ಮಂದಿಗೆ ಈ ಸಹಾಯವಾಣಿಯಿಂದ ಇದೇ ರೀತಿಯ ಅನುಭವ ಆಗಿದೆ ಎಂದು ಆರೋಪಿಸಿದರು.

ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನ ಗೆಲ್ಲಬೇಕು

ನೂತನ ಸಚಿವರಿಗೆ ಟಾರ್ಗೆಟ್ ಫಿಕ್ಸ್ ಮಾಡಿದ ಸಿಎಂ

ಬೆಂಗಳೂರು, ಮೇ 28– ಪೂರ್ಣ ಪ್ರಮಾಣದ ಸರ್ಕಾರ ರಚಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಂಪುಟದ ಎಲ್ಲಾ ಸಚಿವರಿಗೂ ಲೋಕಸಭೆ ಚುನಾವಣೆಯಲ್ಲಿ ಒಟ್ಟು 28 ಸ್ಥಾನಗಳ ಪೈಕಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲಬೇಕು ಎಂದು ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ.



ಸಿಎಂ ಸಿದ್ದರಾಮಯ್ಯ ಅವರು ಶನಿವಾರ 24 ಹೊಸ ಸಚಿವರನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಸಂಪುಟದ ಎಲ್ಲಾ 34 ಸ್ಥಾನಗಳನ್ನು ಭರ್ತಿ ಮಾಡಿದ್ದಾರೆ. ಇನ್ನು ಒಂದು ವರ್ಷದಲ್ಲಿ ಲೋಕಸಭೆ ಚುನಾವಣೆ ಬರಲಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ವರಿಷ್ಠರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರಿಗೆ ಉಡುಗೊರೆಯಾಗಿ ಕನಿಷ್ಠ 20 ಲೋಕಸಭಾ ಕ್ಷೇತ್ರಗಳನ್ನಾದರೂ ಗೆಲ್ಲಲೇಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಈ ಗುರಿಯನ್ನು ಇಟ್ಟುಕೊಂಡು ಬದ್ಧತೆ, ಪ್ರಾಮಾಣಿಕತೆ ಮತ್ತು ಚಾಣಾಕ್ಷತನದಿಂದ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಮುಖ್ಯಮಂತ್ರಿಗಳು ಸಚಿವರುಗಳಿಗೆ ಸೂಚನೆ ನೀಡಿದ್ದಾರೆ ಎಂದು ಸಿಎಂ ಕಚೇರಿಯ ಪ್ರಕಟಣೆ ತಿಳಿಸಿದೆ. ನಾವು ನೀಡಿರುವ ಭರವಸೆಗಳು ಜನರಿಗೆ ತಲುಪುವಂತೆ ಪ್ರಾಮಾಣಿಕವಾಗಿ ಶ್ರಮಿಸಬೇಕು, ಹಿಂದಿನ ತಪ್ಪುಗಳು ಈ ಬಾರಿ ಮರುಕಳಿಸಬಾರದು ಎಂದು ಅವರು ಸಿಎಂ ಎಚ್ಚರಿಕೆ ನೀಡಿದ್ದಾರೆ.

ನಾಡಿನ ಜನತೆ ಅಭೂತಪೂರ್ವ ಬಹುಮತದಿಂದ ಗೆಲ್ಲಿಸಿ ನಮಗೆ ಬಹಳ ದೊಡ್ಡ ಜವಾಬ್ದಾರಿ ನೀಡಿದ್ದಾರೆ. ಅವರ ನಿರೀಕ್ಷೆಗೆ ತಕ್ಕಂತೆ ಜನಪರ ಆಡಳಿತ ನೀಡಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ಜನರ ಸಮಸ್ಯೆಗಳನ್ನು ಕೇಳಿಸಿಕೊಳ್ಳಿ. ತಮ್ಮ ತಮ್ಮ ಕ್ಷೇತ್ರದಲ್ಲೇ ಸಮಸ್ಯೆ ಬಗೆಹರಿಸಲು ಬೇಕಾದ ಕ್ರಿಯಾಶೀಲತೆಯನ್ನು ರೂಢಿಸಿಕೊಳ್ಳಿ. ಸಣ್ಣ ಪುಟ್ಟ ಕೆಲಸಗಳಿಗೂ ಕ್ಷೇತ್ರದ ಜನ ಸರ್ಕಾರಿ ಕಚೇರಿಗಳಿಗೆ ಪದೇ ಪದೆ ಅಲೆಯುವುದನ್ನು ತಪ್ಪಿಸಿ. ಜನರು ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳಲು ಬಸ್ಸು, ರೈಲು ಹತ್ತಿಕೊಂಡು ವಿಧಾನಸೌಧಕ್ಕೆ ಬರುವ ಹೊರೆಯನ್ನು ತಪ್ಪಿಸಿ ಎಂದು ಸಿಎಂ ಸೂಚಿಸಿದ್ದಾರೆ.

ನೂತನ ಸಂಸತ್ ಭವನದಲ್ಲಿ 'ಅಖಂಡ ಭಾರತ' ನಕ್ಷೆ, 'ಸಂಕಲ್ಪ ಸ್ಪಷ್ಟ': ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಟ್ವೀಟ್

ನವದೆಹಲಿ, ಮೇ 28– ಇಂದು ಲೋಕಾರ್ಪಣೆಯಾದ ನೂತನ ಸಂಸತ್ ಭವನದ ಗೋಡೆಗಳ ಮೇಲೆ ಚಿತ್ರಿಸಲಾಗಿರುವ ಹಲವು ಚಿತ್ರಣಗಳು ಇದೀಗ ಎಲ್ಲರ ಗಮನ ಸೆಳೆಯುತ್ತಿದ್ದು ಪ್ರಮುಖವಾಗಿ ಅಖಂಡ ಭಾರತದ ಚಿತ್ರಣ ಇದೀಗ ಎಲ್ಲರ ಗಮನ ಕೇಂದ್ರೀಕರಿಸಿದೆ.



ಇದೇ ವಿಚಾರವಾಗಿ ಕೇಂದ್ರ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಅವರು, 'ಭಾರತದ ಸಂಕಲ್ಪ ಸ್ಪಷ್ಟವಾಗಿದೆ. ಅಖಂಡ ಭಾರತ ಎಂದು ಟ್ವೀಟ್ ಮಾಡಿದ್ದಾರೆ. ಬಿಜೆಪಿ ಕರ್ನಾಟಕ ಘಟಕ ಕೂಡಾ ತನ್ನ ಟ್ವಿಟ್ಟರ್ ಖಾತೆಯಲ್ಲಿ ಇದೇ ಫೋಟೋ ಪ್ರಕಟಿಸಿದೆ. ಜೊತೆಯಲ್ಲೇ ಚಾಣಕ್ಯ, ಸರ್ದಾರ್ ವಲ್ಲಭಭಾಯ್ ಪಟೇಲ್, ಬಿ. ಆರ್. ಅಂಬೇಡ್ಕರ್ ಅವರ ಚಿತ್ರಣಗಳನ್ನೂ ಪ್ರಕಟಿಸುವ ಜೊತೆಯಲ್ಲೇ ಭಾರತದ ಸಾಂಸ್ಕೃತಿಕ ವೈವಿಧ್ಯತೆ ಬಿಂಬಿಸುವ ಫೋಟೋಗಳನ್ನೂ ಪ್ರಕಟಿಸಿದೆ.

ಇವೆಲ್ಲವೂ ಭಿತ್ತಿಚಿತ್ರದ ರೂಪದಲ್ಲಿ ನೂತನ ಸಂಸತ್ ಭವನದ ಗೋಡೆಗಳ ಮೇಲೆ ರಾರಾಜಿಸುತ್ತಿವೆ. ನೂತನ ಸಂಸತ್ ಭವನದ ಒಳಾಂಗಣ ವಿನ್ಯಾಸದ ಕೆಲ ಚಿತ್ರಗಳು ಎಂದು ವಿವರಿಸಿರುವ ಕರ್ನಾಟಕ ಬಿಜೆಪಿ, ಇದು ನಮ್ಮ ಹೆಮ್ಮೆಯ ಭವ್ಯ ನಾಗರಿಕತೆಯ ಜೀವಂತಿಕೆಯ ಸಂಕೇತ ಎಂದು ಬಣ್ಣಿಸಿದೆ. ಅಷ್ಟೇ ಅಲ್ಲ, ಪ್ರಧಾನಿ ಮೋದಿ ಅವರಿಗೆ ಧನ್ಯವಾದಗಳನ್ನೂ ಅರ್ಪಿಸಿದೆ.

ಅಖಂಡ ಭಾರತದ ಚಿತ್ರಣವನ್ನು ನೂತನ ಸಂಸತ್ ಭವನದ ಗೋಡೆಗಳ ಮೇಲೆ ಕಲಾವಿದರು ಅರಳಿಸಿದ್ದು, ಭಾರತವನ್ನು ಆಳಿದ ರಾಜ ಮನೆತನಗಳು ಸೇರಿದಂತೆ ಹಲವು ವಿವರಗಳಿವೆ. ಅಖಂಡ ಭಾರತದಲ್ಲಿ ಇಂದಿನ ಪಾಕಿಸ್ತಾನ ಕೂಡಾ ಸೇರಿರೋದು ಗಮನಾರ್ಹ. ರಾಷ್ಟ್ರೀಯ ಆಧುನಿಕ ಕಲಾ ಗ್ಯಾಲರಿಯ ನಿರ್ದೇಶಕರಾದ ಅದ್ವೈತ್ ಗದಾನಾಯಕ್ ಅವರು ಅಖಂಡ ಭಾರತ ಪರಿಕಲ್ಪನೆ ಕುರಿತಾಗಿ ವಿವರಿಸಿದ್ದಾರೆ. ಈ ಕಲೆಯ ಹಿಂದೆ ಪ್ರಾಚೀನ ಭಾರತದ ಪ್ರಭಾವ ಇದೆ ಎಂದರು. ಈ ಚಿತ್ರಣದಲ್ಲಿ ಈಗಿನ ಅಫ್ಘಾನಿಸ್ತಾನ, ಪಾಕಿಸ್ತಾನ ಸೇರಿದಂತೆ ಆಗ್ನೇಯ ಏಷ್ಯಾದ ಹಲವು ರಾಷ್ಟ್ರಗಳನ್ನು ಸೇರಿಸಲಾಗಿದೆ ಎಂದು ಹೇಳಿದರು. ನೂತನ ಸಂಸತ್ ಭವನ ಕಟ್ಟಡದ ಒಳಗೋಡೆಯಲ್ಲಿ ಅಳವಡಿಸಲಾಗಿರುವ ಕಲಾಕೃತಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಗದಾನಾಯಕ್ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಕಾರ ಅಖಂಡ ಭಾರತ ಪರಿಕಲ್ಪನೆಯು ಅವಿಭಜಿತ ಭಾರತ ಭೂಖಂಡವನ್ನ ಪ್ರತಿನಿಧಿಸುತ್ತದೆ. ಇಂದಿನ ಅಫ್ಘಾನಿಸ್ತಾನ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಮಯನ್ಮಾರ್ ಹಾಗೂ ಥೈಲ್ಯಾಂಡ್ ದೇಶಗಳು ಪ್ರಾಚೀನ ಅಖಂಡ ಭಾರತ ಪರಿಕಲ್ಪನೆ ಅಡಿ ಬರುತ್ತವೆ.

ಡಾ.ಎಸ್.ಎ.ಮೋಹನ್ ಅವರಿಗೆ ರಾಷ್ಟ್ರೀಯ ಪ್ರಶಸ್ತಿ

ಮೈಸೂರು, ಮೇ 28– ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ ಡಾ. ಎಸ್.ಎ.ಮೋಹನ್ ಕೃಷ್ಣ ಅವರು ನವದೆಹಲಿಯ ರಾಷ್ಟ್ರೀಯ ಸಾಧಕರ ಮಾನ್ಯತಾ ವೇದಿಕೆ ಕೊಡ ಮಾಡುವ ರಾಷ್ಟ್ರೀಯ ಶೈಕ್ಷಣಿಕ ಶ್ರೇಷ್ಠ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಬೋಧನೆ ಮತ್ತು ಸಂಶೋಧನೆ ಸೇರಿದಂತೆ ಒಟ್ಟಾರೆ ಶೈಕ್ಷಣಿಕ ಸಾಧನೆ ಪರಿಗಣಿಸಿ ಮೋಹನ್ ಕೃಷ್ಣ ಅವರಿಗೆ ಪ್ರಶಸ್ತಿ ನೀಡಿ, ಗೌರವಿಸಲಾಗಿದೆ. ಇವರಿಗೆ ಹಲವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಸಂದಿದ್ದು, ಇತ್ತೀಚೆಗೆ ಎರಡು ಪ್ರತಿಷ್ಠಿತ ಸಂಸ್ಥೆಗಳಿಂದ ರಾಜ್ಯೋತ್ಸವ ಮತ್ತು ಆರ್ಯಭಟ್ಟ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಗಿದೆ.

ಮೇ 31ರಂದು ಶಾಲೆಗಳ ಪುನಾರಂಭ; ಇಂದು ಸಿದ್ಧತೆ

ಮೈಸೂರು, ಮೇ 28(ಎಸ್‌ಬಿಡಿ)– 2023–24ನೇ ಸಾಲಿನ ಶೈಕ್ಷಣಿಕ ಕಾರ್ಯಕ್ರಮ ನಾಳೆ(ಮೇ 29)ಯಿಂದ ಆರಂಭವಾಗಲಿದ್ದು, ಮೇ 31ರಂದು ಮಕ್ಕಳನ್ನು ಶಾಲೆಗೆ ಆತ್ಮೀಯವಾಗಿ ಬರಮಾಡಿಕೊಳ್ಳಲು ಸಿದ್ಧತೆ ಮಾಡಿಕೊಳ್ಳಲಾಗುತ್ತದೆ.

ಪ್ರಸಕ್ತ ಶೈಕ್ಷಣಿಕ ವರ್ಷವನ್ನು 'ಗುಣಾತ್ಮಕ ಶೈಕ್ಷಣಿಕ ವರ್ಷ'ವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಈ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ನಾಳೆ(ಮೇ 29) ಸಿದ್ಧತೆ, ಮೇ 30ರಂದು ಪೂರ್ವಭಾವಿ ಸಭೆ ನಡೆಸಿ ಮೇ 31ರಂದು ವಿದ್ಯಾರ್ಥಿಗಳನ್ನು ಶಾಲೆಗೆ ಸ್ವಾಗತಿಸಲಾಗುತ್ತದೆ. ಅಂದು ಶಾಲೆಗಳನ್ನು ತಳಿರು ತೋರಣದಿಂದ ಸಿಂಗರಿಸಿ, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಎಸ್‌ಡಿಎಂಸಿ ಸದಸ್ಯರನ್ನು ಆಹ್ವಾನಿಸಿ, ಡೋಲು, ನಗಾರಿ, ಎತ್ತಿನಗಾಡಿ ಮೂಲಕ ಮಕ್ಕಳನ್ನು ಕರೆತಂದು ಅವರಿಗೆ ಗುಲಾಬಿ ನೀಡಿ, ಸಿಹಿ ಹಂಚಿ ಸಂಭ್ರಮದಿಂದ ಶಾಲೆಗೆ ಬರಮಾಡಿಕೊಳ್ಳಲು ಯೋಜಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಒಟ್ಟು 3446 ಶಾಲೆಗಳಿದ್ದು, ಪ್ರಸಕ್ತ ಸಾಲಿಗೆ ಒಂದನೇ ತರಗತಿಗೆ ದಾಖಲಾಗುವ ಮಕ್ಕಳ ಮಾಹಿತಿಯನ್ನು ಎಸ್‌ಎಟಿಎಸ್ ತಂತ್ರಾಂಶದಲ್ಲಿ ದಾಖಲಿಸಲು ಸೂಚಿಸಲಾಗಿದೆ. ಒಂದರಿಂದ 3ನೇ ತರಗತಿವರೆಗಿನ ಮಕ್ಕಳಿಗೆ ಜೂ.1ರಿಂದ 40 ದಿನಗಳ ವಿದ್ಯಾ ಪ್ರವೇಶ ಕಾರ್ಯಕ್ರಮದಡಿ ಎಫ್‌ಎಲ್‌ಎನ್, ಸೇತುಬಂಧ ಚಟುವಟಿಕೆ ಮತ್ತು ಮೂಲ ಕಲಿಕಾಂಶ ಆಧಾರಿತ ಕಲಿಕೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಬಾರಿ ಅಧಿಕ ಮಳೆ ಸಾಧ್ಯತೆ ಇರುವುದರಿಂದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು, ಸೆಸ್ಕ್ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಸೂಕ್ತ ನಿರ್ದೇಶನ ನೀಡಿದ್ದಾರೆ. ಮಳೆಹಾನಿ ಸಂಬಂಧ ಜಿಲ್ಲಾ ಮತ್ತು ತಾಲೂಕು ತಂಡ ರಚನೆ ಮಾಡಲಾಗಿದೆ. ಶಾಲೆ ಬಳಿ ಇರುವ ದುರ್ಬಲ ಮರಗಳ ತೆರವು, ಕೊಠಡಿಗಳ ಸುಸ್ಥಿತಿ ಪರಿಶೀಲನೆಗೆ ಸೂಚನೆ ನೀಡಿದ್ದಾರೆ.

ಕೊನೆಗೂ ಪಾಸ್‌ಪೋರ್ಟ್ ಪಡೆದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ

ಇಂದು ಅಮೆರಿಕಕ್ಕೆ ಪ್ರಯಾಣ

ನವದೆಹಲಿ, ಮೇ 28– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸಾಮಾನ್ಯ ಪಾಸ್‌ಪೋರ್ಟ್ ನೀಡಲು ಯಾವುದೇ ಆಕ್ಷೇಪಣೆ ಇಲ್ಲ ಎಂದು ಸ್ಥಳೀಯ ನ್ಯಾಯಾಲಯ ತಿಳಿಸಿದ್ದು, ಭಾನುವಾರ ಅವರಿಗೆ ಹೊಸ ಪಾಸ್‌ಪೋರ್ಟ್ ಲಭ್ಯವಾಗಿದೆ. ಭಾನುವಾರ ಬೆಳಗ್ಗೆ ವೇಳೆಗೆ ಪಾಸ್‌ಪೋರ್ಟ್ ನೀಡಲಾಗುವುದು ಎಂದು ಪಾಸ್‌ಪೋರ್ಟ್ ಕಚೇರಿ ರಾಹುಲ್ ಗಾಂಧಿಗೆ ಭರವಸೆ ನೀಡಿತ್ತು ಮತ್ತು ಅವರು ಅದನ್ನು ಮಧ್ಯಾಹ್ನ ಪಡೆದರು.



'ಮೋದಿ' ಉಪನಾಮ ಕುರಿತು ನೀಡಿದ್ದ ಮಾನಹಾನಿ ಹೇಳಿಕೆ ಸಂಬಂಧ ದಾಖಲಾಗಿದ್ದ ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿ ಶಿಕ್ಷೆಗೆ ಗುರಿಯಾಗಿದ್ದು, ಲೋಕಸಭೆ ಸದಸ್ಯತ್ವದಿಂದಲೂ ಅನರ್ಹಗೊಂಡಿದ್ದಾರೆ. ಇದರಿಂದಾಗಿ ತಮ್ಮ ರಾಜತಾಂತ್ರಿಕ ಪಾಸ್‌ಪೋರ್ಟ್ ಮತ್ತು ದಾಖಲೆಗಳನ್ನು ಕೋರ್ಟ್‌ಗೆ ಒಪ್ಪಿಸಿದ್ದಾರೆ. ಹೀಗಾಗಿ, ಸಾಮಾನ್ಯ ಪಾಸ್‌ಪೋರ್ಟ್ ಪಡೆಯಲು ಎನ್‌ಒಸಿ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ನಾಳೆ (ಮೇ 29) ಅಮೆರಿಕಾಗೆ ತೆರಳಲಿರುವ ರಾಹುಲ್ ಗಾಂಧಿ ಪ್ರತಿಷ್ಠಿತ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ವಾಷಿಂಗ್ಟನ್ ಡಿಸಿಯಲ್ಲಿ ಶಾಸಕರು ಮತ್ತು ಚಿಂತಕರೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ.

IIFA Awards: 'ದೃಶ್ಯಂ–2' ಅತ್ಯುತ್ತಮ ಚಿತ್ರ: ಹೃತಿಕ್–ಆಲಿಯಾ ಅತ್ಯುತ್ತಮ ನಟ, ನಟಿ



ಮುಂಬೈ, ಮೇ 28– ಅಜಯ್ ದೇವಗನ್ ಮುಖ್ಯ ಭೂಮಿಕೆಯಲ್ಲಿರುವ ಹಿಂದಿಯ 'ದೃಶ್ಯಂ–2' ಇಂಡಿಯನ್ ಇಂಟರ್ನ್ಯಾಷನಲ್ ಫಿಲ್ಮ್ ಅಕಾಡೆಮಿಯ (ಐಐಎಫ್‌ಎ) ಅತ್ಯುತ್ತಮ ಚಿತ್ರ ಪ್ರಶಸ್ತಿ ಗಳಿಸಿದೆ.

ನಟ ಹೃತಿಕ್ ರೋಷನ್ ಮತ್ತು ನಟಿ ಆಲಿಯಾ ಭಟ್ ಕ್ರಮವಾಗಿ ಅತ್ಯುತ್ತಮ ನಟ ಮತ್ತು ನಟಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅತ್ಯುತ್ತಮ ಹಿಂದಿ ಚಲನಚಿತ್ರಗಳನ್ನು ಗುರುತಿಸಿ, ಗೌರವಿಸುವ ಉದ್ದೇಶದಿಂದ ಪ್ರತಿವರ್ಷ ವಿದೇಶದಲ್ಲಿ ಐಐಎಫ್‌ಎ ಪ್ರಶಸ್ತಿ ಕಾರ್ಯಕ್ರಮ ನಡೆಯುತ್ತದೆ. ಅಬುಧಾಬಿಯ ಯಾಸ್ ದ್ವೀಪದ ಯಾಸ್ ಬೇ ವಾಟರ್‌ಫ್ರಂಟ್‌ನ ಭಾಗವಾದ ಎತಿಹಾಡ್ ಅರೆನಾದಲ್ಲಿ ನಡೆದ ಎರಡು ದಿನಗಳ ಸಂಭ್ರಮಾಚರಣೆಯು ಶನಿವಾರ ರಾತ್ರಿ ಮುಕ್ತಾಯವಾಯಿತು.

ನಿರ್ಮಾಪಕರಾದ ಭೂಷಣ್ ಕುಮಾರ್ ಮತ್ತು ಕುಮಾರ್ ಮಂಗತ್ ಅವರು ಜನಪ್ರಿಯ ಮಲಯಾಳಂ ಚಲನಚಿತ್ರದ ರೀಮೇಕ್ 'ದೃಶ್ಯಂ 2'ಗಾಗಿ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಸ್ವೀಕರಿಸಿದರು.

ಸಂಜಯ್ ಲೀಲಾ ಬನ್ಸಾಲಿಯವರ 'ಗಂಗೂಬಾಯಿ ಕಾಥಿಯಾವಾಡಿ' ಚಿತ್ರದ ಅಭಿನಯಕ್ಕಾಗಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿರುವ ಆಲಿಯಾ ಭಟ್ ಕಾರ್ಯಕ್ರಮಕ್ಕೆ ಗೈರಾಗಿದ್ದರು.

ಆಕ್ಷನ್–ಥ್ರಿಲ್ಲರ್ 'ವಿಕ್ರಮ್ ವೇದ'ದಲ್ಲಿನ ನಟನೆಗಾಗಿ ಹೃತಿಕ್ ರೋಷನ್ ಅತ್ಯುತ್ತಮ ನಟ ಪ್ರಶಸ್ತಿ ಪಡೆದರು. ನಾನು ವೇದ ಚಿತ್ರದ ಜೊತೆ ಹಲವು ವರ್ಷಗಳಿಂದ ಜೀವಿಸುತ್ತಿದ್ದೇನೆ. ಎಲ್ಲವೂ ಅಬುಧಾಬಿಯಿಂದಲೇ ಪ್ರಾರಂಭವಾಯಿತು. ನಾನು 'ವೇದ'ಆಗಿ ನನ್ನ ಮೊದಲ ಶಾಟ್ ಇಲ್ಲಿಯೇ ಚಿತ್ರೀಕರಣವಾಯಿತು. ನನಗೆ ಜೀವನವು ಪೂರ್ಣವಾದಂತೆ ಭಾಸವಾಗುತ್ತಿದೆ ಎಂದ ಹೃತಿಕ್, ನಿರ್ದೇಶಕರಿಗೆ ಧನ್ಯವಾದ ಹೇಳಿದರು.

ರಣಬೀರ್ ಕಪೂರ್ ಮತ್ತು ಆಲಿಯಾ ಭಟ್ ಅಭಿನಯದ 'ಬ್ರಹ್ಮಾಸ್ತ್ರ'ಚಿತ್ರವು ಹಲವು ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದಿದೆ. ಅತ್ಯುತ್ತಮ ಹಿನ್ನೆಲೆ ಗಾಯಕಿಯಾಗಿ ಶ್ರೇಯಾ ಘೋಷಾಲ್, ಅತ್ಯುತ್ತಮ ಹಿನ್ನೆಲೆ ಗಾಯಕರಾಗಿ ಅರಿಜಿತ್ ಸಿಂಗ್ ಪ್ರಶಸ್ತಿ ಗೆದ್ದಿದ್ದಾರೆ. ಅತ್ಯುತ್ತಮ ಸಾಹಿತ್ಯಕ್ಕಾಗಿ ಅಮಿತಾಬ್ ಭಟ್ಟಾಚಾರ್ಯ ಮತ್ತು ಅತ್ಯುತ್ತಮ ಪೋಷಕ ಪಾತ್ರಕ್ಕಾಗಿ ಮೌನಿ ರಾಯ್ ಪ್ರಶಸ್ತಿ ಗೆದ್ದಿದ್ದಾರೆ.

ಹಿರಿಯ ನಟ ಅನಿಲ್ ಕಪೂರ್, 'ಜುಗ್ ಜುಗ್ ಜಿಯೊ' ಚಿತ್ರದ ನಟನೆಗಾಗಿ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಪಡೆದುಕೊಂಡಿದ್ದಾರೆ.

'ರಾಕೆಟ್ರಿ ದಿ ನಂಬಿ ಎಫೆಕ್ಟ್' ಚಿತ್ರದ ನಿರ್ದೇಶನಕ್ಕಾಗಿ ನಟ ಆರ್. ಮಾಧವನ್ ಅತ್ಯುತ್ತಮ ನಿರ್ದೇಶನ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ. ಪರ್ವೇಜ್ ಶೇಖ್ ಮತ್ತು ಜಸ್ಮೀತ್ ರೀನ್ ಅವರು, ಡಾರ್ಲಿಂಗ್ಸ್ ಚಿತ್ರಕ್ಕಾಗಿ ಅತ್ಯುತ್ತಮ ಮೂಲ ಕಥೆ ವಿಭಾಗದಲ್ಲಿ ಪ್ರಶಸ್ತಿ ಪಡೆದಿದ್ದಾರೆ.